
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ 2020 ಮಾಸ ಪತ್ರಿಕೆ


ಸಂಪುಟ/Volume : 42
ಸಂಚಿಕೆ/Issue : 8
ಪುಟ/Pages : 36
ಬೆಲೆ/Price : ₹ 10/–

Akhila Karnataka Shikshaka Samachar | May 2020 | Monthly




ಲ್ಯಾಟಿನ್ ಅಮೇರಿಕಾದ ಗುಟೆಮಾಲಾದಲ್ಲಿ ಬಂಡೆಯ ಮೇಲೆ ಕೆತ್ತಿರುವ ಶ್ರೀ ರಾಮನ ದರ್ಬಾರ್ (ಅಸ್ಥಾನ)

# ರಾಮಾಯಣದ ವಿಶ್ವಭ್ರಮಣ



ಇರಾಕ್‌ನ ಬೃಹತ್ ಬಂಡೆಯ ಮೇಲೆ ಶ್ರೀರಾಮ ಮತ್ತು ಹನುಮಂತ



ಈಜಿಪ್ಟ್‌ನಲ್ಲಿ ರಾಮಾಯಣದ ಪ್ರಭಾವ

A Journal of Karnataka State Secondary Teachers' Association

## ಸಂಪಾದಕೀಯ

### ಹಾಡು... ಹಾಡು ಹಳೆಯದಾದರೇನು, ಭಾವ ನವ-ನವೀನ – ರಾಮಾಯಣ

ಸೀತಾ ರಾಮ್ ಚರಿತ ಅತಿ ಪಾವನ್ ।
ಮಧುರ ಸರಸ್ ಅರು ಅತಿ ಮನಭಾವನ್ ॥
ಪುನಿ ಪುನಿ ಕಿತನೆಹು ಸುನೆ ಸುನಾಯೆ ।
ಹಿಯ ಕೀ ಪ್ಯಾಸ ಭುಜತ ನ ಭುಜಾಯೆ ॥

(ರಾಮಾಯಣದ ಶೀರ್ಷಿಕೆ ಹಾಡಿನ ಸಾಹಿತ್ಯ)

25 ಜನವರಿ 1987 ರಿಂದ 31 ಜುಲೈ 1988 ರವರೆಗೆ ರಮಾನಂದ್ ಸಾಗರ್‌ರವರ ರಾಮಾಯಣ ದೂರದರ್ಶನದಲ್ಲಿ ಪ್ರಸಾರವಾಗಿತ್ತು. ನಾವೆಲ್ಲಾ ಆಗಿನ್ನು ಚಿಕ್ಕವರು. ಮನೆಯಲ್ಲಿ ದೂರದರ್ಶನದ ವ್ಯವಸ್ಥೆಯೂ ಇರಲಿಲ್ಲ. ಬೇರೊಬ್ಬರ ಮನೆಗೆ ಹೋಗಿ ನೋಡಿದರೂ, ತಪ್ಪದೇ ವಾರ-ವಾರ ರಾಮಾಯಣದ ವೀಕ್ಷಣೆ ನಡೆಯುತ್ತಿತ್ತು. ಆ ಪುಷ್ಪಕ ವಿಮಾನ, ಬಾಣ-ಬತ್ತಳಿಕೆಗಳ ಪ್ರಯೋಗ, ಅಶರೀರವಾಣಿ ಎಲ್ಲವೂ ಹೇಗೆ ತಯಾರಾಗುತ್ತಿದ್ದವು ಎಂಬುದು ಗೊತ್ತಿಲ್ಲದೇ, ಬೇರೆಯ ಪ್ರಪಂಚವನ್ನೇ ಸೃಷ್ಟಿಸಿತ್ತು. ರಾಮಾಯಣದ ಕಥೆಯಿಂದಲೇ ಪ್ರೇರೇಪಿತರಾಗಿ ಜೀವನದಲ್ಲಿ ಒಳ್ಳೆಯ ದಾರಿ ತುಳಿದವರು ಅದೆಷ್ಟು ಜನವೋ. ಈಗ ಸಂಕಷ್ಟದ ಲಾಕ್‌ಡೌನ್ ಸಮಯದಲ್ಲಿ ಮಾರ್ಚ್ 28ರಿಂದ ರಾಮಾಯಣ ಮತ್ತೊಮ್ಮೆ ಪ್ರಸಾರವಾದಾಗ, ನಮ್ಮ ಬಾಲ್ಯ ಮತ್ತೆ ಮರುಕಳಿಸಿತೇನೋ ಎನ್ನುವಷ್ಟರ ಮಟ್ಟಿಗೆ ಆನಂದ. ನಾವು ಆಗ ರಾಮಾಯಣ ನೋಡುತ್ತಿದ್ದ ರೀತಿಯೇ ವಿಚಿತ್ರ. ಬಾಣ-ಬತ್ತಳಿಕೆ ಪ್ರಯೋಗಗಳನ್ನು ಅನುಸರಿಸಿ ನಾವು ಅದೆಷ್ಟು ಬಿಲ್ಲು ಬಾಣಗಳನ್ನು ತಯಾರಿಸಿದ್ದೆವೋ? ಎಲ್ಲವೂ ಸ್ಮೃತಿಪಟಲದಲ್ಲಿ ಹರಿದಾಡಿದವು. ರಾಮಾಯಣ ಅಂದಿಗೂ-ಇಂದಿಗೂ-ಎಂದೆಂದಿಗೂ ಲೋಕಪ್ರಿಯ.

ಅಂದು ಕೇವಲ ಮನೋರಂಜನೆಗಾಗಿ ರಾಮಾಯಣವನ್ನು ನೋಡಿ ಸುಮ್ಮನಾಗಿದ್ದರೆ, ಇಂದು ಪ್ರತಿಯೊಂದು ಕಂತು, ಪ್ರಸಂಗ, ಘಟನೆ, ಉಪಕಥೆಗಳು ವಿಚಾರವಿಮರ್ಶೆಗೆ ಒಳಪಡುತ್ತಿದ್ದವು. ರಾಮಾಯಣ ಪ್ರತಿಯೊಬ್ಬರ ಸುಜೀವನ ಕಟ್ಟುವಲ್ಲಿ ಎಷ್ಟೊಂದು ಸಶಕ್ತ. ಪ್ರತಿಯೊಂದು ಪಾತ್ರಗಳಿಂದಲೂ ಅನೇಕ ಜೀವನ ಪಾಠಗಳು ಲಭಿಸುತ್ತವೆ.

ರಾಮಾಯಣವನ್ನು ಅದೆಷ್ಟೋ ಬಾರಿ ಓದಿರುತ್ತೇವೆ. ಅನೇಕ ಕವಿಗಳ ರಾಮಾಯಣವನ್ನು ಓದಿರುತ್ತೇವೆ. ಆದರೆ ದೃಕ್‌ಶ್ರವಣೋಪಕರಣದ ಮೂಲಕ ನೋಡಿದ ರಾಮಾಯಣ ನಮ್ಮ ಸ್ಮೃತಿಪಟಲದಲ್ಲಿ ಅಚ್ಚಳಿಯದಂತೆ ಉಳಿಯುತ್ತದೆ. ಹಳೆಯ ಹಾಡಿನಿಂದಲೇ ಹೊಸತು ಜೀವನ ಕಟ್ಟೋಣವೇ?

---

ಮತ್ತೊಮ್ಮೆ ರಾಮಾಯಣ ವೀಕ್ಷಿಸಿದ ನಮ್ಮ ಸಂಪಾದಕೀಯ ತಂಡ ಉತ್ಸುಕರಾಗಿ ಮೇ ಸಂಚಿಕೆಯನ್ನು ವಿಶೇಷ ರಾಮಾಯಣ ಸಂಚಿಕೆ ಮಾಡಲು ತೀರ್ಮಾನಿಸಿತು. ವಿಶೇಷ ರಾಮಾಯಣ ಸಂಚಿಕೆ ಮಾಡಬೇಕೆಂದು ತೀರ್ಮಾನಿಸಿ ಲೇಖನಗಳನ್ನು ಪ್ರತಿಯೊಬ್ಬರಿಗೂ ನಿಗದಿಗೊಳಿಸಿತು. ಲೇಖನಗಳು ತಯಾರಾಗಿ ಬಂದ ಮೇಲೆ ನೋಡಿದರೆ ಲೇಖನಗಳು ಸಹ ಹನುಮಂತನ ಬಾಲದಂತೆಯೇ ಬೆಳೆದಿವೆ. ಲೇಖಕರ ಉತ್ಸಾಹ, ವಿಚಾರ ಹಿರಿತನ ನೋಡಿ ನನಗಂತೂ ಸೋಜಿಗವೇ ಆಗಿದೆ. ಅವರ ಉತ್ಸಾಹಕ್ಕೆ ನೀರೆರೆಯಬೇಕಾಗಿರುವುದು ನಮ್ಮ ಸಹೃದಯ ಓದುಗರದ್ದೇ ಅಲ್ಲವೇ? ಅವರ ಲೇಖನಗಳ ಬಗ್ಗೆ ವಿಚಾರವಿಮರ್ಶೆ ಮಾಡಿ, ತಾವೆಲ್ಲಾ ತಮ್ಮ ಅಮೂಲ್ಯ ಅಭಿಪ್ರಾಯ ತಿಳಿಸಿದರೆ ಅವರಿಗೂ ಪ್ರೋತ್ಸಾಹ ನೀಡಿದಂತಲ್ಲವೇ? ಉತ್ತಮ ವಿಚಾರವಿಮರ್ಶೆಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಸಂಪಾದಕ

## ಸೂಕ್ತಿ

ಅಪಿ ಸ್ವರ್ಣಮಯಿ ಲಂಕಾ
ನ ಮೇ ಲಕ್ಷ್ಮಣ ರೋಚತೇ ।
ಜನನೀ ಜನ್ಮ ಭೂಮಿಶ್ಚ
ಸ್ವರ್ಗಾದಪಿ ಗರೀಯಸಿ ॥

- ರಾಮಾಯಣ

## ಪರಿವಿಡಿ


- ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಿರುಪರಿಚಯ 3
- ಶ್ರೀರಾಮ ಸಮಾಜದ ದಾರಿದೀಪ 4
- ರಾಮಾಯಣ ಪಾತ್ರ ಪರಿಚಯದಲ್ಲಿ – ಸೀತೆ 7
- ಶಿಕ್ಷಕನ ಮಹತ್ತ್ವ 9
- ಆಂಜನೇಯನ ಆದರ್ಶ ವ್ಯಕ್ತಿತ್ವ 10
- ಅಮ್ಮನೆಂಬ ಮಹಾಪದವಿ 11
- ಧರ್ಮದ ಅಲೆ – ಊರ್ಮಿಳೆ 12
- ರಾಮಾಯಣದಲ್ಲಿ ಋಷಿಗಳ ವೈಭವ 14
- ಗಾಂಧಿ ಕಂಡ ರಾಮರಾಜ್ಯ 16
- ಸಂಘದ ವಾರ್ತೆ 17
- ಪ್ರಾಚೀನ ಭಾರತದ ಗಡಿಗಳನ್ನು ಅರಿಯಲು ರಾಮಾಯಣವೇ ರಾಮ ಬಾಣ 18
- ರಾಜ್ಯ ಮಹಿಳಾ ವಿಭಾಗದ ಸಭೆ 19
- ಪ್ರಾಚೀನ ಕವಿಗಳ ದೃಷ್ಟಿಯಲ್ಲಿ ರಾಮ 20
- ರಾಮಾಯಣದ ವಿಶ್ವಭ್ರಮಣ 28
- My Experience Viewing Ramayana 33
- ಚಿತ್ರಸುದ್ದಿ 34

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಿರುಪರಿಚಯ

ಶಿಕ್ಷಕರು ಯಾವುದೇ ರೀತಿಯ ದಮನಕ್ಕೆ ಒಳಗಾಗದೇ ತಮ್ಮ ಕರ್ತವ್ಯಗಳನ್ನು ಶ್ರದ್ಧೆಯಿಂದ ಮಾಡುವಂತಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯತೆ ಅರಳಬೇಕು. ವಿದ್ಯಾರ್ಥಿಗಳಲ್ಲಿ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳನ್ನು ತುಂಬಿ ಅವರನ್ನು ಉತ್ತಮ ನಾಗರೀಕರನ್ನಾಗಿ ರೂಪಿಸಬೇಕು. ಇವೆಲ್ಲದರ ಮೂಲಕ ಭಾರತದ ಪುನರುತ್ಥಾನವಾಗಿ ಅದು ವಿಶ್ವಶಕ್ತಿಯಾಗಿ ಹೊರಹೊಮ್ಮಬೇಕು ಎಂಬ ಕನಸನ್ನು ಹೊತ್ತು ಶಿಕ್ಷಣದ ಬಗ್ಗೆ ಅತೀವ ಆಸಕ್ತಿ ಹೊಂದಿದ ನಾಲ್ಕಾರು ಶಿಕ್ಷಕರು, ಸಾಮಾಜಿಕ ಚಿಂತಕರು ಒಗ್ಗೂಡಿ ನಡೆಸಿದ ಚಿಂತನೆಯ ಫಲವಾಗಿ 1965ರಲ್ಲಿ ಶಿಕ್ಷಕ ದಿನಾಚರಣೆಯಂದು ಜನ್ಮತಳೆದ ಕರ್ನಾಟಕದ ಮೊಟ್ಟಮೊದಲನೆಯ ಶಿಕ್ಷಕ ಸಂಘಟನೆಯೇ **'ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ'**.

ನಮ್ಮ ಸಂಘ ತನ್ನ ಐದು ದಶಕಗಳಿಗೂ ಮೀರಿದ ಅಸ್ತಿತ್ವದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನಿರಂತರ ಸೇವೆ ಸಲ್ಲಿಸುತ್ತ ವಿವಿಧ ಬಗೆಯ ಶೈಕ್ಷಣಿಕ ಕಾರ್ಯಕ್ರಮ ಹಾಗೂ ಹೋರಾಟಗಳ ಮೂಲಕ ರಾಷ್ಟ್ರದಲ್ಲಿ ಅಲ್ಲದೇ, ರಾಷ್ಟ್ರಮಟ್ಟದ ಶಿಕ್ಷಕ ಸಂಘಟನೆಗಳಾದ "ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, All India Secondary Teachers Federation" ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕೆನಡಿಯನ್ ಟೀಚರ್ಸ್ ಫೆಡರೇಷನ್ ಮತ್ತು Education International ಎಂಬ ಜಾಗತಿಕ ಶಿಕ್ಷಕ ಸಂಘಟನೆಗಳೊಂದಿಗೆ ಸಂಲಗ್ನಗೊಂಡು ಪ್ರತಿ ಹಂತದಲ್ಲೂ ಹೆಸರು ಮಾಡಿದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವನ್ನು ಪ್ರಾರಂಭದಲ್ಲಿ ಮುನ್ನಡಿಸಿದವರು ಅದರ ಸ್ಥಾಪಕರಲ್ಲಿ ಒಬ್ಬರಾದ ಶ್ರೀ ಕೃ. ನರಹರಿಜಿಯವರು. ಶ್ರೀ ನರಹರಿಯವರು ಬೆಂಗಳೂರಿನ ಬಿ.ಎಮ್.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಯಂತ್ರಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಮೂರು ಬಾರಿ ಶಿಕ್ಷಕ ಕ್ಷೇತ್ರದಿಂದ ಚುನಾಯಿತರಾಗಿ ಸಾವಿರಾರು ಶಿಕ್ಷಕರ ಮನದಲ್ಲಿ ಆದರ್ಶ ಶಾಸಕರೆಂಬ ಹೆಸರನ್ನು ಗಳಿಸಿದವರು. ಆನಂತರದ ಅವಧಿಯಲ್ಲಿ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಹೆಚ್. ನಾಗಭೂಷಣರಾವ್ ಮತ್ತು ಬಸವನಗುಡಿಯ ಹೆಣ್ಣುಮಕ್ಕಳ ಪದವಿಪೂರ್ವ ಕಾಲೇಜಿನ ಉಪಪ್ರಾಂಶುಪಾಲರಾಗಿದ್ದ ಶ್ರೀಮತಿ ಸೀತಾಲಕ್ಷ್ಮಿಯವರು ಹಾಗೂ ಹೆಚ್.ಎ.ಎಲ್ ಪ್ರೌಢಶಾಲೆಯಲ್ಲಿ ವಿಜ್ಞಾನದ ಅಧ್ಯಾಪಕರಾಗಿದ್ದ ಜಿ.ಎಸ್. ಕೃಷ್ಣಮೂರ್ತಿಯವರು ಮುನ್ನಡೆಸಿಕೊಂಡು ಬಂದರು. ಈಗ ಸದ್ಯಕ್ಕೆ ರಾಜ್ಯ ಅಧ್ಯಕ್ಷರಾಗಿ ಹುಬ್ಬಳ್ಳಿಯ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾದ ಶ್ರೀ ಸಂದೀಪ್ ಬೂದಿಹಾಳ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಹಾರೋಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಸಮಾಜ ಶಿಕ್ಷಕರಾದ ಶ್ರೀ ಚಿದಾನಂದ್ ಪಾಟೀಲ್ ಹಾಗು ಸಹಪ್ರಧಾನಕಾರ್ಯದರ್ಶಿಯಾಗಿ ರಾಮನಗರದ ಆವೇರಹಳ್ಳಿ ಪದವಿಪೂರ್ವ ಕಾಲೇಜಿನಲ್ಲಿ ಕಾಮರ್ಸ್ ವಿಭಾಗದ ಅಧ್ಯಾಪಕರು ಶ್ರೀ ಗಂಗಾಧರ್ ಆಚಾರ್ ಇವರ ನೇತೃತ್ವದ ತಂಡ ರಾಜ್ಯದಲ್ಲಿ ಕಾರ್ಯ ಮಾಡುತ್ತಿದೆ.

**ಈವರೆಗಿನ ಸಂಘದ ಸಾಧನೆಗಳಲ್ಲಿ ಪ್ರಮುಖವಾದವು –**

- 1987ರಿಂದ ಚಾಲ್ತಿಯಲ್ಲಿದ್ದ ಶಾಶ್ವತ ಅನುದಾನರಹಿತ ಪದವನ್ನು ಅಳಿಸಿ, ಅನುದಾನರಹಿತ ಶಾಲಾ ಕಾಲೇಜುಗಳಿಗೆ 1994–95ರವರೆಗೆ ಅನುದಾನ ಕೊಡಿಸುವ ಮೂಲಕ 20000 ಶಿಕ್ಷಕರ ಜೀವನಕ್ಕೆ ಆಧಾರವಾಗಿರುವುದು.
- ವೃತ್ತಿ ಶಿಕ್ಷಕರನ್ನು (ಜೆಒಸಿ) ಖಾಯಂಗೊಳಿಸಲು ಒಪ್ಪಿಸಿ ಯಶಸ್ವಿಯಾಗಿದೆ.
- ಪ್ರೌಢಶಾಲಾ ಸಹಶಿಕ್ಷಕರನ್ನು ಮುಖ್ಯ ಶಿಕ್ಷಕ ಹುದ್ದೆಗೆ ಬಡ್ತಿ ನೀಡುವ ಪ್ರಮಾಣವನ್ನು ಶೇ.50ರಿಂದ ಶೇ.75ಕ್ಕೆ ಹೆಚ್ಚಿಸುವಂತೆ ಮಾಡಲಾಗಿದೆ.
- ಅನುದಾನಿತ ಶಾಲಾ ಕಾಲೇಜಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅನುಮತಿ ಕೊಡಿಸಿರುವುದು ಹಾಗೂ ಅನುದಾನರಹಿತ ಶಿಕ್ಷಕರಿಗೆ ಕನಿಷ್ಠ ವೇತನಕ್ಕೆ ಆಗ್ರಹಿಸಲಾಗಿದೆ.
- ಎಸ್.ಎಸ್.ಎಲ್.ಸಿ, ಪಿ.ಯು.ಸಿ ಫಲಿತಾಂಶ ಕಡಿಮೆ ಆಗಿರುವ ಅನುದಾನಿತ ಶಾಲಾ–ಕಾಲೇಜಿಗಳ ಸಿಬ್ಬಂದಿಯ ವೇತನವನ್ನು ತಡೆಹಿಡಿಯುವಂತೆ ನೀಡಿದ ಆದೇಶವನ್ನು ಹಿಂಪಡೆಯುವಂತೆ ಮಾಡಲಾಗಿದೆ.
- ಡಿ.ಎಡ್. ಕಾಲೇಜು ಉಪನ್ಯಾಸಕರಿಗೆ ನೂತನ ವೇತನ ಶ್ರೇಣಿ ಕೊಡಿಸಿರುವುದು.
- ಖಾಸಗಿ ಅನುದಾನರಹಿತ ಡಿ.ಎಡ್. ಕಾಲೇಜುಗಳಿಗೆ ಅನುದಾನ ಕೊಡಿಸಿರುವುದು.
- ಮೊರಾರ್ಜಿ ವಸತಿ ಶಾಲೆಗಳಿಗೆ ರೋಸ್ಟರ್ ಹಾಗೂ ಮೆರಿಟ್ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರನ್ನು ಸಕ್ರಮ ಮಾಡಿಸಿರುವುದು. ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳುವಂತೆ ಮಾಡಿಸಿರುವುದು.
- 60ರ ದಶಕದಲ್ಲೇ ಶಿಕ್ಷಕರಿಗೆ ಚೆಕ್ ಮೂಲಕ ವೇತನ ವಿತರಣೆಗೆ ಹೋರಾಡಿ ಯಶಸ್ಸು ಗಳಿಸಿದ್ದು ನಮ್ಮ ಅತ್ಯುನ್ನತ ಸಾಧನೆ.

2019–20ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನುರಿತ ಅಧ್ಯಾಪಕರಿಂದ "ಪರೀಕ್ಷಾ ತಯಾರಿ" ಎಂಬ ಕಾರ್ಯಕ್ರಮದ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲಾಗಿದೆ. ಆ ಎಲ್ಲಾ ಶಿಕ್ಷಕರ ಸೇವಾ ಮನೋಭಾವನೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಕರೋನಾ ಪೀಡೆ ಇಡೀ ವಿಶ್ವವನ್ನು ಕಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಅನೇಕ ಬಂಧುಗಳು ಜೀವನ ನಿರ್ವಹಣೆಗೆ ಕಷ್ಟಪಡುತ್ತಿರುವುದನ್ನು ಕಂಡು ನಮ್ಮ ಸಂಘವು ಅವರಿಗೆ ಮಾಸ್ಕ್, ಸ್ಯಾನಿಟೈಸರ್, ನಿತ್ಯ ಜೀವನಕ್ಕೆ ಅವಶ್ಯಕವಾದ ದವಸ–ಧಾನ್ಯಗಳನ್ನು ಒದಗಿಸುವುದೂ ಅಲ್ಲದೇ ರೋಗ ಪೀಡಿತರಿಗೆ ರಕ್ತವನ್ನು ನೀಡಲು ರಕ್ತದಾನ ಶಿಬಿರಗಳನ್ನು ಸಹ ಆಯೋಜಿಸಿ, ಸಮಾಜ ಸೇವಾ ಕಾರ್ಯದಲ್ಲಿ ನಮ್ಮ ನೂರಾರು ಶಿಕ್ಷಕರು ಭಾಗಿಗಳಾಗುವಂತೆ ಮಾಡಿದೆವು.

ಶಿಕ್ಷಕರಿಗೆ ಕಾಲ–ಕಾಲಕ್ಕೆ ಅನೇಕ ಶಿಕ್ಷಣ ತಜ್ಞರಿಂದ, ಸ್ವಾಮೀಜಿಗಳಿಂದ ಶಿಕ್ಷಕರಿಗೆ ಪ್ರೇರಣಾದಾಯಕ ಉಪನ್ಯಾಸಗಳನ್ನು ಏರ್ಪಡಿಸಿ, ಅವರ ಮನೋಬಲವನ್ನು ಮತ್ತು ನೈಪುಣ್ಯತೆಯನ್ನು ಹೆಚ್ಚಿಸುವ ಕೆಲಸವನ್ನೂ ಮಾಡಿದ್ದೇವೆ. (ಮುಂದಿನ ಸಂಚಿಕೆಯಲ್ಲಿ ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ವೀರೇಶಾನಂದರ ಉಪನ್ಯಾಸದ ಸಾರಾಂಶವನ್ನು ಓದಲಿದ್ದೀರಿ.)

ಇದಲ್ಲದೆ ಶಿಕ್ಷಕರಿಗಾಗಿ, ಶಿಕ್ಷಕರಿಂದಲೇ ನಡೆಸಲ್ಪಡುತ್ತಿರುವ ನಮ್ಮ ಶಿಕ್ಷಕ ಸಂಘದ ಮುಖವಾಣಿ ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಎಂಬ ಮಾಸಪತ್ರಿಕೆಯನ್ನು ಕಳೆದ 40 ವರ್ಷಗಳಿಗೂ ಮೀರಿ ನಡೆಸಿಕೊಂಡು ಬರುತ್ತಿದ್ದೇವೆ.

# ಶ್ರೀರಾಮ ಸಮಾಜದ ದಾರಿದೀಪ

■ ಶ್ವೇತಾದ್ರಿ
ನಿವೃತ್ತ ಮುಖ್ಯ ಶಿಕ್ಷಕರು

**ರಾ**ಮಾಯಣ ಮತ್ತು ಮಹಾಭಾರತ ನಮ್ಮ ಭರತ ಖಂಡದ ಎರಡು ಶ್ರೇಷ್ಠ ಮಹಾಕಾವ್ಯಗಳು. ನಮ್ಮ ಸಂಸ್ಕೃತಿಯ ಪ್ರತೀಕಗಳೂ ಆಗಿದೆ. ಈ ಮಹಾಕಾವ್ಯಗಳು ಅಂದು, ಇಂದು, ಮುಂದು – ಎಂದೆಂದೂ ಭರತಖಂಡದ, ಅಷ್ಟೇ ಏಕೆ ಜಗತ್ತಿನ ಜನರಿಗೆ ಅವರು ನಡೆಯಬೇಕಾದ ರೀತಿ– ನೀತಿಗಳ ದಾರಿಯನ್ನು ತೋರಿಸುತ್ತಿದೆ. ಮನುಷ್ಯನಿಗೆ ಎರಡು ಕಣ್ಣುಗಳು ಓಡಾಡಲು ಬೆಳಕು ನೀಡಿದರೆ ರಾಮಾಯಣ, ಮಹಾಭಾರತ ಕಾವ್ಯಗಳು ಸಮಾಜದಲ್ಲಿ ವ್ಯಕ್ತಿಯ ನಡವಳಿಕೆಗೆ ಬೆಳಕು ಚೆಲ್ಲುವುದರ ಮೂಲಕ ದಾರಿದೀಪಗಳಾಗಿವೆ. ಆದ್ದರಿಂದಲೇ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳನ್ನು ಭರತಖಂಡದ ಎರಡು ಕಣ್ಣುಗಳೆಂದು ಭಾವಿಸಲಾಗಿದೆ. ಈ ಕಾವ್ಯಗಳಲ್ಲಿ ಬರುವ ಎಲ್ಲಾ ಘಟನೆಗಳು, ಸನ್ನಿವೇಶಗಳು, ಪಾತ್ರಗಳು ಜನರು ಅನುಸರಿಸಬೇಕಾದ ನಡೆ – ನುಡಿಗಳಿಗೆ ಮಾರ್ಗದರ್ಶಿಗಳಾಗಿವೆ.



ರಾಮಾಯಣದಲ್ಲಿ ರಾಮನೇ ನಾಯಕ. ಹಾಗಾಗಿ ಅತ್ಯಂತ ಪ್ರಧಾನ ಪಾತ್ರವೂ ಹೌದು. ಹೆಸರೇ ಸೂಚಿಸುವಂತೆ ರಾಮಾಯಣ ರಾಮನ ಚರಿತೆ. ಈ ಕಾವ್ಯದ ಎಲ್ಲಾ ಸನ್ನಿವೇಶಗಳು, ಘಟನೆಗಳೂ ರಾಮನ ಸುತ್ತ ಹೆಣೆಯಲಾಗಿದೆ. ರಾಮ ಸದ್ಗುಣಗಳ ಗಣಿ, ಮರ್ಯಾದಾ ಪುರುಷೋತ್ತಮ. ಮಾನವನಾಗಿ ಅವನ ನಡೆನುಡಿಗಳೆಲ್ಲವೂ ಆದರ್ಶಪೂರಿತವಾಗಿದ್ದು ಅನುಕರಣೀಯ ಗುಣಗಳಾಗಿವೆ. ರಾಮಾಯಣದ ಪ್ರತಿಯೊಂದು ಘಟನೆ, ಸನ್ನಿವೇಶಗಳಲ್ಲೂ ರಾಮನು ಅನುಸರಿಸಿರುವ ನಡೆ, ಸಮಾಜಕ್ಕೆ ಎಲ್ಲಾ ಕಾಲಕ್ಕೂ ನಿಸ್ಸಂಶಯವಾಗಿ ದಾರಿದೀಪವಾಗಿದೆ. ಶ್ರೀರಾಮ ಹೇಗೆ ಅನುಕರಣೀಯ ಎಂಬುದನ್ನು ರಾಮಾಯಣದ ಕೆಲವು ಘಟನೆಗಳ ಮೂಲಕ ಪುನರ್ಮನನ ಮಾಡುವ ಪ್ರಯತ್ನ ಈ ಲೇಖನ.

ಕೌಸಲ್ಯಾಕುಮಾರನಾದ ರಾಮನು ಬಾಲ್ಯ ಕಳೆದು ಕೌಮಾರಕ್ಕೆ ಕಾಲಿಟ್ಟಾಗ ರಾಜರಿಗೆ ಬೇಕಾದ ಎಲ್ಲ ವಿದ್ಯೆಗಳು, ವಿಶೇಷವಾಗಿ ಧನುರ್ವಿದ್ಯೆಯಲ್ಲಿ ಪಾರಂಗತನಾಗಿ ಎಲ್ಲರ ಅಚ್ಚುಮೆಚ್ಚಾಗಿದ್ದನು. ದಶರಥ ಮಹಾರಾಜನು ಒಮ್ಮೆ ರಾಜಗುರು ವಸಿಷ್ಠರು, ಮಂತ್ರಿಗಳು, ಆಪ್ತರೊಂದಿಗೆ ಮಕ್ಕಳ ವಿವಾಹದ ಬಗೆಗಿನ ಸಮಾಲೋಚನೆಯಲ್ಲಿ ನಿರತನಾಗಿರುವಾಗ ಅನಿರೀಕ್ಷಿತವಾಗಿ ವಿಶ್ವಾಮಿತ್ರರ ಆಗಮನವಾಯಿತು. ತಾವು ಆರಂಭಿಸಲಿರುವ ಯಜ್ಞಕ್ಕೆ ಮಾರೀಚ, ಸುಬಾಹು ರಾಕ್ಷಸರಿಂದ ವಿಘ್ನ ಉಂಟಾಗುತ್ತಿದ್ದು ಅವರನ್ನು ಸಂಹರಿಸಲು ಶ್ರೀರಾಮನೊಬ್ಬನೇ ಸಮರ್ಥನು. ಆದ್ದರಿಂದ ಅವನನ್ನು ತಮ್ಮೊಂದಿಗೆ ಕಳುಹಿಸುವಂತೆ ಕೋರಿದರು. ರಾಮನಿನ್ನೂ ಬಾಲಕನೆಂಬ ಕಾರಣಕ್ಕೆ ಅವನನ್ನು ಕಳುಹಿಸಲು ದಶರಥ ಹಿಂಜರಿದರೂ ವಸಿಷ್ಠರ ಸಲಹೆಯಂತೆ ರಾಮನನ್ನು ವಿಶ್ವಾಮಿತ್ರರೊಂದಿಗೆ ಕಳುಹಿಸಲು ಒಪ್ಪುತ್ತಾನೆ. ಈ ಸಮಯದಲ್ಲಿ ಆಟಪಾಠಗಳಲ್ಲಿ ಕಾಲಕಳೆಯಬೇಕಾಗಿದ್ದ 14 ವರ್ಷದ ಬಾಲಕ ತಂದೆಗೆ ಧೈರ್ಯವನ್ನು ಹೇಳುತ್ತಾನೆ ಹಾಗೂ ತಂದೆಯ ಮಾತಿಗೆ ಮರು ಮಾತನಾಡದೆ ವಿಶ್ವಾಮಿತ್ರರೊಂದಿಗೆ ಪ್ರಯಾಣ ಬೆಳೆಸಿದನು. ಹೀಗೆ ಬೆಳೆಯ ಸಿರಿ ಮೊಳಕೆಯಲ್ಲಿ ಎಂಬಂತೆ ಬಾಲ್ಯದಲ್ಲಿಯೇ ಶ್ರೀರಾಮನು ವಿಧೇಯ ಮಗನಾಗಿ ಪಿತೃವಾಕ್ಯ ಪರಿಪಾಲನೆಯ ಗುಣವನ್ನು ಪಾಲಿಸಿದ್ದಾನೆ.

ವಿಶ್ವಾಮಿತ್ರರೊಂದಿಗೆ ದಟ್ಟವಾದ ಕಾಡಿನಲ್ಲಿ ರಾಮ, ಲಕ್ಷ್ಮಣರು ಸಂಚರಿಸುತ್ತಿದ್ದಾರೆ. ಅದು ತಾಟಕಿಗೆ ಸೇರಿದ ವನವೆಂದೂ ಅವಳು ಮಗ ಮಾರೀಚ ತಪಸ್ವಿಗಳಿಗೆ ಯಮಸ್ವರೂಪರಾದ್ದರಿಂದ ಅವರನ್ನು ಸಂಹರಿಸುವಂತೆ ವಿಶ್ವಾಮಿತ್ರರು ತಿಳಿಸಿದರು. ಅವರು ತಿಳಿಸಿದಂತೆ ತಾಟಕಿಯನ್ನು ಸಂಹಾರ ಮಾಡಿ ರಾಮ, ಲಕ್ಷ್ಮಣರು ವಿಶ್ವಾಮಿತ್ರರ ಕೃಪೆಗೆ ಪಾತ್ರರಾದರು. ನಂತರ ವಿಶ್ವಾಮಿತ್ರರ ಆಶ್ರಮ ತಲುಪಿ ಋಷಿಗಳ ಯಜ್ಞಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದ ಸುಬಾಹುವನ್ನು ಶ್ರೀರಾಮ ಮಾನಸಾಸ್ತ್ರದಿಂದ ಸಂಹರಿಸಿ ಯಜ್ಞ ಸಾಂಗವಾಗಿ ನೆರವೇರುವಂತೆ ಮಾಡಿದರು. ಗುರುಹಿರಿಯರ ಮಾತುಗಳನ್ನು ಗೌರವಿಸಿ ಪಾಲಿಸುವುದರ ಮೂಲಕ ರಾಮ ಲಕ್ಷ್ಮಣರು ಸಮಾಜಕ್ಕೆ ಉತ್ತಮ ಆದರ್ಶ ನೀಡಿದ್ದಾರೆ.

ದಶರಥ ಮಹಾರಾಜನು ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದಾಗ ಮಂಥರೆಯ ಮಾತಿಗೆ ಮರುಳಾದ ಕೈಕೇಯಿ ದಶರಥ ಈ ಹಿಂದೆ ತನಗೆ ಕರುಣಿಸಿದ್ದ ಎರಡು ವರಗಳನ್ನು ಬಳಸಿಕೊಳ್ಳಲು ನಿರ್ಧರಿಸಿ ಭರತನಿಗೆ ಪಟ್ಟಾಭಿಷೇಕ ಮಾಡಬೇಕು ಹಾಗೂ ರಾಮನಿಗೆ 14 ವರ್ಷಗಳ ವನವಾಸವನ್ನು ಆದೇಶಿಸುವಂತೆ ಹಠ ಹಿಡಿಯುತ್ತಾಳೆ. ನಂತರ ಕೈಕೇಯಿ ರಾಮನಿಗೆ ಹೇಳುತ್ತಾಳೆ. "ಪ್ರಿಯ ಪುತ್ರನಾದ ನಿನಗೆ ಅಪ್ರಿಯವಾದ ಮಾತುಗಳನ್ನು ಹೇಳಲು ನಿನ್ನ ತಂದೆಗೆ ನಾಲಿಗೆ ಏಳುತ್ತಿಲ್ಲ. ಆತನ ಮಾತನ್ನು ನಡೆಸುತ್ತೇನೆಂದು ಅಭಿವಚನ ನೀಡಿದರೆ ನಾನು ಎಲ್ಲವನ್ನೂ ಹೇಳುತ್ತೇನೆ". ಆಕೆಯ ಮಾತನ್ನು ಕೇಳಿ ರಾಮನು ಹೀಗೆ ಹೇಳುತ್ತಾನೆ. "ಅಮ್ಮಾ, ತಂದೆಯ ಅಪ್ಪಣೆಯಾಗುವುದಾದರೆ ಬೆಂಕಿಯಲ್ಲಿ ಧುಮ್ಮಿಕ್ಕುವೆನು ; ವಿಷಪಾನ ಮಾಡುವುದಕ್ಕೂ ಹಿಂದುಮುಂದು ನೋಡುವುದಿಲ್ಲ. ನಿನಗೆ ಸ್ವಲ್ಪವೂ ಸಂಶಯ ಬೇಡ. ತಂದೆಯ ಅಪ್ಪಣೆ ಏನೆಂಬುದನ್ನು ಹೇಳು. ಆತನ ಮಾತನ್ನು ನಡೆಸುವೆನೆಂದು ಪ್ರಮಾಣ ಮಾಡಿ ಹೇಳುತ್ತೇನೆ. ರಾಮನು ಎರಡು ಮಾತನಾಡುವವನಲ್ಲ," ನಂತರ ಕೈಕೇಯಿ ತಾನು ಯಾಚಿಸಿದ ಎರಡು ವರಗಳ ಬಗ್ಗೆ ಹೇಳಿ ರಾಮ ಕೃಷ್ಣಾಜಿನ ಧರಿಸಿ 14 ವರ್ಷ ವನವಾಸ ಕೈಗೊಳ್ಳುವಂತೆ ಆಜ್ಞಾಪಿಸಿದಳು. ಕೈಕೇಯಿಯ ಮಾತುಗಳಿಂದ ರಾಮನು ಬೆಚ್ಚದೆ, ಬೆದರದೆ ಶಾಂತನಾಗಿ ತಂದೆಯ ಪ್ರತಿಜ್ಞೆ ನೆರವೇರಿಸುವುದಾಗಿ ಮಾತು ಕೊಡುತ್ತಾನೆ. ಕೈಕೇಯಿ ತನಗೆ ಅಹಿತವನ್ನೇ ಬಯಸಿದರೂ ಅವಳ ವಿರುದ್ಧ ಕೋಪಿಸದೆ ಅವಳ ಮಾತುಗಳನ್ನು

ಪುಟ 5 ಕ್ಕೆ ➢

➢ ಪುಟ 4 ರಿಂದ.....

ಗೌರವಿಸುವುದು ವಿಶೇಷ. 'ಪಿತೃದೇವೋಭವ' ಎಂಬ ಉಪನಿಷತ್ ವಾಕ್ಯದಂತೆ ರಾಮನು ತಂದೆಯ ಇಷ್ಟಾರ್ಥವನ್ನು ನೆರವೇರಿಸುವ ಮೂಲಕ ಪಿತೃವಾಕ್ಯ ಪರಿಪಾಲನೆಯ ಆದರ್ಶಗುಣ ಪರಿಪಾಲನೆಯನ್ನು ಗುರುತಿಸಬಹುದು. ಹಾಗೂ ಹಿರಿಯರನ್ನು ಗೌರವಿಸುವ ಗುಣವನ್ನು ಕಾಣುತ್ತೇವೆ. ರಾಮನ ಈ ಗುಣ ಎಲ್ಲರಿಗೂ ಆದರ್ಶವೇ ಆಗಿದೆ.

ವನವಾಸದ ಆದೇಶ ಹೊತ್ತ ರಾಮ, ಸೀತೆ, ಲಕ್ಷ್ಮಣರು ಪುರಜನರ ಕಣ್ಮರೆಸಿ ಪ್ರಯಾಣವನ್ನು ಮುಂದುವರಿಸಿದರು. ತಮ್ಮ ದೇಶದ ಎಲ್ಲೆಗೆ ಸ್ವಲ್ಪದೂರದಲ್ಲಿ ಹರಿಯುತ್ತಿದ್ದ ಪಾವನಗಂಗಾ ನದಿಯನ್ನು ಸಮೀಪಿಸಿದರು. ಅಲ್ಲಿನ ಪ್ರಶಾಂತ ವಾತಾವರಣದಲ್ಲಿ ಅಂದು ಅಲ್ಲಿಯೇ ತಂಗಲು ನಿರ್ಧರಿಸಿದರು. ಗಂಗಾನದಿಯ ತೀರದ ಕಾಡಿಗೆಲ್ಲ ರಾಜ ಗುಹ ಎಂಬ ಬೇಡ. ತನ್ನ ಪರಮ ಮಿತ್ರ ರಾಮ ಬಂದಿರುವ ಸುದ್ದಿ ಕೇಳಿ ಅಲ್ಲಿಗೆ ಬಂದ ಗುಹ ತನ್ನ ರಾಜ್ಯವನ್ನು ಸ್ವೀಕರಿಸಿ ತಮ್ಮನ್ನೆಲ್ಲಾ ಪರಿಪಾಲಿಸುತ್ತಾ ಅಲ್ಲಿಯೇ ನೆಲೆಸುವಂತೆ ಕೇಳಿಕೊಂಡನು. ಶ್ರೀರಾಮನು ಗುಹನನ್ನು ಗಾಢವಾಗಿ ಆಲಿಂಗಿಸಿಕೊಂಡನು. ಗುಹನ ಸ್ನೇಹದಿಂದ ತಾನು ಬಹಳ ಸಂತುಷ್ಟನಾಗಿದ್ದೇನೆ. ತಾನು ಈಗ ಋಷಿ ಜೀವನವನ್ನು ಕೈಗೊಂಡಿರುವುದರಿಂದ ಅವನ ಕೋರಿಕೆ ನಡೆಸಲಾಗದೆಂದು ತಿಳಿಸಿದನು. ಅಂದು ಅಲ್ಲಿಯೇ ವಿಶ್ರಮಿಸಿ ಮರುದಿನ ನಾವೆಯಲ್ಲಿ ಗಂಗಾನದಿಯನ್ನು ದಾಟಿ ಪ್ರಯಾಣ ಮುಂದುವರೆಸಿದರು. ರಾಮ ಭೂಮಂಡಲದ ಚಕ್ರವರ್ತಿ. ಗುಹ ಕೇವಲ ಕಾಡಿನ ರಾಜ. ಆದರೂ ಬಡವ – ಬಲ್ಲಿದ; ಮೇಲು –ಕೀಳು; ಅಧಿಕಾರ – ಅಂತಸ್ತು ಎಂಬ ಯಾವ ಭೇದವನ್ನೂ ಮಾಡದೆ ನಿರ್ಮಲ ಮನಸ್ಸಿನಿಂದ ಗುಹನನ್ನು ರಾಮ ಆಲಿಂಗಿಸಿಕೊಂಡು ಸ್ನೇಹಕ್ಕೆ ನೀಡಬೇಕಾದ ಮಹತ್ವವನ್ನು ಜಗತ್ತಿಗೆ ತನ್ನ ನಡವಳಿಕೆಯ ಮೂಲಕ ತೋರಿಸಿಕೊಟ್ಟಿದ್ದಾನೆ. ಇದು ಶ್ರೀರಾಮನ ಸೌಶೀಲ್ಯಕ್ಕೆ ಸಾಕ್ಷಿಯಾಗಿದೆ.

ಚಿತ್ರಕೂಟದಲ್ಲಿ ಭರತ ತನ್ನ ಪರಿವಾರದವರೊಡನೆ ಬಂದು ಶ್ರೀರಾಮನನ್ನು ಅಯೋಧ್ಯೆಗೆ ಹಿಂದಿರುಗಿ ರಾಜ್ಯಭಾರ ವಹಿಸಿಕೊಳ್ಳುವಂತೆ ಒತ್ತಾಯಿಸಿ, ಪರಿಪರಿಯಾಗಿ ಬೇಡಿ ವಿಫಲನಾಗುತ್ತಾನೆ. ಇವರ ವಾಗ್ವಾದವನ್ನು ಕೇಳುತ್ತಿದ್ದ ಜಾಬಾಲಿ ಮಹರ್ಷಿಗಳೂ ರಾಮನಿಗೆ ತಂದೆಯ ಮಾತನ್ನು ನಡೆಸಬೇಕೆಂಬ ಚಾಪಲ್ಯ ಬಿಟ್ಟು ರಾಜ್ಯಭೋಗವನ್ನು ಅನುಭವಿಸುವಂತೆ ಸಲಹೆ ಕೊಡುತ್ತಾರೆ. ಅವರ ಮಾತನ್ನು ಕೇಳಿದ ರಾಮನು "ರಾಜ್ಯವೆಂಬುದು ಸತ್ಯರೂಪವಾದುದು. ಸತ್ಯದಲ್ಲಿಯೆ ಈ ಜಗತ್ತು ನಿಂತಿದೆ. ಇಂತಹ ಸತ್ಯವನ್ನು ನಾನೀಗ ತ್ಯಜಿಸಿಬಿಡಲೇ? ಸತ್ಯವೇ ಜಗತ್ತಿನಲ್ಲಿ ಸರ್ವೋತ್ತಮವಾದುದೆಂದು ದೇವತೆಗಳೂ, ಋಷಿಗಳೂ ಪರಿಗಣಿಸಿದ್ದಾರೆ. ಸತ್ಯವಾದಿಯಾದವನು ಉತ್ತಮ ಲೋಕಗಳನ್ನು ಪಡೆಯುತ್ತಾನೆ. ಸತ್ಯವೇ ಈಶ್ವರ. ಆ ಸತ್ಯಕ್ಕಿಂತಲೂ ಅಧಿಕವಾದ ಧರ್ಮವಿನ್ನಿಲ್ಲ. ದಾನ, ಯಾಗ, ಹೋಮ, ತಪಸ್ಸು ಎಲ್ಲಕ್ಕೂ ಸತ್ಯವೇ ಆಧಾರ. ಸತ್ಯವಂತನಿಂದ ಸಕಲ ಜಗತ್ತೂ ಉದ್ಧಾರವಾಗುತ್ತದೆ. ಇದನ್ನು ಅರಿತ ನಾನು ಸತ್ಯಕ್ಕೆ ತಪ್ಪುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದೇನೆ. ಅಂತಹ ನಾನು ಈಗ ತಂದೆಯ ಸತ್ಯಕ್ಕೆ ಭಂಗ ತರಲೆ? ಆತನ ಇದಿರಿನಲ್ಲಿ ನಾನು ವನವಾಸ ಕೈಗೊಳ್ಳುವೆನೆಂದು ಪ್ರತಿಜ್ಞೆ ಮಾಡಿದೆ. ಈಗ ಪ್ರತಿಜ್ಞೆಯನ್ನು ಮುರಿಯಲೆ? ನಾಸ್ತಿಕ ಮತವನ್ನು ಬೋಧಿಸುತ್ತಿರುವ ನಿಮ್ಮ ಮಾತುಗಳು ನನಗೆ ಸಹಿಸಲಶಕ್ಯವಾಗಿವೆ"ಎಂದು ಕಟುವಾಗಿ ಹೇಳಿದನು. ಉದಾತ್ತವಾದ ಸತ್ಯನಿಷ್ಠೆಯನ್ನು ಎಲ್ಲ ಕಾಲಕ್ಕೂ ಎಲ್ಲ ಜನರೂ ಪಾಲಿಸಲೇಬೇಕೆಂಬ ಸಂದೇಶವನ್ನು ಈ ಮೂಲಕ ಶ್ರೀರಾಮಚಂದ್ರನು ನೀಡುತ್ತಿದ್ದಾನೆ.

ಸೀತಾಪಹರಣದ ನಂತರ ರಾಮಲಕ್ಷ್ಮಣರು ಸೀತೆಯನ್ನು



ಹುಡುಕುತ್ತಾ ವನದಲ್ಲಿ ಸಂಚರಿಸುತ್ತಿದ್ದರು. ಪುಣ್ಯವಂತ ಜಟಾಯುವಿನ ಭೇಟಿಯಾಯಿತು. ಜಟಾಯು ರಾವಣ ಸೀತಾದೇವಿಯನ್ನು ಅಪಹರಣ ಮಾಡಿದ್ದು, ಸೀತೆಯನ್ನು ಬಿಡಿಸಲು ಪ್ರಯತ್ನಿಸಿದ ತನ್ನ ರೆಕ್ಕೆಯನ್ನು ರಾವಣ ಕತ್ತರಿಸಿದ ವಿಚಾರವನ್ನೆಲ್ಲ ತಿಳಿಸಿದನು. ಜಟಾಯು ತನ್ನ ತಂದೆಯ ಸ್ನೇಹಿತನೆಂದು ತಿಳಿದು ರಾಮ ತನ್ನೆದುರು ಪ್ರಾಣ ಬಿಟ್ಟ ಜಟಾಯುವಿಗೆ ಚಿತೆ ಸಿದ್ಧಗೊಳಿಸಿ ಸಂಸ್ಕಾರ ನಡೆಸಿದನು. ನಂತರ ಪಿಂಡಪ್ರದಾನ, ತರ್ಪಣಾದಿಗಳನ್ನೂ ಮಾಡಿ ಉತ್ತಮ ಲೋಕ ಪ್ರಾಪ್ತಿ ಮಾಡಿಸಿದನು. ಆ ಮೂಲಕ 'ಸರ್ವಭೂತೇಷು ಕೋಹಿತಃ' – ಎಲ್ಲಾ ಪ್ರಾಣಿಗಳಲ್ಲೂ ಸಮಾನತೆಯನ್ನು ಕಾಣುವವನು ಮತ್ತು ಹಿತವನ್ನು ಕೋರುವವನು – ಎಂಬುದನ್ನು ಸಮಾಜಕ್ಕೆ ರಾಮಚಂದ್ರ ತೋರಿಸಿಕೊಟ್ಟಿದ್ದಾನೆ. ಈ ಅಸಾಧಾರಣ ಮಾನವೀಯ ಗುಣವನ್ನು ಅಹಲ್ಯೆಯ ಶಾಪ ವಿಮೋಚನೆಯ ಸಂದರ್ಭದಲ್ಲಿ ಹಾಗೂ ರಾಕ್ಷಸರಾದ ಕಬಂಧ, ವಿರಾದರಿಗೆ ಉತ್ತಮ ಲೋಕ ಪ್ರಾಪ್ತಿ ಮಾಡುವಲ್ಲಿ ಕಾಣಬಹುದು.

ಶಬರಿ ರಾಮನ ಆಗಮನಕ್ಕಾಗಿ ಎಷ್ಟೋ ವರ್ಷಗಳಿಂದ ಕಾಯುತ್ತಾ ಇದ್ದಳು. ರಾಮನ ಸತ್ಕಾರಕ್ಕಾಗಿಯೇ ಪಂಪಾ ಸರೋವರದ ತೀರದಲ್ಲಿ ಬೆಳೆದ ಹಣ್ಣುಗಳನ್ನು ಸಂಗ್ರಹಿಸಿದ್ದಳು. ಶಬರಿ ಇದ್ದ ಆಶ್ರಮಕ್ಕೆ ರಾಮ, ಲಕ್ಷ್ಮಣರು ಬಂದಾಗ ಅವಳ ಸಂಭ್ರಮ ಹೇಳತೀರದು. ರಾಮ ಲಕ್ಷ್ಮಣರಿಗೆ ಸವಿಯಾದ ಹಣ್ಣುಗಳನ್ನು ಅರ್ಪಿಸಲು ತಾನು ಅದನ್ನು ರುಚಿ ನೋಡಿ ನೀಡುತ್ತಿದ್ದಳು. ಇದು ಅವಳ ರಾಮ ಭಕ್ತಿ, ಶ್ರದ್ಧೆ, ಪ್ರೀತಿಯ ಪ್ರತೀಕ. ಪ್ರತಿಯಾಗಿ ರಾಮನೂ ಶಬರಿಯ ಉಪಚಾರದಿಂದ ಸಂತೋಷಗೊಂಡು ಅವಳಿಗೆ ದೇಹತ್ಯಾಗಕ್ಕೆ ಅಪ್ಪಣೆ ಕೊಟ್ಟು ಪುಣ್ಯಲೋಕ ಸೇರುವಂತೆ ಅನುಗ್ರಹಿಸಿದನು. ಶಬರಿ ಬಡ ವೃದ್ಧೆ. ಆದರೂ ರಾಮ ತಾತ್ಸಾರ ಮಾಡದೆ ಆಕೆಯ ಆತಿಥ್ಯ ಸ್ವೀಕರಿಸಿ ಅವಳ ಮನೋಭಿಲಾಷೆಯನ್ನು ಈಡೇರಿಸುವುದರ ಮೂಲಕ ತನ್ನ ಸೌಜನ್ಯತೆಯ ಗುಣವನ್ನು ಮೆರೆದು ಸಮಾಜಕ್ಕೆ ಒಳ್ಳೆಯ ಆದರ್ಶವನ್ನು ತೋರಿಸಿಕೊಟ್ಟಿದ್ದಾನೆ.

ಸೀತೆಯನ್ನು ಹುಡುಕುತ್ತಾ ಋಷ್ಯಮೂಕ ಪರ್ವತದ ಹತ್ತಿರ ರಾಮ ಲಕ್ಷ್ಮಣರು ಬಂದರು. ಅದು ಕಪಿಶ್ರೇಷ್ಠ ಸುಗ್ರೀವನಿದ್ದ ಪ್ರದೇಶ. ಸುಗ್ರೀವ ಹನುಮಂತನ ಮೂಲಕ ರಾಮಲಕ್ಷ್ಮಣರ ಸ್ನೇಹ ಬಯಸಿದನು. ರಾಮ ಲಕ್ಷ್ಮಣರೂ ಸುಗ್ರೀವನನ್ನೇ ಹುಡುಕ ಹೊರಟಿದ್ದರು. ಹನುಮಂತ ಸುಗ್ರೀವ ಹಾಗೂ ರಾಮಲಕ್ಷ್ಮಣರಿಗೆ ಪರಸ್ಪರರ ಉದ್ದೇಶ ತಿಳಿಸಿ

ಪುಟ 6 ಕ್ಕೆ ➢

➤ ಪುಟ 5 ರಿಂದ.....

ಪರಿಚಯ ಮಾಡಿಸಿದನು. ಇಬ್ಬರೂ ಅಗ್ನಿಸಾಕ್ಷಿಯಾಗಿ ಕೈಹಿಡಿದು ಸ್ನೇಹವನ್ನು ಸ್ಥಿರಪಡಿಸಿದರು. ಸೀತೆಯನ್ನು ಹುಡುಕಲು ಸುಗ್ರೀವ ದೃಢ ನಿಶ್ಚಯ ಮಾಡಿದನು. ಅಪಾರ ಶಕ್ತಿಶಾಲಿಯಾದ ತನ್ನ ಅಣ್ಣ ವಾಲಿಯನ್ನು ಎದುರಿಸಲು ರಾಮ ಹೇಗೆ ಸಮರ್ಥ ಎಂದು ಪ್ರಶ್ನಿಸಿದಾಗ ಶ್ರೀರಾಮನು ಕಾಲಿನ ಹೆಬ್ಬೆರಳಿನಿಂದ ದುಂದುಭಿಯ ದೇಹವನ್ನು ಅಲುಗಿಸಿ ಹತ್ತು ಗಾವುದ ದೂರಕ್ಕೆ ಚಿಮ್ಮಿದನು. ಆದರೂ ತೃಪ್ತನಾಗದ ಸುಗ್ರೀವನ ಅಪೇಕ್ಷೆಯಂತೆ ಸಾಲವೃಕ್ಷಗಳನ್ನು ಭೇದಿಸಲು ಬಾಣ ಪ್ರಯೋಗ ಮಾಡಿದನು. ಆ ಬಾಣ ಸಾಲಾಗಿ ನಿಂತ ಏಳು ವೃಕ್ಷಗಳನ್ನೂ ಭೇದಿಸಿ ಭೂಮಿಯನ್ನು ಹೊಕ್ಕು ರಾಮನ ಬತ್ತಳಿಕೆ ಸೇರಿತು. ಸುಗ್ರೀವ ರಾಮನ ಬಲ, ಶಕ್ತಿಯ ಬಗ್ಗೆ ವಿಶ್ವಾಸ ಹೊಂದಿ ಹೊಗಳಿದನು. ಇದು ಶ್ರೀರಾಮನ ಧೃತಿತ್ವದ ಗುಣಕ್ಕೆ ಸಾಕ್ಷಿ. ಸುಗ್ರೀವನಾದರೋ ವಾನರ ರಾಜ. ಶ್ರೀರಾಮಚಂದ್ರ ಚಕ್ರವರ್ತಿ. ಇಬ್ಬರಿಗೂ ಸ್ಥಾನಮಾನದಲ್ಲಿ ಅಜಗಜಾಂತರ. ಆದರೂ ರಾಮ ಸುಗ್ರೀವನ ಸ್ನೇಹವನ್ನು ಗೌರವಿಸಿ ತನ್ನನ್ನು ಪರೀಕ್ಷೆಗೆ ಒಡ್ಡಿದ ಸುಗ್ರೀವನ ಮೇಲೆ ಬೇಸರಿಸದೆ ಅವನು ಒಡ್ಡಿದ ಪರೀಕ್ಷೆಯನ್ನು ಸ್ವೀಕರಿಸುತ್ತಾನೆ. ಇದು ರಾಮನ ವಿಶಾಲ ಮನೋಭಾವವನ್ನು ತಿಳಿಸುತ್ತದೆ. ಹಾಗೂ ಸ್ನೇಹಕ್ಕೆ ಕೊಡಬೇಕಾದ ಮಹತ್ವವನ್ನು ಸಮಾಜಕ್ಕೆ ಸಾರುತ್ತದೆ.

ಶ್ರೀರಾಮನ ಕ್ಷಮಾಗುಣವನ್ನು ವಾಲ್ಮೀಕಿ ಮಹರ್ಷಿ ಪೃಥ್ವಿಗೆ ಹೋಲಿಸಿ 'ಪೃಥಿವೀ ಸಮಾಃ' ಎಂದಿದ್ದಾರೆ. ರಾಮನ ಕ್ಷಮಾಗುಣಕ್ಕೆ ಒಂದು ಉತ್ತಮ ಸನ್ನಿವೇಶ ಇದು. ರಾವಣ ತನ್ನ ಆಪ್ತರೊಂದಿಗೆ ಲಂಕಾದಹನಕ್ಕೆ ಪ್ರತಿಯಾಗಿ ರಾಮಲಕ್ಷ್ಮಣರ ವಿರುದ್ಧ ಸಮರ ಸಾರಿ ಅವರನ್ನು ಸಂಹರಿಸುವ ಆಲೋಚನೆಯಲ್ಲಿ ನಿರತನಾಗಿದ್ದಾನೆ. ರಾಕ್ಷಸ ವೀರರೆಲ್ಲ ರಾಮನ ವಿರುದ್ಧದ ಯುದ್ಧದ ಮಾತನ್ನೇ ಪುಷ್ಟೀಕರಿಸಿ ಮಾತನಾಡಿದರು. ರಾವಣನ ತಮ್ಮ ವಿಭೀಷಣ ಮಾತ್ರ ಅಣ್ಣ ರಾವಣ ಅನುಸರಿಸುತ್ತಿರುವ ನೀತಿಯನ್ನು ಒಪ್ಪದೆ ಸೀತೆಯನ್ನು ರಾಮನಿಗೆ ಒಪ್ಪಿಸುವಂತೆ, ಸುಖವನ್ನೂ, ಧರ್ಮವನ್ನೂ ನಾಶಗೊಳಿಸುನ ಕೋಪವನ್ನು ಬಿಡುವಂತೆ ಪರಿಪರಿಯಾಗಿ ಮನವಿ ಮಾಡುತ್ತಾನೆ. ತನ್ನ ಮಾತಿಗೆ ಒಪ್ಪದ ರಾವಣನನ್ನು ಬಿಟ್ಟು ಮಂತ್ರಿಗಳೊಂದಿಗೆ ರಾಮಲಕ್ಷ್ಮಣರು ಇರುವ ಸ್ಥಳಕ್ಕೆ ಬಂದನು. ವಿಭೀಷಣ ಶತ್ರುವಿನ ತಮ್ಮ. ಅವನೂ ಕಪಟಿಯಾಗಿರಬಹುದು. ಎಂದು ಸಂಶಯವನ್ನು ವ್ಯಕ್ತಪಡಿಸಿ ಅವನನ್ನು ಸಂಹರಿಸುವುದು ಯೋಗ್ಯವೆಂದು ಸುಗ್ರೀವ ರಾಮನಿಗೆ ಸಲಹೆ ನೀಡಿದನು. ಆದರೆ ಹನುಮಂತ ವಿಭೀಷಣನ ಬಗೆಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿ ಅವನನ್ನು ಪರಿಗ್ರಹಿಸುವುದು ಲೇಸೆಂದು ಸಲಹೆ ಕೊಡುತ್ತಾನೆ. ನಂತರ ರಾಮ ವಿಭೀಷಣನಿಗೆ ಅಭಯವನ್ನು ಕೊಟ್ಟು ಸುಗ್ರೀವನಿಗೆ ಹೇಳಿದ ಮಾತುಗಳು ಗಮನಾರ್ಹ. "ಒಂದು ವೇಳೆ ರಾವಣನೇ ನನ್ನ ಬಳಿ ಬಂದು ಶರಣಾದರೆ ಅವನನ್ನೂ ಸಹ ನಾನು ಕ್ಷಮಿಸುತ್ತೇನೆ". ಇದು ಅಮಿತವಾದ ಕ್ಷಮಾಗುಣ. ಜ್ಞಾನಕ್ಕೆ ಆಭರಣವೇ ಕ್ಷಮಾಗುಣ. ಪರಮಜ್ಞಾನಿಯಾದ ರಾಮನಲ್ಲಿ ಕ್ಷಮಾಗುಣವು ಆಭರಣವಾಗಿದ್ದು ವ್ಯಕ್ತಿಗತವಾಗಿ ಸೇರಿತ್ತು. ಸೌಹಾರ್ದತೆಯಿಂದ ಬಾಳಲು ಕ್ಷಮಾಗುಣ ಅವಶ್ಯ. ಸಾಮರಸ್ಯ ಬೆಳೆಯಲೂ ಪೋಷಕ. ಹಾಗಾಗಿ ಎಲ್ಲರೂ ಕ್ಷಮಾಗುಣವನ್ನು ಅನುಸರಿಸಬೇಕೆಂಬ ಸಂದೇಶ ವಿಭೀಷಣನ ಪ್ರಸಂಗದಲ್ಲಿ ಅಡಗಿದೆ.

ರಾಮ ರಾವಣರ ನಡುವೆ ಘೋರ ಯುದ್ಧ ನಡೆದು ಅಂತಿಮವಾಗಿ ರಾವಣ ರಾಮನಿಂದ ಹತನಾಗುತ್ತಾನೆ. ನಂತರದ ರಾಮನ ನಡವಳಿಕೆ ಗಮನಾರ್ಹವಾದುದು. ಅಣ್ಣನ ಮರಣದಿಂದ ದುಃಖಿತನಾದ ವಿಭೀಷಣನನ್ನು ಸಮಾಧಾನಪಡಿಸಿ ರಾವಣನ ಅಂತ್ಯ ಸಂಸ್ಕಾರ ನಡೆಸುವಂತೆ ಹೇಳಿದನು. ತನ್ನ ಅಣ್ಣ ದುರಾಚಾರಿಯಾಗಿ, ದುಷ್ಟನಾಗಿ ಬಾಳಿದವನು. ಧರ್ಮ ಮತ್ತು ವ್ರತವನ್ನು ಬಿಟ್ಟವನು ಎಂದು ಹಿಂಜರಿದಾಗ ರಾಮನು ಹೇಳುತ್ತಾನೆ. "ಮರಣಾಂತಿ ವೈರಾಣಿ, ನಿವೃತ್ತಾನಃ ಪ್ರಯೋಜನಂ । ಕ್ರಿಯತಾಂ ಅಸ್ಯ ಸಂಸ್ಕಾರೋ ಮಾಮಪ್ಯೇಷ ಯಥಾತವ॥" ಸತ್ತಮೇಲೆ ಒಬ್ಬನೂ ವೈರಿಯಲ್ಲ. ಅವನೊಡನೆ ವೈರವೂ ಮರಣದಲ್ಲಿ ಮುಕ್ತಾಯವಾಗುತ್ತದೆ. ಇಲ್ಲಿ ಶ್ರೀರಾಮನ ಉದಾತ್ತ ಭಾವ ಎದ್ದು ಕಾಣುತ್ತದೆ. ವೈಷಮ್ಯ ಮರಣದವರೆಗೆ ಮಾತ್ರ. ಮಹತ್ತರ ಮಾನವೀಯ ತತ್ವವನ್ನು ರಾಮ ಈ ಮೂಲಕ ಇಡೀ ಮಾನವ ಕುಲಕ್ಕೆ ನೀಡಿದ್ದಾನೆ.

ಆಂಜನೇಯ ಶ್ರೀರಾಮಚಂದ್ರನ ಪರಮ ಭಕ್ತ, ರಾಮದಾಸ, ರಾಮದೂತ. ರಾಮ ಲಕ್ಷ್ಮಣರು ಋಷ್ಯಮೂಕ ಪರ್ವತ ಪ್ರದೇಶವನ್ನು ಪ್ರವೇಶಿಸಿದಾಗ ಹನುಮಂತನ ಮೊದಲ ಭೇಟಿ. ಅಲ್ಲಿಂದ ಆರಂಭವಾದ ರಾಮಾಂಜನೇಯರ ಬಾಂಧವ್ಯ ಗಟ್ಟಿಯಾಗುತ್ತಲೇ ಹೋಯಿತು. ಸಮುದ್ರೋಲ್ಲಂಘನ, ಸೀತೆಯ ಅನ್ವೇಷಣೆ, ಲಂಕಾಪ್ರವೇಶ, ಯುದ್ಧದಲ್ಲಿ ನೆರವು – ಹೀಗೆ ರಾಮನ ಎಲ್ಲ ಕಾರ್ಯಗಳಲ್ಲೂ ಆಂಜನೇಯನ ಪಾತ್ರವೇ ಪ್ರಧಾನ. ಹನುಮಂತನನ್ನು ಕೇವಲ ಒಬ್ಬ ವಾನರನೆಂದು ಪರಿಗಣಿಸದೆ ಅವನ ಹೃದಯದಲ್ಲಿ ನೆಲೆಸುವುದರ ಮೂಲಕ ಆಂಜನೇಯನ ಬಗೆಗೆ ಅಪಾರವಾದ ಪ್ರೀತಿಯನ್ನು ರಾಮ ತೋರಿದನು. ತನ್ನ ಜೊತೆಯಲ್ಲೇ ಸದಾ ಇರುವಂತಹ ಅಪೂರ್ವ ಸ್ಥಾನವನ್ನು ಕಲ್ಪಿಸಿದನು. ಆ ಮೂಲಕ ಒಡೆಯ, ಸೇವಕರ ಭೇದಭಾವದಿಂದ ದೂರ ಉಳಿದು ಸಮಾನತೆಯ ಗೌರವ ಭಾವನೆ ಹೊಂದಿರಬೇಕೆಂಬ ಸಂದೇಶವನ್ನು ಇಲ್ಲಿ ಶ್ರೀರಾಮ ಸಮಾಜಕ್ಕೆ ನೀಡುತ್ತಿದ್ದಾನೆ.

'ರಾಜಾನೋ ಬಹು ವಲ್ಲಭಾಃ'. ದಶರಥ ಮಹಾರಾಜನಿಗೂ ಮೂವರು ಪತ್ನಿಯರು. ಆದರೆ ರಾಮನು ಏಕಪತ್ನೀವ್ರತಸ್ಥನಾಗಿದ್ದು ಧರ್ಮಾದಿ ಗುಣ ಪ್ರತಿಪಾದಕನಾಗಿದ್ದಾನೆ. ರಾಮ– ಸೀತೆಯರ ಅನ್ಯೋನ್ಯ ದಾಂಪತ್ಯವು ಈಗಿನ ಸಮಾಜಕ್ಕಂತೂ ಅವಶ್ಯ ಆದರ್ಶವಾಗಿದೆ. ರಾಮನ ಭ್ರಾತೃವಾತ್ಸಲ್ಯ ಅಗಾಧ. ಯುದ್ಧದಲ್ಲಿ ಲಕ್ಷ್ಮಣನು ಮೂರ್ಛಿತನಾದಾಗ ಶ್ರೀರಾಮನ ತಳಮಳ, ಆತಂಕ ಹೇಳತೀರದು. ತಮ್ಮನ ಮೇಲಿನ ಮಮತೆ ಹೇಗಿರಬೇಕೆಂಬುದಕ್ಕೆ ರಾಮ ಅನುಸರಣೀಯ. ಭರತನು ಶ್ರೀರಾಮನನ್ನು ಅಯೋಧ್ಯೆಗೆ ಮರಳುವಂತೆ ಪ್ರಾರ್ಥಿಸಲು ಬಂದಾಗ ಲಕ್ಷ್ಮಣ ಅವನು ಯುದ್ಧ ಮಾಡಲು ಬಂದಿರಬಹುದೆಂಬ ಸಂಶಯವನ್ನು ವ್ಯಕ್ತಪಡಿಸುತ್ತಾನೆ. ಆಗ ರಾಮ 'ಮಮ ಪ್ರಾಣಾತ್ ಪ್ರಿಯತರಃ'. ನನ್ನ ಪ್ರಾಣಕ್ಕಿಂತಲೂ ಪ್ರಿಯನಾದವನು ಭರತ. ಯುದ್ಧಕ್ಕೆ ಬಂದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಾನೆ. ಇಂತಹ ಭ್ರಾತೃಪ್ರೇಮ ಇಂದಿನ ಸಮಾಜಕ್ಕೆ ಉತ್ತಮ ಆದರ್ಶವೇ ಸರಿ.

ಪುರುಷೋತ್ತಮನಾದ ರಾಮನನ್ನು ದೇವತೆಯಾಗಿ ಆರಾಧಿಸುತ್ತೇವೆ. ಕೇವಲ ರಾಮನ ಪೂಜೆಗೆ ಮಾತ್ರ ನಮ್ಮ ಭಕ್ತಿ ಸೀಮಿತವಾಗದೆ ರಾಮನು ತನ್ನ ನಡೆಯಿಂದ ನೀಡಿರುವ ಆದರ್ಶಗುಣಗಳನ್ನು ಸ್ಮರಿಸಿ ಪಲಿಸುವುದರ ಮೂಲಕ ರಾಮರಾಜ್ಯವನ್ನು ಕಟ್ಟುವಲ್ಲಿ ನಮ್ಮ ಒಂದು ಇಟ್ಟಿಗೆಯನ್ನು ಜೋಡಿಸೋಣ.

**"ಬೆರೆಸೋ ಉಸಿರಲಿ ರಾಮನ**
**ಸ್ಮರಿಸೋ ಅನುಕ್ಷಣ ರಾಮನ".**

●

# ರಾಮಾಯಣ ಪಾತ್ರ ಪರಿಚಯದಲ್ಲಿ – ಸೀತೆ

## ಒಂದು ಚಿಂತನೆ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

**ಭಾ**ರತೀಯ ಸಂಸ್ಕೃತಿಯ ಉತ್ಕೃಷ್ಟ ಗ್ರಂಥ ರಾಮಾಯಣ. ಅಂದಿನ ಸಮಾಜ ವ್ಯವಸ್ಥೆ, ಸಾಂಸ್ಕೃತಿಕ ಪರಂಪರೆ ಮತ್ತು ಜೀವನಶೈಲಿ ಹಾಗೂ ಮೌಲ್ಯಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆಗಳು ಮುಂದುವರಿದಂತೆಲ್ಲಾ ಅವುಗಳ ವಿಶ್ಲೇಷಣೆಯಿಂದ ಈ ಮಹಾನ್ ಗ್ರಂಥದಲ್ಲಿ ಹುದುಗಿರುವ ಗುಣವಿಶೇಷಣಗಳು ಮತ್ತು ಅಂತರಾರ್ಥಗಳ ವಿವರಣೆಗಳು ಸಹ ಹೊಸ ಹೊಸ ರೂಪ ತಳೆಯುತ್ತಾ ಬಂದಿವೆ. ಇಲ್ಲಿನ ಪಾತ್ರ ಪ್ರಪಂಚವನ್ನು ಪ್ರವೇಶಿಸಿದರಂತೂ ಪ್ರತಿಯೊಂದು ಪಾತ್ರದ ವ್ಯಕ್ತಿತ್ವವೂ ತನ್ನದೇ ಆದ ವಿಶಿಷ್ಟ ಗುಣದಿಂದ ಶೋಭಿಸುತ್ತದೆ. ಕೆಲವು ಪಾತ್ರಗಳಂತೂ ನಿತ್ಯಜೀವನದಲ್ಲಿಯೂ ಒಂದಲ್ಲ ಒಂದು ರೂಪದಲ್ಲಿ, ರೀತಿಯಲ್ಲಿ ಆರಾಧನೆ ಮಾಡುವಂತಿವೆ. ಅದಕ್ಕೇ ಭಾರತೀಯ ಪರಂಪರೆಯಲ್ಲಿ ರಾಮಾಯಣಕ್ಕೇ ಒಂದು ವಿಶೇಷ ಸ್ಥಾನದ ಗೌರವ, ಅದರೊಂದಿಗೆ ಪೂಜನೀಯ ಸ್ಥಾನವೂ ಲಭಿಸಿದೆ.



ರಾಮಾಯಣ ಮಹಾಕಾವ್ಯ ಭಾರತೀಯ ಸಂಸ್ಕೃತಿಯ ಬುನಾದಿಯೆಂದು ನಿರೂಪಿಸಿರುವ ಆದಿಕವಿ, ರಾಮಾಯಣ ಕಾವ್ಯದ ಕರ್ತೃ ಮಹರ್ಷಿ ವಾಲ್ಮೀಕಿ ಇದರಲ್ಲಿ ಚಿತ್ರಿಸಿರುವ ಆದರ್ಶ ಪಾತ್ರಗಳು, ಬಿತ್ತರಿಸಿರುವ ಮೌಲ್ಯಗಳು ಪ್ರತಿಯೊಂದು ಅನನ್ಯ. ದುಷ್ಟ ಶಿಕ್ಷಣ–ಶಿಷ್ಟರಕ್ಷಣ ಎಂಬುದನ್ನು ಸಾಧಿಸಲು ಅವತಾರವೆತ್ತಿದ ಶ್ರೀ ರಾಮನು ಸಾಮಾನ್ಯ ಮಾನವನಂತೆಯೇ ಹಲವು ರೀತಿಗಳ ಕಷ್ಟಸುಖಗಳಿಗೆ ತನ್ನನ್ನು ತೆರೆದುಕೊಳ್ಳುತ್ತಾನೆ. ಯಾವುದೇ ಸಂಕಷ್ಟವನ್ನೂ ತಾನೇ ಎದುರಿಸುತ್ತಾನಲ್ಲದೆ ಅತಿಮಾನವ ಅಥವಾ ದೈವೀಶಕ್ತಿಯ ಸಹಾಯದಿಂದ ಪರಿಹರಿಸಿಕೊಳ್ಳಲು ಹೋಗುವುದಿಲ್ಲ. ಎದುರಾಗುವ ಮಾನವಸಹಜ ನೋವು–ನಲಿವುಗಳ ಸನ್ನಿವೇಶಗಳಿಗೆಲ್ಲ ತನ್ನನ್ನು ಒಡ್ಡಿಕೊಳ್ಳುತ್ತಾನೆ, ಭಾವನೆಗಳಿಗೆ ಸ್ಪಂದಿಸುತ್ತಾನೆ. ಆದರೂ ಮನಸ್ಸಿನ ಸ್ಥಿರತೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳದೆ(ಸೀತಾ ವಿರಹದ ದುಃಖ, ಸೀತಾಪರಿತ್ಯಾಗದ ನೋವು ಹೊರತುಪಡಿಸಿದರೆ) ಸತ್ಯ, ಧರ್ಮ, ನ್ಯಾಯದ ಪರವಾಗಿಯೇ ಯಾವಾಗಲೂ ನಡೆದುಕೊಳ್ಳುತ್ತಾನೆ. ಅದಕ್ಕೇ ತಾನೇ ಆತನನ್ನು 'ಮರ್ಯಾದಾ ಪುರುಷೋತ್ತಮ'ನೆಂದೇ ಎಲ್ಲರೂ ಗುರುತಿಸುವುದು, ಗೌರವಿಸುವುದು, ಪೂಜಿಸುವುದು?

ಒಬ್ಬ ಆದರ್ಶವ್ಯಕ್ತಿಯನ್ನು ಗುರುತಿಸಿ ಸಂಬೋಧಿಸುವುದೇ 'ಶ್ರೀರಾಮಚಂದ್ರನಂತಹವನು' ಎಂದು. ಏಕಪತ್ನೀವ್ರತಸ್ಥ, ವಚನಬದ್ಧ, ಪ್ರಜಾನುರಾಗಿ, ಆದರ್ಶರಾಜ ಎಂಬ ಎಲ್ಲ ಗುಣಗಳೂ ಈತನನ್ನು ಅಲಂಕರಿಸಿವೆ. ಇವೆಲ್ಲದರ ಜೊತೆಜೊತೆಗೇ ರಾಮಾಯಣದಲ್ಲಿನ ಅತ್ಯಂತ ಮಹತ್ತ್ವದ ವ್ಯಕ್ತಿತ್ವವೆಂದರೆ ಸೀತಾಮಾತೆಯದು. ಆಕೆ ಆದರ್ಶವಾದಿ, ಮಹಾಪತಿವ್ರತೆ, ಸ್ತ್ರೀ ಕುಲಕ್ಕೇ ಎಂದೆಂದಿಗೂ ಆದರ್ಶಪ್ರಾಯಳಾದವಳು. ಇವೆರಡೂ ಪಾತ್ರಗಳ ವ್ಯಕ್ತಿತ್ವಗಳನ್ನು ಕುರಿತು ವಿವರವಾಗಿ ಆಲೋಚಿಸಿದಾಗ ಶ್ರೀರಾಮನ ವ್ಯಕ್ತಿತ್ವಕ್ಕಿಂತಲೂ ಸೀತಾದೇವಿಯ ವ್ಯಕ್ತಿತ್ವವೇ ಉನ್ನತಮಟ್ಟದ್ದು ಎನಿಸುತ್ತದೆ. ಅದಕ್ಕೇ ಹೇಳುತ್ತಾರೆ, 'ಶ್ರೀ ರಾಮಚಂದ್ರನಂತಹವರು ಮತ್ತೆ ಹುಟ್ಟಿ ಬರಬಹುದು, ಆದರೆ ಮತ್ತೊಬ್ಬ ಸೀತೆ ಹುಟ್ಟಿ ಬರುವುದು ಸಾಧ್ಯವೇ ಇಲ್ಲ' ಎಂದು.

ಪಿತೃವಾಕ್ಯಪರಿಪಾಲನೆಗಾಗಿ 14 ವರ್ಷಗಳ ವನವಾಸಕ್ಕೆ ಹೊರಟ ಪತಿ ಶ್ರೀರಾಮಚಂದ್ರನೊಂದಿಗೆ ಸೀತಾದೇವಿ ತನ್ನ ಸತೀಧರ್ಮವನ್ನು ನಿರ್ವಹಿಸಲು ತಾನೂ ಅರಣ್ಯಕ್ಕೆ ತೆರಳುತ್ತಾಳೆ. ಅರಮನೆಯ ಪರಿಸರದಲ್ಲಿ ಬೆಳೆದ ಸುಕುಮಾರಿಯಾದರೂ ಕಾಡಿನ ಕಲ್ಲು ಮುಳ್ಳುಗಳ ಹಾದಿಯಲ್ಲಿ ನಡೆಯುತ್ತ ವನವಾಸದ ಎಲ್ಲ ಕಷ್ಟಗಳನ್ನೂ ಅನುಭವಿಸುತ್ತಾಳೆ. ರಾವಣನಿಂದ ಅಪಹೃತಳಾಗಿ ಲಂಕೆಯಲ್ಲಿದ್ದ ಅವಧಿಯಲ್ಲಿ ಆಕೆ ಪಟ್ಟ ವೇದನೆ, ದುಃಖ, ಸಂಕಟ ಅಪಾರವಾದುದು. ಕಡೆಗೆ ರಾವಣ ಸಂಹಾರದೊಂದಿಗೆ ತನ್ನ ಕಷ್ಟ ಕಳೆಯಿತೆಂದಾಗ, 'ಶ್ರೀರಾಮದರ್ಶನ'ದ ಬಹುನಿರೀಕ್ಷಿತ ಘಳಿಗೆ ಸಮೀಪಿಸುತ್ತಿದೆಯೆಂಬ ಸಮಾಧಾನದಿಂದಿದ್ದಾಗಲೇ ಅಗ್ನಿಪರೀಕ್ಷೆಯನ್ನು ಸ್ವತಃ ಆಕೆಯ ಪತಿಯೇ ಒಡ್ಡುತ್ತಾನೆ. ತನ್ನ ಪಾತಿವ್ರತ್ಯವನ್ನು, ಪರಿಶುದ್ಧತೆಯನ್ನು ನಿರೂಪಿಸಿದ ನಂತರವೇ ತನ್ನನ್ನು ಸ್ವೀಕರಿಸುವನೆಂಬ ಆಘಾತಕಾರಿಯಾದ ನುಡಿ ಕರ್ಣಕಠೋರವಾಗಿ ಚುಚ್ಚುತ್ತದೆ.

ಪರಮ ಸಾಧ್ವಿಯಾಗಿ, ಪತಿಯನಾಮಸ್ಮರಣೆಯಿಂದಲೇ ತನ್ನ ಜೀವವನ್ನು ಹಿಡಿದುಕೊಂಡಿದ್ದ ಸೀತಾದೇವಿಗೆ ಇದಕ್ಕಿಂತ ದುಃಖಕರವಾದ ಸನ್ನಿವೇಶ ಯಾವುದು?

'ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಹಾಗೆಯೇ ಹೆಣ್ಣಿಗೆ 'ಸಹನಾಧರಿತ್ರೀ' ಎಂದು ಹೊಗಳಿ, ಅತ್ಯುನ್ನತ ಸ್ಥಾನವನ್ನೂ ನೀಡಲಾಗಿದೆ. ಜಗನ್ಮಾತೆ, ಶಕ್ತಿ ಸ್ವರೂಪಿಣಿ, ವಿದ್ಯಾದೇವತೆ, ಸಂಪತ್ತಿನ ಅಧಿದೇವತೆ ಎಂದು ಎಲ್ಲಾ ಸಂಪತ್ತುಗಳ ದೇವಿಯೆಂದು ನಾರೀಶಕ್ತಿಯ ಹಲವು ಮುಖಗಳನ್ನು, ವಿಸ್ತೃತ ಮಹಿಮೆಯನ್ನು ನಮ್ಮ ಪೌರಾಣಿಕ ಗ್ರಂಥಗಳಲ್ಲಿ, ಧಾರ್ಮಿಕ ಗ್ರಂಥಗಳಲ್ಲಿ ಪರಿಚಯ ಮಾಡಿಕೊಳ್ಳುತ್ತೇವೆ. ಈ ಎಲ್ಲ ಹಿನ್ನೆಲೆಯೊಂದಿಗೆ ರಾಮಾಯಣದ ಸೀತಾದೇವಿಯ ವ್ಯಕ್ತಿತ್ವದ ಹಿರಿಮೆ ತನ್ನ

ಪುಟ 8 ಕ್ಕೆ ➤

➢ ಪುಟ 7 ರಿಂದ.....

ಉತ್ತುಂಗಕ್ಕೇರಿರುವುದನ್ನು ಕಾಣುತ್ತೇವೆ. ಪತಿವ್ರತಾಶಿರೋಮಣಿ ಸೀತೆ ತನ್ನ ಪಾತಿವ್ರತ್ಯದ ಪರೀಕ್ಷೆಯಾಗಬೇಕೆಂದು ಶ್ರೀರಾಮನೇ ಹೇಳಿದಾಗ ಸೇರಿದ್ದ ವಾನರವೀರರ, ಅಸುರರ ಸಮ್ಮುಖದಲ್ಲಿಯೇ ತನಗಾದ ಅವಮಾನ, ಅದರಿಂದ ಉಂಟಾದ ವೇದನೆ, ಸಂಕಟ ಹತ್ತಿಕ್ಕುತ್ತಾಳೆ. ಸ್ವಾಭಿಮಾನಭಂಗದ ನೋವನ್ನು ಒಳಗೇ ನುಂಗಿಕೊಳ್ಳುತ್ತಾಳೆ. ರಾಮ ಬರುವನೆಂಬ, ತನ್ನನ್ನು ಸೆರೆಯಿಂದ ಬಿಡಿಸಿ ಕರೆದೊಯ್ಯುವನೆಂಬ ದೃಢವಿಶ್ವಾಸವೊಂದೇ ಆಕೆಯ ಪ್ರಾಣವನ್ನು ಹಿಡಿದಿಟ್ಟಿರುತ್ತದೆ. ಹನುಮಂತನು ತಾನೇ ಕರೆದೊಯ್ಯುತ್ತೇನೆಂದು ಪ್ರಾರ್ಥಿಸಿದಾಗಲೂ ಆಕೆ ನಿರಾಕರಿಸುತ್ತ ಆಡಿದ ಮಾತುಗಳಾದರೂ ಯಾವುವು? ಒಂದು, ಪುತ್ರಸಮಾನನೇ ಆದರೂ ಪತಿಯಲ್ಲದ ಪರಪುರುಷನ ಸ್ಪರ್ಶಕ್ಕೆ ತಾನಾಗಿಯೇ ಒಡ್ಡಿಕೊಳ್ಳುವುದಿಲ್ಲವೆಂಬ ಸಂಕಲ್ಪ, ಮತ್ತೊಂದು ರಾಮನ ಪರಾಕ್ರಮಕ್ಕೆ, ಆತ್ಮಸಮ್ಮಾನಕ್ಕೆ, ಇಕ್ಷ್ವಾಕುಕುಲದವರ ಘನತೆಗೆ ಹಾಗೆ ತಾನು ಹನುಮಂತನೊಂದಿಗೆ ರಾವಣನ ಕಣ್ತಪ್ಪಿಸಿ, ಅವನ ಸಂಹಾರವಾಗುವುದಕ್ಕೂ ಮೊದಲೇ ಹೋಗುವುದರಿಂದ ಕುಂದುಂಟಾಗುವುದೆಂಬ ಆಲೋಚನೆ, ತಾನು ಅನುಭವಿಸುತ್ತಿರುವ ಮಾನಸಿಕ ಹಿಂಸೆಗಿಂತಲೂ ಶ್ರೀರಾಮನಿಗಾಗಲೀ, ಕುಲದ ಪ್ರತಿಷ್ಠೆಗಾಗಲೀ ಕಳಂಕ ತಟ್ಟಬಾರದೆಂಬುದಕ್ಕೇ ಪ್ರಾಶಸ್ತ್ಯ ನೀಡುತ್ತಾಳೆ.

ಇಂತಹ ನಿಸ್ವಾರ್ಥ ಚಿಂತನೆಗೆ ಯಾವ ಬೆಲೆಯನ್ನು ತಾನೇ ಕಟ್ಟಲಾದೀತು? ಪತಿಯ ಬಗ್ಗೆ ಎಂತಹ ಅಚಲ ನಿಷ್ಠೆ ಆಕೆಯದು? ಹೆಣ್ಣು ಹುಟ್ಟಿದ ಮನೆ, ಸೇರಿದ ಮನೆ ಎರಡನ್ನೂ ಬೆಳಗುತ್ತಾಳೆಂಬ ಲೋಕರೂಢಿಯ ಮಾತಿಗೆ ಇಂತಹ ವ್ಯಕ್ತಿತ್ವ ತಾನೇ ಮಾದರಿ? ಆಕೆಯ ತಂದೆ ರಾಜರ್ಷಿ ಜನಕಮಹಾರಾಜನೂ ಸಹ ಮಗಳ ಪ್ರತಿಯೊಂದು ನಡೆಯನ್ನೂ, ಅದರ ಹಿಂದಿನ ಚಿಂತನೆಯಲ್ಲಿರುವ ಮೌಲ್ಯವನ್ನೂ ಅರಿತು ತಾನು ಧನ್ಯನೆಂದುಕೊಳ್ಳುತ್ತಾನೆ.

ಮತ್ತೊಂದು ಅಂಶದಿಂದಲೂ ಸೀತೆಯ ಪಾತ್ರ ತನ್ನದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಳ್ಳುತ್ತದೆ. ಆಕೆಯ ಧೀರ ವ್ಯಕ್ತಿತ್ವವೇ ಹಾಗೆ ಗಮನ ಸೆಳೆಯುವುದು. ಧರ್ಮ ಮತ್ತು ಮರ್ಯಾದೆ ಎರಡನ್ನೂ ರಕ್ಷಿಸಿಕೊಂಡು ತನ್ನ ನಿರ್ಧಾರಕ್ಕೆ ಬದ್ಧಳಾಗುವ ದೃಢತೆಯಿಂದ ಸೀತೆ ಗಂಡನಿಂದ ತ್ಯಜಿಸಲ್ಪಟ್ಟ ಅಸಹಾಯಕ ಹೆಣ್ಣಾಗಿ ಕಾಣುವುದಿಲ್ಲ.

ಸೀತೆಯ ಸಹನಶೀಲತೆಗೆ ಹತ್ತಾರು ನಿದರ್ಶನಗಳನ್ನು ಕಾಣುತ್ತೇವೆ. ಆಕೆಯಲ್ಲವೇ ಮೌಲ್ಯಗಳ ಪ್ರತೀಕ? ಆದರ್ಶಗಳ ಸಾಕಾರರೂಪ? ತ್ಯಾಗದ ಮತ್ತೊಂದು ರೂಪ?

ಇಷ್ಟೆಲ್ಲ ಕಷ್ಟಗಳನ್ನು ಎದುರಿಸಿ ಅಯೋಧ್ಯೆಗೆ ಹಿಂತಿರುಗಿ ಮಹಾರಾಣಿಯಾಗಿ ಸಿಂಹಾಸನವನ್ನೇರಿದ ನಂತರವಾದರೂ ನೆಮ್ಮದಿಯ ಸುಖಜೀವನ ಆಕೆಗೆ ಲಭಿಸಿತೆ? ಅರೆಕ್ಷಣವೂ ಪತಿಯಾದ ಶ್ರೀರಾಮನನ್ನು ಬಿಟ್ಟು ಮತ್ತಾವ ಪುರುಷನಿಗೂ ತನ್ನ ಮನದಲ್ಲಿಯೂ ಸ್ಥಾನ ಕೊಡದ (ತುಲಸೀರಾಮಾಯಣದಲ್ಲಿ ಸೀತೆ ರಾವಣನೊಡನೆ ಸಂಭಾಷಿಸುವಾಗ ಒಂದು ತೃಣವನ್ನು ಕೈಯಲ್ಲಿ ಹಿಡಿದು ಅದನ್ನು ಉದ್ದೇಶಿಸಿಯೇ ಮಾತನಾಡುತ್ತಾಳೆ) ಆ ಪತಿವ್ರತೆಯ ಚಾರಿತ್ರ್ಯದ ಮೇಲೆ ಅಯೋಧ್ಯೆಯ ಅತಿ ಸಾಮಾನ್ಯ ಪ್ರಜೆಯಿಂದಲೇ ಸಂದೇಹ ಉಂಟಾಗಿತ್ತು. 'ರಾಜಾ ಪ್ರತ್ಯಕ್ಷದೇವತಾ' ಎಂಬುದನ್ನು ಅನ್ವರ್ಥನಾಮವನ್ನಾಗಿಸಿಕೊಂಡೇ ಆಡಳಿತ ನಡೆಸುತ್ತಿದ್ದ ಶ್ರೀರಾಮನ ಮೇಲೇ ಗುರುತರವಾದ ಆಪಾದನೆ ಬಂದಿತ್ತು.

ಮತ್ತೆ ಸೀತೆಯ ಪಾಲಿಗೆ ಪರೀಕ್ಷೆಯ ಘಳಿಗೆ ಎದುರಾಗಿತ್ತು, ತುಂಬು



ಗರ್ಭಿಣಿ ಸೀತೆ ಮಾತ್ರ ತನ್ನ ಮನಸ್ಸಿನಲ್ಲಿ ಅಧೀರತೆಗೆ ಕಿಂಚಿತ್ತೂ ಆಸ್ಪದ ನೀಡಲಿಲ್ಲ. ಅರಣ್ಯವಾಸಿಯಾಗುವ ಕಠೋರ ಪರಿಸ್ಥಿತಿಯನ್ನು ನಿರ್ವಿಕಾರಚಿತ್ತದಿಂದಲೇ ಸ್ವೀಕರಿಸುತ್ತಾಳೆ. ಶ್ರೀರಾಮನೇ ಸೀತಾಪರಿತ್ಯಾಗವನ್ನು ಆಲೋಚಿಸುತ್ತಲೇ ವಿವಶನಾದಾಗ ಸಾಂತ್ವನದ ನುಡಿಗಳನ್ನಾಡುವುದರ ಜೊತೆಗೆ ರಾಜನಾದವನು ಎಂದಿಗೂ ಕರ್ತವ್ಯಭ್ರಷ್ಟನಾಗಬಾರದೆಂಬ ಎಚ್ಚರಿಕೆಯ ನುಡಿಯನ್ನು ನೆನಪಿಸುತ್ತಾ ಆತನ ರಾಜಧರ್ಮವನ್ನು ಸ್ಮರಣೆಗೆ ತರುತ್ತಾಳೆ. ವೈಯಕ್ತಿಕ ಸುಖಕ್ಕಿಂತ ಪ್ರಜೆಗಳ ನೆಮ್ಮದಿ, ವಿಶ್ವಾಸ ರಾಜನಾದವನಿಗೆ ಅಗತ್ಯವೂ, ಅನಿವಾರ್ಯವೂ ಆದುದೆಂದು ಹೇಳುತ್ತ ಅವನ ಮನದ ಅಸ್ಥಿರತೆಯನ್ನು ದೂರಮಾಡಲು ಪ್ರಯತ್ನಿಸುತ್ತಾಳೆ. ತನ್ನನ್ನು ಅರಣ್ಯಕ್ಕೆ ಕಳುಹಿಸಲು ಅನುಮತಿ ನೀಡುವುದರಿಂದ ತಾನೂ ಕರ್ತವ್ಯಭ್ರಷ್ಟಳಾಗದಿರಲು ಸಹಕಾರ ನೀಡಿದಂತಾಗುತ್ತದೆಂಬ ನುಡಿಗಳನ್ನಾಡುತ್ತಾಳೆ. ರಾಜನಾದವನು ಭಾವಾವೇಶಕ್ಕೆ ಒಳಗಾಗದೆ ಕೇವಲ ಕರ್ತವ್ಯಬದ್ಧನಾಗಿ, ನಿಷ್ಪಕ್ಷಪಾತದೃಷ್ಟಿಯಿಂದಲೇ ಪ್ರತಿಯೊಂದು ನಡೆಯನ್ನು ಇಡಬೇಕೆಂದು ಉಪದೇಶಿಸುತ್ತಾಳೆ. ಆಕೆ ಆಡುವ ವಿವೇಚನೆಯ ನುಡಿಗಳು, ಶ್ರೀರಾಮನ ವಿವೇಚನಾಶಕ್ತಿಗೂ, ಮನಸ್ಸಿನ ದೃಢತೆಗೂ, ನ್ಯಾಯ, ಧರ್ಮ, ಸತ್ಯದ ನಡವಳಿಕೆಯ ಬದ್ಧತೆಗೂ ಸ್ಪರ್ಧಾತ್ಮಕ ಸವಾಲು ಒಡ್ಡುವಂತಿವೆ. ಏಕಾಂಗಿಯಾಗಿ ಅರಣ್ಯವಾಸವನ್ನು ಸ್ವೀಕರಿಸಿ ಹೊರಟ ಸೀತೆ ಒಂದೇ ಒಂದು ಬಾರಿಗೂ ಶ್ರೀರಾಮನನ್ನು ನಿಂದಿಸುವುದಿಲ್ಲ. ತನ್ನ ದುರದೃಷ್ಟವನ್ನೂ ಹಳಿಯುವುದಿಲ್ಲ. ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಿ ತಾನೇನು ಮಾಡಬೇಕೆಂದು ಯೋಚಿಸಿ ತನ್ನ ಮುಂದಿನ ಗುರಿಯನ್ನು ಕರ್ತವ್ಯವನ್ನು ಕಂಡುಕೊಳ್ಳುತ್ತಾಳೆ. ವಾಲ್ಮೀಕಿ ಮಹರ್ಷಿಗಳ ಆಶ್ರಯ, ಮಾರ್ಗದರ್ಶನ ದೊರೆತರೂ ಸಹ ತಾಯಿಯಾಗಿ ತನ್ನ ಮಕ್ಕಳಿಗೆ ಕೊಡಬೇಕಾದ ಮಾರ್ಗದರ್ಶನ, ನಿರ್ವಹಿಸಲೇಬೇಕಾದ ಕರ್ತವ್ಯ ಎಲ್ಲವನ್ನೂ ಸಮರ್ಥವಾಗಿ ನಡೆಸಿದ ಧೀರಮಾತೆ ಸೀತಾದೇವಿ, ಶೋಷಣೆಗೆ ಒಳಗಾದ ಅಸಹಾಯಕ ವ್ಯಕ್ತಿತ್ವದ ಹೆಣ್ಣಾಗಿ ಕಾಣುವುದಿಲ್ಲ. ಬದಲಿಗೆ ನಿಸ್ವಾರ್ಥ ಮನೋಭಾವದ, ಲೋಕಕಲ್ಯಾಣದ ಚಿಂತನೆಯನ್ನೇ ಸದಾಕಾಲದಲ್ಲಿಯೂ ಮಾಡುವ, ತ್ಯಾಗದ ಪರಮಾವಧಿಯ ಹಂತಕ್ಕೇರಿದ ಆದರ್ಶನಾರಿಯಾಗಿರುತ್ತಾಳೆ. "ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾಃ" ಎಂಬ ನುಡಿಗೆ ಸೀತಾಮಾತೆಯೇ ತಾನೆ ಅತ್ಯುತ್ತಮ ನಿದರ್ಶನ?

ಪುಟ 9 ಕ್ಕೆ ➢

➤ ಪುಟ 6 ರಿಂದ.....

ಆದಿಕವಿ ವಾಲ್ಮೀಕಿಯಿಂದ ರಾಮಾಯಣ ರಚಿತವಾದ ನಂತರ ಸುಮಾರು (ದೇಶ, ವಿದೇಶಗಳಲ್ಲಿಯೂ ಸೇರಿದಂತೆ) 300 ರಾಮಾಯಣ ಆವೃತ್ತಿಗಳು ರಚಿತವಾದುವೆಂದು ತಿಳಿದುಬರುತ್ತದೆ. ಬರ್ಮಾ, ಇಂಡೋನೇಷಿಯಾ, ಕಾಂಬೋಡಿಯಾ, ಲಾವೋಸ್, ಮಲೇಶಿಯಾ, ಜಪಾನ್, ಮಂಗೋಲಿಯಾ, ವಿಯೆಟ್ನಾಂ ಮತ್ತು ಚೈನಾದಲ್ಲಿಯೂ ರಾಮಾಯಣ ಕಥೆ ಬಳಕೆಯಲ್ಲಿದೆ.


ಸ್ವತಃ ವಾಲ್ಮೀಕಿ ಮಹರ್ಷಿಯೇ 'ರಾಮಾಯಣ ಮಹಾಕಾವ್ಯ' ಬರೆದು ಸಂತೃಪ್ತಿಯಾಗದೆ 'ಯೋಗವಾಸಿಷ್ಠ' ಮತ್ತು 'ಅದ್ಭುತ ರಾಮಾಯಣ' ಎಂಬ ಕೃತಿಗಳನ್ನು ರಚಿಸಿದರು. ಯೋಗವಾಸಿಷ್ಠ ಸಂಪೂರ್ಣವಾಗಿ ವೇದಾಂತದ ಆಧಾರದೊಂದಿಗೆ ರಚಿತವಾಗಿದ್ದರೆ, ಅದ್ಭುತ ರಾಮಾಯಣವು 'ಸೀತಾದೇವಿಯ' ಪಾತ್ರಚಿತ್ರಣವನ್ನೇ ಕೇಂದ್ರವಸ್ತುವನ್ನಾಗಿ ಹೊಂದಿದೆ. ಅದರಲ್ಲಿ ಸೀತೆ ತನ್ನನ್ನು ರಾವಣನ ಸೆರೆಯಿಂದ ಮುಕ್ತಗೊಳಿಸಲು ಶ್ರೀರಾಮನ ಬರುವಿಕೆಯನ್ನೇ ಅಸಹಾಯಕಳಾಗಿ ಕಾಯುತ್ತಾ ಕುಳಿತ ಅಬಲೆಯಲ್ಲ, ಬದಲಿಗೆ ಯುದ್ಧರಂಗದಲ್ಲಿ ರಾಮ ಗಾಯಗೊಂಡು ಮೂರ್ಛಿತನಾಗಿದ್ದಾಗ ಆಕೆ ಕಾಳಿಯ ರೌದ್ರರೂಪವನ್ನು ತಳೆದು ಭೂಮಿಯಲ್ಲೆಲ್ಲ ಅಲ್ಲೋಲಕಲ್ಲೋಲವನ್ನುಂಟು ಮಾಡಿಬಿಡುತ್ತಾಳೆ. ದೇವತೆಗಳ ಪ್ರಾರ್ಥನೆಯಿಂದ ಮತ್ತೆ ಶಾಂತಳಾಗಿ ರಾಮನ ಪ್ರಜ್ಞೆಯೂ ಮರಳಿ ಬರುತ್ತದೆ. ರಾವಣ ಸಂಹಾರವೂ ಆ ಕಾಳಿಯಿಂದಲೇ ಆಗಿಬಿಡುತ್ತದೆ.

ಬೌದ್ಧರ ರಾಮಾಯಣದಲ್ಲಂತೂ 'ದಾಶರಥ ಜಾತಕ' ಎಂಬುದರಲ್ಲಿ ಸೀತೆಯನ್ನು ಶ್ರೀರಾಮನು ತ್ಯಜಿಸುವ ಪ್ರಸಂಗವೇ ಬರುವುದಿಲ್ಲ. ಶ್ರೀರಾಮ, ಸೀತೆ, ಲಕ್ಷ್ಮಣ 12 ವರ್ಷಗಳ ವನವಾಸವೆಂದು ಹಿಮಾಲಯದ ಪ್ರದೇಶಕ್ಕೆ ಹೋಗಿ ಆಶ್ರಮವಾಸಿಗಳಾಗಿರುತ್ತಾರಷ್ಟೆ. ಹಾಗಾಗಿ, ರಾವಣನಿಂದ ಸೀತೆ ಅಪಹೃತಳಾಗುವುದಾಗಲೀ, ರಾಮ-ರಾವಣ ಯುದ್ಧವಾಗಲೀ ಅಲ್ಲಿ ಬರುವುದೇ ಇಲ್ಲ.

ಈ ಎಲ್ಲ ಮಾಹಿತಿಗಳು ನಮ್ಮ ಮಹಾಕಾವ್ಯವಾದ ರಾಮಾಯಣದ ಜನಪ್ರಿಯತೆಯನ್ನು, ಅದರ ಸಾಂಸ್ಕೃತಿಕ ಹಿರಿಮೆಯನ್ನು ಸಾರುತ್ತದೆ.

ಪ್ರಸ್ತುತ, ನಮ್ಮ ಆದಿಕವಿ ಮಹರ್ಷಿವಾಲ್ಮೀಕಿ ವಿರಚಿತ ರಾಮಾಯಣದ ಪ್ರಮುಖ ಪಾತ್ರಗಳಲ್ಲಿ ಒಂದಾದ ಸೀತಾದೇವಿಯ ವ್ಯಕ್ತಿತ್ವವನ್ನು ಕುರಿತು ಮಾತ್ರವೇ ವಿವೇಚಿಸುತ್ತಿರುವ ಸಂದರ್ಭದಲ್ಲಿ ಎಲ್ಲೆಡೆ 'ಮರ್ಯಾದಾ ಪುರುಷೋತ್ತಮ', 'ಆದರ್ಶವ್ಯಕ್ತಿ' ಎಂದು ಸ್ತುತಿಸಿಕೊಳ್ಳುವ ಶ್ರೀರಾಮನಿಗಿಂತಲೂ ಸೀತೆ ತನ್ನ ಅಚಲಮನಸ್ಸು, ದೃಢಸಂಕಲ್ಪ, ತನ್ನ ನಿರ್ಧಾರಕ್ಕೆ ಬದ್ಧಳಾಗಿ ನಡೆಯುವ, ಅದಕ್ಕಾಗಿ ಹೋರಾಡುವ ಧೀಶಕ್ತಿಯಾಗಿ ಮಿಂಚುತ್ತಾಳೆ, ಪಂಚಮಹಾಪತಿವ್ರತೆಯರಲ್ಲಿ ಆಕೆಯ ಸ್ಥಾನ ಅಗ್ರಪೀಠದಲ್ಲಿಯೇ ಇರುತ್ತದೆ. ಕರ್ತವ್ಯನಿರ್ವಹಣೆ ಆಕೆಯ ಮಹಾಮಂತ್ರವಾಗಿರುತ್ತದೆ. ಪುತ್ರಿಯಾಗಿ, ಪತ್ನಿಯಾಗಿ, ಮಾತೆಯಾಗಿ ಕೌಟುಂಬಿಕ ಕರ್ತವ್ಯಗಳನ್ನು ನಿಸ್ಪೃಹಳಾಗಿಯೂ, ಪ್ರೀತಿ, ಪ್ರೇಮ, ವಾತ್ಸಲ್ಯಗಳ ಪ್ರತೀಕವಾಗಿಯೂ ನಿರ್ವಹಿಸಿದ್ದರ ಜೊತೆಗೇ ಒಂದು ರಾಜ್ಯದ ಮಹಾರಾಣಿಯಾಗಿ, ಪ್ರಜೆಗಳ ಅಭಿಪ್ರಾಯಗಳನ್ನು ಗೌರವಿಸುವ ಸಹೃದಯಿಯೂ ಆಗಿ ಸ್ಪಂದಿಸುತ್ತ, ರಾಜಧರ್ಮಕ್ಕೆ ತಲೆಬಾಗಿ ನಡೆಯುವ ನಿಷ್ಠೆಯನ್ನೂ, ಚಿತ್ತದ ದೃಢತೆಯನ್ನೂ ಹೊಂದಿದ ಧೀರವ್ಯಕ್ತಿಯಾಗಿ ಸರ್ವರಿಗೂ ವಂದನೀಯಳಾಗುತ್ತಾಳೆ. ಸಬಲೆಯೂ, ಸ್ವಾಭಿಮಾನಿಯೂ, ಸದ್ಗುಣಗಳ ಗಣಿಯೂ ಆಗಿ "ಸ್ತ್ರೀರತ್ನ"ವೆಂಬ ಗೌರವಕ್ಕೆ ಸದಾ ಅರ್ಹಳಾಗುವ ಸೀತಾಮಾತೆಗೆ ಒಂದು ದೀರ್ಘದಂಡ ನಮಸ್ಕಾರ. ●

# ಶಿಕ್ಷಕನ ಮಹತ್ತ್ವ



ಒಮ್ಮೆ ಡಾ॥ ಕಲಾಮ್ ತನ್ನ ಸಹೋದ್ಯೋಗಿ ಸೃಜನ್‌ಪಾಲ್ ಸಿಂಹರನ್ನು ಕೇಳಿದರು- 'ನೀನೊಬ್ಬ ಶಿಕ್ಷಿತ ಯುವಕ. ಈ ಸಮಾಜ ನಿನ್ನನ್ನು ಯಾವ ರೀತಿ ನೆನಪಿಟ್ಟುಕೊಳ್ಳಬೇಕೆಂದು ನೀನು ಬಯಸುತ್ತಿ?'

ಇದನ್ನು ಕೇಳಿ ಸೃಜನ್‌ಪಾಲರು ಕ್ಷಣಕಾಲ ತಬ್ಬಿಬ್ಬಾದರು. ಈವರೆಗೆ ತಾನು ಜೀವನದಲ್ಲಿ ಹೇಳಿಕೊಳ್ಳುವಂತಹ ಯಾವುದೇ ಮಹತ್ತ್ವದ ಸಾಧನೆಯನ್ನು ಮಾಡಿಲ್ಲ. ಈ ಪ್ರಶ್ನೆಗೆ ಹೇಗೆ ಉತ್ತರಿಸಲಿ' ಎಂದು ಯೋಚಿಸತೊಡಗಿದರು.

ಸೃಜನ್‌ಪಾಲರ ಸಂದಿಗ್ಧತೆಯನ್ನು ಗಮನಿಸಿದ ಡಾ॥ ಕಲಾಮ್ – 'ಇಂತಹ ಸರಳ ಪ್ರಶ್ನೆಗೆ ಉತ್ತರ ಕೊಡಲು ಇಷ್ಟೊಂದು ಸಮಯ ಬೇಕೆ? ಈವರೆಗೆ ಮಾಡಿರುವ ಉತ್ತಮ ಕೆಲಸ ಅಥವಾ ಉಲ್ಲೇಖನೀಯ ಸಾಧನೆ ಹೇಳಿದರಾಯಿತು.

ಸೃಜನ್‌ಪಾಲರೆಂದರು- 'ನಾನು ಈವರೆಗೆ ಅಂತಹ ವಿಶೇಷ ಸಾಧನೆಯನ್ನೇನೂ ಮಾಡಿಲ್ಲ. ಇನ್ನು ಮುಂದೆ ಅಂತಹ ಯಾವುದಾದರೂ ಉತ್ತಮ ಕೆಲಸ ಮಾಡಬೇಕಾಗಿದೆ. ವಾಸ್ತವ ಹೀಗಿರಬೇಕಾದರೆ, ನಿಮ್ಮ ಪ್ರಶ್ನೆಗೆ ಹೇಗೆ ಉತ್ತರಿಸಲಿ?

ಡಾ। ಕಲಾಮ್ ಮುಂದುರಿಸಿದರು – 'ನೀನು ಯಾವುದರಿಂದ ಗುರುತಿಸಲ್ಪಡಬೇಕೆಂದಿರುವಿ- ನಿನ್ನ ಕೆಲಸದಿಂದಲೋ ಅಥವಾ ಸಾಧನೆಯಿಂದಲೋ? ಅದನ್ನಾದರೂ ಹೇಳಬಹುದೇ?'

ಸೃಜನ್‌ಪಾಲರೆಂದರು – 'ಎರಡರಿಂದಲೂ ! ಸರ್, ನೀವೊಬ್ಬ ವಿಜ್ಞಾನಿ, ಲೇಖಕ, ಭಾರತದ ಮಿಸೈಲ್ ಮ್ಯಾನ್ (ಕ್ಷಿಪಣಿ ಪುರುಷ) ಮತ್ತು ರಾಷ್ಟ್ರಪತಿಯೂ ಹೌದು. ಇವೆಲ್ಲದರಲ್ಲಿ ನಿಮ್ಮನ್ನು ಜನರು ಯಾವ ರೂಪದಲ್ಲಿ ನೆನಪಿಟ್ಟುಕೊಳ್ಳಬೇಕೆಂದು ನೀವು ಬಯಸುತ್ತೀರಿ?'

ಡಾ। ಕಲಾಮ್ ಹೇಳಿದರು – 'ನಾನು ಒಬ್ಬ ಶಿಕ್ಷಕನಾಗಿ ಗುರುತಿಸಲ್ಪಡಲು ಇಚ್ಛಿಸುತ್ತೇನೆ. ಶಿಲ್ಪಿ ಕಲ್ಲನ್ನು ಕೆತ್ತಿ ಸುಂದರ ಮೂರ್ತಿಯನ್ನು ನಿರ್ಮಿಸುವಂತೆಯೇ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು ತಿದ್ದಿ ತೀಡಿ ಅವರು ಜೀವನದಲ್ಲಿ ಯಶಸ್ವಿಯಾಗುವಂತೆ ತಯಾರು ಮಾಡುತ್ತಾನೆ. ಅದಕ್ಕಾಗಿಯೇ ಜನರು ನನ್ನನ್ನು ಶಿಕ್ಷಕನಾಗಿ ಗುರುತಿಸುವಂತಾಗಲಿ ಎಂದೇ ನನ್ನ ಆಶಯ'

ಈ ಮಾತುಗಳನ್ನು ಕೇಳಿ ಸೃಜನ್‌ಪಾಲರು ಡಾ। ಕಲಾಮ್‌ರಿಗೆ ತಲೆಬಾಗಿದರು. 'ಸರ್, ನೀವೀಗ ನನ್ನ ಶಿಕ್ಷಕರೂ ಹೌದು. ನಿಮ್ಮ ಈ ಮಾತುಗಳನ್ನು ಸದಾ ನೆನಪಿನಲ್ಲಿಟ್ಟಿರುತ್ತೇನೆ' ಎಂದರು. ●

# ಆಂಜನೇಯನ ಆದರ್ಶ ವ್ಯಕ್ತಿತ್ವ

**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



**ರಾ**ಮಾಯಣದಲ್ಲಿ ಆಂಜನೇಯನ ಪಾತ್ರ ಅಸದೃಶವಾದದ್ದು. ಆಂಜನೇಯ ಅನೇಕ ಆದರ್ಶ ಗುಣಗಳ ಗಣಿ. ವಾಲ್ಮೀಕಿ ರಾಮಾಯಣದಲ್ಲಿ ಆಂಜನೇಯನ ಪ್ರಶಂಸೆ ಬಹಳವಾಗಿ ಸಿಗುತ್ತದೆ. ಆಂಜನೇಯನು ಮಾಡಿದ ಸಮುದ್ರಲಂಘನ ಮತ್ತು ಸೀತಾನ್ವೇಷಣೆಯ ಕಾರ್ಯವನ್ನು ವರ್ಣಿಸಲು ಒಂದಿಡೀ ಸುಂದರಕಾಂಡ ವನ್ನೇ ವಾಲ್ಮೀಕಿಗಳು ಮೀಸಲಿಟ್ಟಿದ್ದಾರೆ. ಭಾರತದಾದ್ಯಂತ ಆಂಜನೇಯನ ದೇವಾಲಯಗಳೇ ಬಹುವಾಗಿ ನೋಡಲು ಸಿಗುತ್ತವೆ. ಮಕ್ಕಳ ದೃಷ್ಟಿಯಲ್ಲಿ ಹೇಳುವುದಾದರೆ ಆಂಜನೇಯ ಈ ಪ್ರಪಂಚದ ಮೊದಲ ಸೂಪರ್ ಹೀರೋ.

ಕೇಸರಿ ಮತ್ತು ಅಂಜನಾ ಎಂಬ ದಂಪತಿಗಳ ಮಗನಾಗಿ ಕಪಿಯ ರೂಪದಲ್ಲಿ ಜನಿಸಿದವನು ಆಂಜನೇಯ. ಅವನಿಗೆ ವಾಯುಪುತ್ರ, ಮಾರುತಿ, ಹನುಮಂತ ಮುಂತಾದ ಹಲವು ಹೆಸರುಗಳೂ ಇವೆ. ಪ್ರಸಕ್ತ ಕಾಲಮಾನದಲ್ಲಿ ಆಂಜನೇಯನ ಪಾತ್ರವನ್ನು ವಿಮರ್ಶಿಸಿದರೆ, ಜನರು ಕಲಿತುಕೊಳ್ಳಬೇಕಾದ ಹಲವು ಗುಣಗಳು ನಮಗೆ ಸಿಗುತ್ತವೆ. ಆಂಜನೇಯನ ಕಥಾ ಭಾಗ ಬಹುತೇಕ ಎಲ್ಲರಿಗೂ ತಿಳಿದೇ ಇರುವುದರಿಂದ, ಅವನ ಜೀವನದಿಂದ ನಾವು ಕಲಿಯಬಹುದಾದ ಗುಣಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವಿದು.



**1) ಚಾರಿತ್ರ್ಯ:** ನಮಗಿರುವ ಎಲ್ಲ ಗುಣಗಳಿಗೂ ಶೋಭೆ ಬರುವುದು ನಮ್ಮ ಉತ್ತಮ ಚಾರಿತ್ರ್ಯದಿಂದ. ಜ್ಞಾನ, ಪಾಂಡಿತ್ಯವಿದೂ ನಾವು ಚಾರಿತ್ರ್ಯ ಹೀನರಾಗಿದ್ದರೆ ಎಲ್ಲದಕ್ಕೂ ಮಸಿ ಬಳೆದಂತೆ. ಹನುಮಂತನದ್ದು ಶುದ್ಧ ಚಾರಿತ್ರ್ಯ.. ಪರಧನವನ್ನು ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡದ, ಅಖಂಡ ಬ್ರಹ್ಮಚರ್ಯವನ್ನು ಪಾಲಿಸಿದ ವ್ಯಕ್ತಿ. ಆಂಜನೇಯನ ಈ ಚಾರಿತ್ರ್ಯ ಶುದ್ಧಿಯೇ ಈ ದೇಶದ ಅದೆಷ್ಟೋ ಕ್ರಾಂರಿಕಾರಿಗಳಿಗೆ ಸ್ಫೂರ್ತಿಯಾಗಿತ್ತು. ಚಂದ್ರಶೇಖರ್ ಆಜಾದ್, ಜತೀಂದ್ರನಾಥ ಮುಖರ್ಜಿ ಅಂತಹ ಅಪ್ರತಿಮ ಹೋರಾಟಗಾರರು ಪರಿಶುದ್ಧ ಚಾರಿತ್ರ್ಯದಿಂದ, ತಮ್ಮ ಹೋರಾಟವನ್ನು ಒಂದು ಯಜ್ಞವನ್ನಾಗಿ ಮಾಡಿದರು. ವಿದ್ಯಾರ್ಥಿಗಳು, ಯುವಕರು ಇದರತ್ತ ಹೆಚ್ಚಿನ ಗಮನ ಕೊಡಬೇಕಾದ್ದು ಇಂದಿನ ಅನಿವಾರ್ಯ. ಲೌಕಿಕ ಆಕರ್ಷಣೆಗಳು ಹೆಚ್ಚಾಗಿರುವ ಕಾಲಘಟ್ಟದಲ್ಲಿ ಚಾರಿತ್ರ್ಯಹೀನರಾಗದೆ ಶುದ್ಧ ಜೀವನವನ್ನು ನಡೆಸಲು ಹನುಮಂತನಿಗಿಂತ ಉತ್ತಮ ಆದರ್ಶ ಸಿಗಲಾರ.

**2) ವಿವೇಕ :** ನಾವು 'ವಿವೇಕ' ಎಂಬ ಪದವನ್ನು ಜ್ಞಾನ, ಬುದ್ಧಿಶಕ್ತಿ ಗೆ ಸಮಾನಾರ್ಥಕವಾಗಿ ಬಳಸುತ್ತೇವೆ. ಆದರೆ ವಿವೇಕ ಪದದ ಅರ್ಥವೈಶಾಲ್ಯವೇ ಬೇರೆ. ವಿವೇಕ ಎಂದರೆ ಸರಿ–ತಪ್ಪುಗಳ ವಿಮರ್ಶೆ ಮಾಡಿ ಉತ್ತಮವಾದ ಕಾರ್ಯವನ್ನೇ ಮಾಡುವುದು.ನಮ್ಮಲ್ಲಿ ಅನೇಕರು ಬುದ್ಧಿವಂತರಾಗಿದ್ದರೂ ಸರಿ–ತಪ್ಪುಗಳ ವಿಮರ್ಶೆಯಲ್ಲಿ ಜಾರುವುದೇ ಹೆಚ್ಚು. ಆದರೆ ಹನುಮಂತನ ಪಾತ್ರದುದ್ದಕ್ಕೂ ಅವನ ವಿವೇಕದ ದರ್ಶನವಾಗುತ್ತದೆ. ಸೀತಾನ್ವೇಷಣೆಗೆ ಹೊರಟ ಸಂದರ್ಭದಲ್ಲಿ ಅನೇಕ ದಿನಗಳವರೆಗೆ ಯಾವ ಸುಳಿವೂ ಸಿಗದೇ ಇದ್ದಾಗ, ವಾಲಿಯ ಮಗನಾಗಿದ್ದ ಅಂಗದನು, "ಇಷ್ಟು ದಿನವಾದರೂ ಯಾವ ಫಲವೂ ಸಿಗಲಿಲ್ಲ, ಪುನಃ ರಾಜ್ಯಕ್ಕೆ ಹೋಗದೆ ಇಲ್ಲಿಯೇ ಕಾಡಿನ ಗುಹೆಯಲ್ಲಿ ವಾಸವಾಗಿದ್ದು ಬಿಡೋಣ" ಎಂದು ವಿಚಾರ ಮಾಡುತ್ತಾನೆ. ಜೊತೆಗಿದ್ದ ಎಲ್ಲ ಕಪಿಗಳೂ ಅವನನ್ನೇ ಸಮ್ಮತಿಸಿಸಿದರೂ ವಿವೇಕಿಯಾದ ಆಂಜನೇಯನೊಬ್ಬ ಎಲ್ಲರಿಗೂ ಕೊಟ್ಟ ಮಾತಿನ ಅರಿವನ್ನು ಮತ್ತೆ ಮೂಡಿಸಿ ಸರಿ–ತಪ್ಪುಗಳ ನಿರ್ಣಯವನ್ನು ಉಪದೇಶಿಸಿ ಎಲ್ಲರನ್ನೂ ಮತ್ತೆ ಉತ್ಸಾಹಿಗಳನ್ನಾಗಿ ಮಾಡುವ ಘಟನೆ ರಾಮಾಯಣದಲ್ಲಿ ಬರುತ್ತದೆ. ಒಬ್ಬ ರಾಯಭಾರಿಯಾಗಿ ಏನೆಲ್ಲಾ ಕಾರ್ಯಗಳನ್ನು ಮಾಡಬೇಕು, ಯಾರಿಗೆ ಇಂತಹ ಉತ್ತರ ಕೊಡಬೇಕು ಎಂಬ ಅದ್ಭುತ ವಿವೇಕ ಪ್ರಜ್ಞೆಯು ಹನುಮಂತನಲ್ಲಿದ್ದದ್ದು ಅವನ ಲಂಕಾಪ್ರವೇಶ ಮತ್ತು ಲಂಕಾದಹನದ ಸಂದರ್ಭಗಳಲ್ಲಿ ವ್ಯಕ್ತವಾಗುತ್ತದೆ.

**3) ವೀರತ್ವ –** ನಾವು ಸಾಮಾನ್ಯವಾಗಿ ಆಡುಭಾಷೆಯಲ್ಲಿ ವೀರ, ಶೂರ, ಧೀರ ಎಲ್ಲವನ್ನೂ ಸಮಾನಾರ್ಥಕ ಪದಗಳಂತೆ ಬಳಸುತ್ತೇವೆ. ಆದರೆ ವಾಸ್ತವದಲ್ಲಿ ಪ್ರತಿಯೊಂದಕ್ಕೂ ಬೇರೆ ಬೇರೆ ಅರ್ಥವಿದೆ. ವೀರ ಎಂದರೆ ಹಿಡಿದ ಕೆಲಸವನ್ನು ಅರ್ಧದಲ್ಲಿ ಬಿಡದೇ ಪರಿಪೂರ್ಣ ಗೊಳಿಸುವವನು ಎಂದರ್ಥ. ಇಡೀ ರಾಮಾಯಣದಲ್ಲಿ ಈ ವೀರ ಎಂಬ ಬಿರುದು ಆಂಜನೇಯನಿಗೆ ಮಾತ್ರವೆ. ಅದಕ್ಕೆಂದೇ "ವೀರ ಹನುಮಾನ್" ಎಂದು ಅವನ ಬಿರುದು. ಮೊದಲು ಸೀತಾನ್ವೇಷಣೆಯ ಸಂದರ್ಭವಿರಬಹುದು, ನಂತರದ ಸೇತುವೆ ನಿರ್ಮಾಣವಿರಬಹುದು, ಶ್ರೀರಾಮನು ಆಜ್ಞೆ ಮಾಡಿದ ಯಾವೊಂದು ಕೆಲಸವನ್ನೂ ಅರ್ಧಕ್ಕೆ ಬಿಟ್ಟವನಲ್ಲ. ಇದು ನಮಗೆಲ್ಲ ದೊಡ್ಡ ಆದರ್ಶ. ಹತ್ತಾರು ಕಾರಣಗಳನ್ನು ಹೇಳಿ ಆರಂಭಿಸಿದ ಕೆಲಸವನ್ನು ಮಧ್ಯಕ್ಕೆ ಬಿಡುವ ಪ್ರವೃತ್ತಿಯುಳ್ಳ ನಾವು ಹನುಮಂತನ ಈ ಒಂದು ಗುಣವನ್ನು ಮೈಗೂಡಿಸಿಕೊಂಡರೂ ನಮ್ಮ ಏಳಿಗೆ ಶತಸ್ಸಿದ್ಧ.

**ಪುಟ 11 ಕ್ಕೆ ➤**

➢ ಪುಟ 10 ರಿಂದ.....

**4) ವಿಧೇಯತೆ –** ಗುರು ಹಿರಿಯರಿಗೆ ವಿನೀತನಾಗಿರುವುದು ವಿದ್ಯಾರ್ಥಿಯ ಅಥವಾ ಸೇವಕನ ಬಹುಮುಖ್ಯ ಗುಣ. "ವಿದ್ಯಾ ವಿನಯೇನ ಶೋಭತೇ" ಎಂದೇ ನಾಣ್ನುಡಿ ಇದೆ. ನಾವು ಎಷ್ಟೇ ವಿನೀತರಾಗಿದ್ದರೂ ಎಷ್ಟೋ ಸಂದರ್ಭದಲ್ಲಿ ಅದನ್ನು ಕಳೆದುಕೊಳ್ಳುತ್ತೇವೆ. ಆದರೆ ಆಂಜನೇಯನಲ್ಲಿನ ವಿಧೇಯತೆ ಮಾತ್ರ ಅತ್ಯಂತ ಪರಿಪೂರ್ಣ ಮಟ್ಟದ್ದು. ಯಾವಾಗ ರಾಮನನ್ನು ತನ್ನ ದೈವ ಗುರು ಎಂದು ಆಂಜನೇಯನು ತನ್ನನ್ನು ಶ್ರೀರಾಮನಿಗೆ ಅರ್ಪಿಸಿದನೋ, ಅಂದಿನಿಂದ ಶ್ರೀರಾಮನಿಗೆ ವಿಧೇಯನಾದ ಸೇವಕನಾಗಿಬಿಟ್ಟ.

ರಾಮಾಯಣದಲ್ಲಿ ಬರುವ ಮತ್ತೊಂದು ಘಟನೆ. ರಾವಣ ಸಂಹಾರವಾಗಿ ಸೀತೆಯನ್ನು ಕರೆತಂದು ರಾಮನ ರಾಜ್ಯಾಭಿಷೇಕವೂ ಅಯೋಧ್ಯೆಯಲ್ಲಿ ಆಯಿತು. ಸೀತಾನ್ವೇಷಣೆಯ ಸಂದರ್ಭದಲ್ಲಿ ಮತ್ತು ಯುದ್ಧದಲ್ಲಿ ಅದ್ಭುತವಾಗಿ ಸೇವೆ ಮಾಡಿದ ಹನುಮಂತನಿಗೆ ಏನಾದರೂ ಕೊಡಬೇಕೆಂದೇ ರಾಮನ ಬಯಕೆ. ಅದಂತೂ ರಾಮರಾಜ್ಯ. ಇಂತಹ ವಸ್ತು ಸಿಗುವುದಿಲ್ಲ ಎಂಬ ಮಾತೆ ಇಲ್ಲ. ಇಂದ್ರನ ಸ್ವರ್ಗವನ್ನೂ ಮೀರಿಸುವ ವೈಭವ. ರಾಮ ಆಂಜನೇಯನಿಗೆ "ನಿನಗೆ ಏನು ಬೇಕೋ ಕೇಳು. ಅದನ್ನು ಈಡೇರಿಸುತ್ತೇನೆ. ಎಂದು ಹೇಳಿದ. ಯಾವ ವೈಭವವನ್ನೂ ಬಯಸದೆ ಆಂಜನೇಯ ಕೇಳಿದ್ದು ಕೊನೆಯವರೆಗೂ ಶ್ರೀರಾಮನ ಸೇವೆಯೊಂದೇ. ಇಂತಹ ವಿಧೇಯತೆಯೇ ಆಂಜನೇಯನನ್ನು ಇಂದಿಗೂ ಉದಾತ್ತ ವ್ಯಕ್ತಿಯನ್ನಾಗಿಸಿದೆ.

**5) ಬಲ –** ಆಂಜನೇಯನ ಬಲವನ್ನು ತಿಳಿಯದವರೇ ಇಲ್ಲ. ಸಮುದ್ರ ಲಂಘನ, ಲಂಕಾ ದಹನ, ಸಂಜೀವಿನೀ ಪರ್ವತವನ್ನು ಕೈಯಲ್ಲಿ ಹೊತ್ತಿ ತಂದದ್ದು, ಯುದ್ಧದ ಸಂದರ್ಭ ಎಲ್ಲಾದರಲ್ಲೂ ಆಂಜನೇಯನದ್ದೇ ಮೇಲುಗೈ. ಇವತ್ತಿಗೂ ಕುಸ್ತಿಪಟುಗಳನ್ನು ನಿರ್ಮಾಣ ಮಾಡುವ ಗರಡಿಮನೆಗಳಲ್ಲಿ ಆಂಜನೇಯನದ್ದೇ ಆರಾಧನೆ ನಡೆಯುತ್ತದೆ.ಸ್ವಾಮೀ ವಿವೇಕಾನಂದರು ಯಾವಾಗಲೂ ಹೇಳುತ್ತಿದ್ದ ಮಾತು "ಶಕ್ತಿಯೇ ಜೀವನ. ದೌರ್ಬಲ್ಯವೇ ಮರಣ.". ಯುವಕರು ಬಲಾಢ್ಯರೂ ಗುಣಾಢ್ಯರೂ ಆಗಿರಬೇಕೆಂಬುದು ಅವರ ಆಶಯವಾಗಿತ್ತು. ಆ ದಿಶೆಯಲ್ಲಿ ದೊಡ್ಡ ಸ್ಫೂರ್ತಿ ಆಂಜನೇಯ.

ರಾಮಾಯಣವನ್ನು ಆಳವಾಗಿ ಅಭ್ಯಸಿಸಿದರೆ ಆಂಜನೇಯನ ಇನ್ನೂ ಆದರ್ಶಮಯ ಗುಣಗಳು ಅನುಭವಕ್ಕೆ ಬರುತ್ತದೆ. ಅದೊಂದು ಶ್ರೇಷ್ಠ ವ್ಯಕ್ತಿತ್ವ. ಆಂಜನೇಯನನ್ನೇ ದೈವವೆಂದು ಭಾವಿಸಿದರೂ ಸರಿಯೇ ಅಥವಾ ಅದೊಂದು ಪಾತ್ರವೆಂದು ಭಾವಿಸಿದರೂ ಸರಿಯೇ, ವಾಲ್ಮೀಕಿ ಮಹರ್ಷಿಗಳು ಆಂಜನೇಯನ ಜೀವನ ಚಿತ್ರಣದ ಮೂಲಕ ಒಂದು ಉದಾತ್ತವಾದ ಜೀವನ ಶೈಲಿಯನ್ನು ವರ್ಣಿಸಿದ್ದಾರೆ ಎಂದರೆ ತಪ್ಪಾಗಲಾರದು.

ಶ್ರೀರಾಮದೂತ ಆಂಜನೇಯನ ಇಂತಹ ಗುಣಗಳು ನಮ್ಮೆಲ್ಲ ಯುವಕರಿಗೆ ಮಾರ್ಗದರ್ಶಕವಾಗಿ ಭಾರತೀಯರ ರಾಮರಾಜ್ಯದ ಕನಸು ನನಸಾಗಲಿ.

**ವಂದೇ ಮಾತರಂ.**

●

# ಅಮ್ಮನೆಂಬ ಮಹಾಪದವಿ



**ಮಗು...ನೀ ಎನ್ನ**
**ಉದರದೊಳು ಅಂಕುರಿಸಿ**
**ಮೊದಲ ಬಾರಿ ಮಿಸುಕಾಡಿದಾಗ**
**ಎನಗೂ ಮೊದಲಿಗೆ ಸೋಜಿಗವೋ ಸೋಜಿಗವಾಯಿತು**
**ಮಿಡಿವ ಎದೆಬಡಿತವದು**
**ಹೃದಯದೊಳಿಲ್ಲ..!**
**ಗರ್ಭದೊಳಡಗಿದೆ**
**ಅತ್ಯಮೂಲ್ಯ ಅಮೋಘ ಕ್ಷಣಗಳ ಅನುಭವಿಸಿದ ಅಮಿತಾನಂದದ**
**ಪರಿಯ ಹೇಳಲಾರೆ**
**ಹೇಳದೆಯೂ ಇರಲಾರೆ**
**ಏನೀ ಅಚ್ಚರಿಯೆಂದು ಕೇಳಿದೆ ಅಮ್ಮನ....**
**ಅಮ್ಮನಾಗಿ ಬೀಗುವ ಗುಂಗಿನ ಖುಷಿಯಲ್ಲಿ**
**ಅವಳೆಂದದ್ದು ನೆನಪಿದೆ ..**
**ಜೋಕೆ..! ಕಂದನ ಚಲನವಲನಗಳೆಡೆ ಇರಲಿ ನಿಗಾ**
**ಅಯ್ಯೋ...ನನಗೇನು ಅರಿವಿತ್ತು ಆಗ**
**ಕಚಗುಳಿಯಿಟ್ಟಂತೆ ಅದುರಾಡುತ**
**ಮುಂಬರುವ ನಗೆಯೂರ ನಗೆಹಬ್ಬದ ಸವಿಯ ತುತ್ತಾಗಿಸಿಕೊಳ್ಳುತ್ತಾ**
**ನಿನ ಬರವಿಗೆ ಕಾಯುವುದರ ಹೊರತಾಗಿ**
**ನವಮಾಸಗಳು ಜೀವದ್ರವದೊಳೆಲ್ಲ ಈಜಾಡಿ**
**ಭೂವಾಸಿಯಾಗಲು ಕಾತರಿಸಿ**
**ಧುಮುಕಿದ ದಿನವಾಯಿತು**
**ನಿನ್ನದೇ ಆದ ಜನುಮದಿನ**
**ನನಗೂ ನನ್ನದೇ ಆದ ಮರುಹುಟ್ಟು**
**ಹೇಳಲಾದೀತೇ**
**ಪರಮಸುಖ ತಂದ ತಾಯ್ತನದ**
**ಅಪರಿಮಿತ ಸಾರ್ಥಕತೆಯ ಆ ಗುಟ್ಟು.**

✍ **ಸುಮಂಗಳ ಹಾರೋಕೊಪ್ಪ**
ರಾಮನಗರ

# ಧರ್ಮದ ಅಲೆ – ಊರ್ಮಿಳೆ

ಶ್ರೀಮತಿ ಸುನೀತಾ ಗಂಗಾಧರ್
ರಾಮನಗರ

**ಭ**ರತಖಂಡದ 'ಸೂರ್ಯವಂಶ'ದ ಏಳನೆಯ ತಲೆಮಾರಿನ ಪ್ರಸಿದ್ಧ ರಾಜ 'ಇಕ್ಷ್ವಾಕು'. ಈತನ ಹೆಸರಿನಿಂದಲೇ ಸುಪ್ರಸಿದ್ಧಿ ಹೊಂದಿ ಬೆಳೆದ ಈ ರಾಜವಂಶ ಹರಿಶ್ಚಂದ್ರ, ಸಗರ, ಭಗೀರಥ, ದಶರಥ, ರಾಮನಂತಹ ರಾಜರನ್ನು ಹೊಂದಿತ್ತು. ಶ್ರೀ ರಘುರಾಮನಿಂದ 'ರಘುವಂಶ'ವೆಂದೆ ಪ್ರಸಿದ್ಧಿ ಪಡೆದು ಇತಿಹಾಸದಲ್ಲಿ ಇವರ ಕಥಾನಕ 'ಶ್ರೀ ರಾಮಾಯಣ' ಎಂಬ ಮಹಾಕಾವ್ಯವಾಗಿ ಆ ಕಾವ್ಯವೇ ಹಲವು ಟಿಸಿಲುಗಳಾಗಿ ಯುಗ–ಯುಗಕ್ಕೂ ಹಲವು ಸ್ವರೂಪದಲ್ಲಿ ಭರತ ಭೂಮಿಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಸನಾತನ ಇತಿಹಾಸವಾಗಿ ರೂಪುಗೊಂಡಿದೆ. ಜೊತೆಗೆ ವೇದದ ಸಾರಸತ್ವವನ್ನು ಹೊಂದಿ ಭಾರತೀಯರ ಅಸ್ಮಿತೆಯೂ ಆಗಿದೆ.



ಇಕ್ಷ್ವಾಕು ಮಹಾರಾಜನ ನೂರುಮಂದಿ ಮಕ್ಕಳಲ್ಲಿ ವಿಕುಕ್ಷಿ, ನಿಮಿ, ದಂಡಕರಿದ್ದು, ವಿಕುಕ್ಷಿಯಿಂದ ಮುಂದುವರೆದ ಸಂತತಿಯಲ್ಲೇ ಅರವತ್ತೈದನೆಯ ತಲೆಮಾರಿನ ಶ್ರೀರಾಮ ಸಹಿತ ಒಂದುನೂರ ಇಪ್ಪತ್ತೊಂದು (121) ತಲೆಮಾರಿನ ತನಕ ಅಯೋಧ್ಯೆಯ ಸಾಕೇತವನ್ನು ಆಳಿದರು. ಇಕ್ಷ್ವಾಕುವಿನ ಮತ್ತೋರ್ವ ಪುತ್ರ 'ನಿಮಿ'ಯ ಸಂತತಿಯು ಅರವತ್ನಾಲ್ಕು (64) ಪೀಳಿಗೆಯ ಅರಸೊತ್ತಿಗೆಯೊಂದಿಗೆ 'ಮಿಥಿಲೆ'ಯ ರಾಜ್ಯಭಾರ ನಡೆಸಿದರು.

ಈ ನಿಮಿಯ ವಂಶದಲ್ಲಿ ಜನಿಸಿದ್ದ ಪ್ರಸಿದ್ಧ ಕರ್ಮಯೋಗಿ ರಾಜನೇ ಬ್ರಹ್ಮಶ್ರೀ ಜನಕ ಮಹಾರಾಜ. ಅಷ್ಟಾವಕ್ರನೆಂಬ ಮಹಾಮೇಧಾವಿಯ ಶಿಷ್ಯನಾಗಿ ಬ್ರಹ್ಮಜ್ಞಾನ ಗಳಿಸಿ, ರಾಜನಾಗಿಯೂ ಋಷಿಸದೃಶ ಬಾಳಿದ ಧರ್ಮಬೀರು ಈ ಜನಕ ಮಹಾರಾಜ.

ಒಮ್ಮೆ ಜನಕನು ಪ್ರಜಾಹಿತಾರ್ಥವಾಗಿ ಯಜ್ಞದೀಕ್ಷೆ ಕೈಗೊಂಡು ಅದಕ್ಕಾಗಿ ಭೂಮಿ ಪೂಜೆಗೆ ನೇಗಿಲಿನಿಂದ ಹೊಲ ಉಳುವಾಗ ದೊರಕಿದ ಮಗುವೇ ಸೀತೆ. ಜನಕನ ಮುದ್ದಿನ ಮಗಳಾಗಿ ಅಯೋನಿಜೆ ಜಾನಕಿಯು ಇತಿಹಾಸದಲ್ಲಿ 'ಸ್ತ್ರೀ' ಕುಲದ ಮಕುಟ ಮಣಿಯಾಗಿ ಶೋಭಿತಳಾದಳು. ಜನಕನ ಜೀವನದಲ್ಲಿ ಸೀತಾಗಮನದ ನಂತರ ಔರಸ ಪುತ್ರಿಯಾಗಿ ಜನಿಸಿದವಳೇ 'ಊರ್ಮಿಳೆ'. ಧರ್ಮಭೀರು ಜನಕ ಜನಿಸಿದ ಈ ಮಗು 'ಎಲ್ಲರ ಜೀವನದಲ್ಲೂ ಧರ್ಮವನ್ನು ಅಲೆ ಅಲೆಯಾಗಿ ತರಲಿ' ಎಂಬ ಅರ್ಥಬರುವ ಹೆಸರನ್ನಿಟ್ಟು ಅದೇ ಹಾರೈಕೆ, ಸಂಸ್ಕಾರದೊಂದಿಗೆ ಬೆಳೆಸಿದ. ಜನಕ ಸಹೋದರನಾದ ಕುಶಧ್ವಜನ ಮಕ್ಕಳಾದ ಮಾಂಡವಿ ಹಾಗೂ ಶ್ರುತಕೀರ್ತಿಯರೊಂದಿಗೆ ಸೀತೆ, ಊರ್ಮಿಳೆ ಸಹೋದರಿಯರ ಬಾಲ್ಯ ಇಂತಹ ಸತ್ಕುಲದಲ್ಲಿ ಕಳೆಯಿತು.

'ರಾಮಾಯಣ'ವನ್ನು ಉದ್ಯಾನವನಕ್ಕೆ ಹೋಲಿಸಿದಲ್ಲಿ ಅಲ್ಲಿ ವಿವಿಧ ಪ್ರಕಾರದ ಸುಮಗಳಿದ್ದು, ಅವೆಲ್ಲ ತಮ್ಮದೇ ಆದ ಸೌಗಂಧಗಳನ್ನು ಹೊತ್ತಿವೆ. ಕೆಲ ಸುಮಗಳು ಒಳ್ಳೆಯ ಸೌರಭ(ಸುಗುಣ)ವನ್ನು ಹೊಂದಿದ್ದರೆ, ಇನ್ನೂ ಕೆಲವು (ದುರ್ಗುಣಗಳ) ಕಸ, ಕಳೆಗಳಿದ್ದಂತೆ. ಎಲ್ಲ ಸುಮಗಳು, ಸೌರಭಗಳು ಒಟ್ಟು ಗೂಡಿ ಒಂದು ವಿಶಿಷ್ಟ ಸೌಗಂಧ ಬೀರಿ ಮನವನ್ನು ಮುದಗೊಳಿಸುತ್ತವೆ. ಅಂತೆಯೇ ಇಲ್ಲಿ ಬರುವ ಪ್ರತಿಯೊಬ್ಬರ ಪಾತ್ರಗಳು ಅವರ ಜೀವನ ನಿರ್ವಹಣಾ ವಿಧಾನಗಳ ಮೂಲಕ ಜಗತ್ತಿಗೆ ಪಾಠವಾಗಿದ್ದಾರೆ. ರಾಮಾಯಣದಲ್ಲಿ ಕೆಲ ಪಾತ್ರಗಳ ಕುರಿತು ಅತ್ಯಧಿಕ ಮಾಹಿತಿ ದೊರಕದ, ಉಲ್ಲೇಖಿಸದ ಮಾತ್ರಕ್ಕೆ ಆ ವ್ಯಕ್ತಿಯ ಪಾತ್ರ ಗೌಣವೆಂದರ್ಥವಲ್ಲ. ರಾಮಾಯಣವೊಂದು ದೊಡ್ಡ ಭವನವಾಗಿದ್ದು, ಆ ಭವನವು ಸುಸ್ಥಿರವಾಗಿ ನಿಲ್ಲಲು ಕಾರಣೀಭೂತವಾದ ತಳಹದಿಯ ಅನೇಕ ಕಲ್ಲುಗಳ ಮಾದರಿಯಲ್ಲಿ ಕಣ್ಣಿಗೆ ಕಾಣದ ಅನೇಕ ಪಾತ್ರಗಳು ಕಾರಣೀಭೂತವಾಗಿದೆ. ಇಂತಹ ತಳಹದಿಯ ಕಲ್ಲುಗಳಲ್ಲಿ ಸುಮಿತ್ರೆ, ಭರತ, ಕೌಸಲ್ಯೆ, ಕಾರಣೀಭೂತವಾಗಿದೆ. ಇಂತಹ ತಳಹದಿಯ ಕಲ್ಲುಗಳಲ್ಲಿ ಸುಮಿತ್ರೆ, ಭರತ, ಕೌಸಲ್ಯೆ ಪರಮೆ, ಕೈಕಸೆ, ಶತ್ರುಲ್ಯರಂತೆ ಊರ್ಮಿಳೆಯೂ ಪ್ರಮುಖಳು. ಅವಳ ಕುರಿತಾಗಿ ಕೆಲ ಪುರಾಣಗಳಲ್ಲಿ, ಉತ್ತರಕಾಂಡಗಳಲ್ಲಿ ಕೆಲ ಪ್ರಸಂಗಗಳಲ್ಲಿ ವಿವರಿಸಲಾಗಿದೆ.

ಮಿಥಿಲೆಯ ರಾಜ ಜನಕ ವಿವಾಹ ವಯಸ್ಕಳಾದ ಭೂಮಿಜೆ ಸೀತೆಯ 'ಸ್ವಯಂವರ'ವನ್ನು ಏರ್ಪಡಿಸಿದ. 'ನಿಮಿ' ವಂಶಸ್ಥರ ಭಕ್ತಿಗೆ ಒಲಿದು ಶಿವಕೃಪೆಯಿಂದ ಪ್ರಾಪ್ತವಾದ ಶಿವಧನಸ್ಸನ್ನು ಯಾರು ಎತ್ತಿ ಶರಸಂಧಾನ ಗೈವರೋ ಅವರೇ 'ಸೀತಾವಲ್ಲಭ'ನಾಗುವ ಎಂಬ ಪಣವನ್ನು ಇಟ್ಟಿದ್ದ. ವಿಶ್ವಾಮಿತ್ರನೊಡಗೂಡಿ ಬಂದ ಸಾಕೇತದ ದಶರಥನಂದನ ರಾಮನು ಈ ಕಾರ್ಯಪೂರ್ಣಗೊಳಿಸಿ ಪಣವನ್ನು ಗೆದ್ದನು. ವಿಶ್ವಾಮಿತ್ರರ ಸಲಹೆಯಂತೆ ದಶರಥ ಹಾಗೂ ಜನಕರು ಈ ಸೀತಾ–ರಾಮರ ವಿವಾಹದ ಜೊತೆಗೆ ಲಕ್ಷ್ಮಣ ಊರ್ಮಿಳೆಯ, ಭರತ–ಮಾಂಡವಿಯ, ಶತ್ರುಘ್ನ–ಶುತಕೀರ್ತಿಯರ ವಿವಾಹವನ್ನು ನಿಶ್ಚಯಿಸಿ ಅದರಂತೆ ವಿವಾಹ ಸಂಪನ್ನಗೊಳಿಸಿದರು.

ಈ ರೀತಿ ಮಿಥಿಲೆಯ ನಾಲ್ವರೂ ಸಹೋದರಿಯರು ದಶರಥನ ಸೊಸೆಯರಾಗಿ ಅಯೋಧ್ಯೆಗೆ ಬಂದರು. ಕಾಲಾಂತರದಲ್ಲಿ ಅಯೋಧ್ಯೆಯಲ್ಲಿ ಕೈಕೇಯಿ ಮುಖಾಂತರ ಬಂದೊದಗಿದ ಪ್ರಮಾದಗಳಲ್ಲಿ ವನವಾಸವೂ ಒಂದು. ರಾಮನ ಪಾಲಿಗೆ ಬಂದ ಈ ವನವಾಸದಲ್ಲಿ ಪತ್ನಿಧರ್ಮ ನಿರ್ವಹಣೆಗೆ ಸೀತೆ, ಭ್ರಾತೃಧರ್ಮ ನಿರ್ವಹಣೆಗೆ ಲಕ್ಷ್ಮಣರು ಹಿಂಬಾಲಿಸಿ ನಿಂತರು. ಲಕ್ಷ್ಮಣ ಅನುಮತಿಗಾಗಿ ತಾಯಿ ಸುಮಿತ್ರೆಯ ಬಳಿ ತೆರಳಿದಾಗ ದಶರಥನಿಂದ ಸಾಧ್ವಿ ತಪಸ್ವಿನಿ ಎಂದೆ ಕರೆಸಿಕೊಂಡ ಸುಮಿತ್ರೆಯು ತನ್ನ ಅನುಮತಿ ನೀಡಿ ಲಕ್ಷ್ಮಣನಿಗೆ ಪತಿಧರ್ಮ

ಪುಟ 13 ಕ್ಕೆ ➤

➢ ಪುಟ 12 ರಿಂದ.....

ಮರೆಯದಂತೆ ಊರ್ಮಿಳೆಯ ಅಭಿಪ್ರಾಯ ಅನುಮತಿ ಕೋರುವಂತೆ ಹೇಳಿ ಕಳುಹಿಸಿದಳು. ಊರ್ಮಿಳೆ ಕಾಡಿನಲ್ಲಿ ತಾನೂ ಬರುವ ಕೋರಿಕೆಯಿಟ್ಟಾಗ ಲಕ್ಷ್ಮಣ ಅಲ್ಲಗಳೆದು ತನ್ನ ಪಾಲಿನ ಕರ್ತವ್ಯವನ್ನು ನಿಭಾಯಿಸಲು ಸಹಕರಿಸಿ, ಅಯೋಧ್ಯೆಯಲ್ಲಿದ್ದು ಹಿರಿಯರ ಯೋಗಕ್ಷೇಮ ನೋಡಿಕೊಳ್ಳುವಂತೆ ಹೇಳಿದ. ಸೀತೆಯೂ ಇದಕ್ಕೆ ಧ್ವನಿಗೂಡಿಸಿ ಚಿಕ್ಕವರಾದ ಸಹೋದರಿಯರಿಗೆ ಮಾರ್ಗದರ್ಶಿಯಾಗಿ ಅತ್ತೆ–ಮಾವನವರ ಕುಶಲ–ಕ್ಷೇಮಕ್ಕಾಗಿ ಅಯೋಧ್ಯೆಯಲ್ಲೇ ಇರುವಂತೆ ಸೂಚಿಸಿದರು. ಊರ್ಮಿಳೆ ತನ್ನ ಜವಾಬ್ದಾರಿಯನ್ನರಿತು ವೈಯಕ್ತಿಕ ಹಿತಾಸಕ್ತಿಯನ್ನು ತೊರೆದು ತನ್ನ ಪಾಲಿಗೆ ಬಂದ ಕರ್ತವ್ಯವನ್ನು ನಿಭಾಯಿಸಿದಳು.

ಊರ್ಮಿಳೆಯ ಕುರಿತಾಗಿ ಬರುವ ಒಂದು ಕಥನದಲ್ಲಿ ವನವಾಸಕ್ಕೆ ಹೊರಡುವ ದಿನ ಊರ್ಮಿಳೆಯು ನಿದ್ರಾದೇವಿಯನ್ನು ಪ್ರಾರ್ಥಿಸಿ ಅವಳಿಂದ ಲಕ್ಷ್ಮಣನ ಪಾಲಿನ ಹದಿನಾಲ್ಕು ವರುಷಗಳ ನಿದ್ರೆಯನ್ನು ತಾನು ಸ್ವೀಕರಿಸಿದಳು. ಕಾರಣವೇನೆಂದರೆ ತಂದೆ– ತಾಯಿ ಸದೃಶರಾದ ರಾಮ–ಸೀತೆಯರ ರಕ್ಷಣೆಗಾಗಿ ಸೇವಾ ಕರ್ತವ್ಯದಲ್ಲಿ ನಿರತ ಲಕ್ಷ್ಮಣನಿಂದ ಯಾವುದೇ ಚ್ಯುತಿ ಬಾರದಿರಲಿ ಎಂಬ ಉದಾತ್ತ ಮನೋಭಾವದಿಂದ ಊರ್ಮಿಳೆ ಆ ವರವನ್ನು ಬೇಡಿ ಪತಿಯ ಬಾಳಿನಲ್ಲಿ ನಿಜಕ್ಕೂ ಧರ್ಮವನ್ನು ಅಲೆ ಅಲೆಯಾಗಿ ತರುವ ಕೆಲಸವನ್ನೇ ಮಾಡಿದಳು. ಅವಳ ತ್ಯಾಗ ಹಾಗೂ ಸಂಯಮ, ಕರ್ತವ್ಯಪ್ರಜ್ಞೆ ಮನಗೊಂಡು ಸೀತೆಯು ವನವಾಸಕ್ಕೆ ತೆರಳುವ ಮುನ್ನ ಸಹೋದರಿ ಊರ್ಮಿಳೆಗೆ ಏಕಕಾಲದಲ್ಲಿ ಮೂರು ಕಾರ್ಯ ನಿರ್ವಹಿಸುವ ಶಕ್ತಿಯನ್ನು ವರಪ್ರಸಾದವಾಗಿ ನೀಡಿದಳೆಂಬ ಪ್ರತೀತಿ ಇದೆ. ಊರ್ಮಿಳೆಯ ಈ ತ್ಯಾಗದಿಂದಾಗಿಯೇ ಲಕ್ಷ್ಮಣ ಲಂಕಾ ಸಮರದಲ್ಲಿ 'ಇಂದ್ರಜಿತು'ವನ್ನು ವಧಿಸಲು ಸಾಧ್ಯವಾಯಿತು. ಇಂದ್ರಜಿತುವಿಗೆ ಬ್ರಹ್ಮದೇವನಿಂದ ವರ ಪ್ರಧಾನವಾಗಿತ್ತಂತೆ. ಯಾರು 14 ವರ್ಷ ನಿದಿರೆ, ಆಹಾರ ತ್ಯಜಿಸಿ ಬ್ರಹ್ಮಚಾರಿಯಾಗಿರುವರೋ ಆ ವ್ಯಕ್ತಿಯಿಂದ ಮಾತ್ರ ಇಂದ್ರಜಿತುವಿಗೆ ಸಾವಿತ್ತಂತೆ. ಈ ವರದ ಸಾಕಾರಕ್ಕೆ ಊರ್ಮಿಳೆ ಲಕ್ಷ್ಮಣನಿಗೆ ಹೆಗಲೆಣೆಯಾದುದು ಐತಿಹ್ಯ.

ಪತಿಯ ಮನದಿಚ್ಛೆ ಅರಿತು ಸತಿಧರ್ಮ ನಿಭಾಯಿಸಿ ಮಾತೃಸದೃಶ ಅತ್ತೆಯರ ಸೇವೆ ಮಾಡುತ್ತಾ ಕುಲಗೌರವಕ್ಕೆ ಚ್ಯುತಿ ಬರದಂತ ನಡವಳಿಕೆ ತೋರಿದ ಊರ್ಮಿಳೆ ಗುಣಗಳ ಖನಿಯೂ ಹೌದು. ಊರ್ಮಿಳೆಯ ಅಂತ್ಯಕಾಲದ ಕುರಿತಾಗಿ ಲಭ್ಯವಿರುವ ಮಾಹಿತಿ ಈ ಕಥೆ ಈ ರೀತಿ ಇದೆ.

ವನವಾಸ ಮುಗಿಸಿ ಬಂದ ನಂತರ ಹಲವಾರು ಘಟನೆಗಳು ಘಟಿಸಿದವು. ಲಕ್ಷ್ಮಣ ಹಾಗೂ ಊರ್ಮಿಳೆಯರಿಗೆ ಅಂಗದ ಮತ್ತು ಧರ್ಮಕೇತುವೆಂಬ ಇಬ್ಬರು ಮಕ್ಕಳು ಜನಿಸಿದರು. ಅನೇಕ ವರ್ಷಗಳ ಕಾಲ ಸುಭಿಕ್ಷ, ದಕ್ಷ ರಾಮರಾಜ್ಯ ನಡೆಯುತ್ತಿತ್ತು. ಅದೊಂದು ದಿನ ಶ್ರೀರಾಮನ ಭೇಟಿಗಾಗಿ ವಿಪ್ರವೇಷಧಾರಿ (ಕಾಲ) ಬ್ರಾಹ್ಮಣನು ಆಗಮಿಸಿದನು. ಆತ ಬ್ರಹ್ಮನ ಸಂದೇಶ ಶ್ರೀರಾಮನಿಗೆ ತಲುಪಿಸುವ ಉದ್ದೇಶದಿಂದ ಬಂದಿದ್ದು, ಏಕಾಂತದಲ್ಲಿ ಮಾತನಾಡುವ ಇಚ್ಛೆ ತಿಳಿಸಿದ. ಭೇಟಿಯ ಸಂದರ್ಭದಲ್ಲಿ ಯಾರೂ ಅಡ್ಡಿಯಾಗದಂತೆ, ಯಾರೇ ಅಡ್ಡಿಯಾದರೂ ಮರಣದಂಡನೆ ವಿಧಿಸುವಂತೆ ಆ ವಿಪ್ರ ಕೇಳಿದಾಗ, ಆಗಲಿ ಎಂದು ಶ್ರೀರಾಮ ಒಪ್ಪಿ ದ್ವಾರಬಾಗಿಲಿನ ಕಾವಲು ಕಾಯಲು ಸ್ವತಃ ಲಕ್ಷ್ಮಣನನ್ನೇ ನೇಮಿಸಿ, ಶಿಕ್ಷೆಯ ವಿವರವನ್ನೂ ನೀಡಿ ಏಕಾಂತದಲ್ಲಿ ಕಾಲನೊಂದಿಗೆ ಮಾತುಕತೆಗೆ ತೊಡಗಿದ. ಆ ಸಮಯದಲ್ಲೇ ಮಹರ್ಷಿ ದೂರ್ವಾಸರು ಆಗಮಿಸಿ ರಾಮನ ಭೇಟಿಗೆ ಬಯಸಿದರು. ಎಷ್ಟೇ ಅನುಜ್ಞೆ ಮಾಡಿದರೂ ಆ ಕ್ಷಣವೇ ರಾಮನ ಭೇಟಿ ಆಗದಿದ್ದ ಪಕ್ಷದಲ್ಲಿ ರಘುವಂಶದ ನಾಶ ನಿಶ್ಚಿತವೆಂದು ಕೋಪೋದ್ರಿಕ್ತ ಮುನಿಯು ಶಾಪಗೈಯಲು ನಿಂತಾಗ, ಲಕ್ಷ್ಮಣನು ರಘುಕುಲದ ಉಳಿವಿಗಾಗಿ, ತನ್ನ ಸಾವು ಖಚಿತವೆಂದು ಅರಿತೂ ರಾಜಾಜ್ಞೆ ಮೀರಿ ಭವನದೊಳಕ್ಕೆ ಹೋಗಿ ಶ್ರೀರಾಮಚಂದ್ರ ಹಾಗೂ ಕಾಲನ ಮಾತುಕತೆಗೆ ಅಡ್ಡಿ ತಂದು ವಿಷಯ ಅರುಹಿ ಹೊರಬಂದ. ಅತಿಥಿಗಳೆಲ್ಲರ ನಿರ್ಗಮನದ ನಂತರ ನಡೆದ ರಾಜಸಭೆಯಲ್ಲಿ ರಾಜ ರಘುರಾಮ ಗುರು ವಶಿಷ್ಠ ಹಾಗೂ ಹನುಮಾದಿ ಸಜ್ಜನರು ಸೂಚಿಸಿದ ಧರ್ಮ ಪ್ರಕಾರವಾಗಿ ರಾಜಾಜ್ಞೆ ಮೀರಿದ ಲಕ್ಷ್ಮಣನಿಗೆ ಮರಣದಂಡನೆಗೆ ಸದೃಶವಾದ (ಶಾಸ್ತ್ರ ಪ್ರಕಾರ ರಾಜನಿಂದ ಗುರು, ಸಹೋದರರು ಪರಿತ್ಯಕ್ತರಾಗುವುದು ಮೃತ್ಯುವಿಗೆ ಸಮಾನ) ಶಿಕ್ಷೆಯಾದ 'ಸಹೋದರ ಪರಿತ್ಯಾಗ' ನಿರ್ಧಾರ ಪ್ರಕಟಿಸಿದ. ಮೃತ್ಯುಗಿಂತ ಘೋರ ಶಿಕ್ಷೆಯನ್ನು ಹೊತ್ತು ಹೊರನಡೆದ ಲಕ್ಷ್ಮಣ ಊರ್ಮಿಳೆಗೆ ತನ್ನ ಹಾಗೂ ಮಕ್ಕಳನ್ನು ನೋಡಿಕೊಳ್ಳುವಂತೆ ತಿಳಿಸಿ, ಮತ್ತೆ ಮತ್ತೆ ಊರ್ಮಿಳೆಯ ಜೀವನದಲ್ಲಿ ತನ್ನಿಂದಾಗಿ ಬಂದೊದಗಿದ್ದ ಕಷ್ಟ ನೆನೆದು ರಾಜಾಜ್ಞೆಯಂತೆ ರಾಮ ರಾಜ್ಯವಿಲ್ಲದ ಗಡಿ ಹುಡುಕಿ ಹೊರಟ. ಊರ್ಮಿಳೆ ಮತ್ತೆ ತನಗೊದಗಿದ ಪತಿವಿಯೋಗವನ್ನು ನೆನೆದು ಆರ್ದ್ರಳಾಗಿ ಹೋದಳು. ಲಕ್ಷ್ಮಣನಿಲ್ಲದ ಜೀವನ ತನಗೆ ಬೇಡವೆಂದು ನಿರ್ಧರಿಸಿ ಸರಯೂ ದಡದಲ್ಲಿ ಚಿತೆಯನ್ನು ಸಿದ್ಧಗೊಳಿಸಿಕೊಂಡಳು.

ಇತ್ತ ಲಕ್ಷ್ಮಣ ರಾಮನಾಳ್ವಿಕೆ ಇಲ್ಲದ ಗಡಿಯನ್ನು ಕಾಣದೆ ಸರಯೂ ನದಿದಟಕ್ಕೆ ತೆರಳಿದ. ಅಲ್ಲಿ ತನಗಿಂತಲೂ ಮುಂಚಿತವಾಗಿ ಚಿತೆ ಸಿದ್ಧಪಡಿಸಿ ಪ್ರಾಯೋಪ್ರವೇಶಕ್ಕೆ ಸಿದ್ಧಳಾದ ಅವಳನ್ನು ಕಂಡು ಎಣೆಯಿಲ್ಲದ ಅವಳ ಪ್ರೀತಿ, ತ್ಯಾಗ, ಸಹನೆ, ಕರ್ತವ್ಯಪ್ರಜ್ಞೆ ನೆನೆದು ಅಂತರಾಳದಿಂದ ನಮನಗೈದ. ತಾಪಸಿ ಸದೃಶ ಬಾಳಿ ಅಗ್ನಿ ಪ್ರವೇಶಗೈದು ಪರಂಧಾಮಗೈದ ಊರ್ಮಿಳೆಯನ್ನು ಕಣ್ತುಂಬಿಕೊಂಡು ಲಕ್ಷ್ಮಣ ನದಿಯಲ್ಲಿ ಆಚಮನ ಪೂರೈಸಿ ಇಂದ್ರಿಯಗಳನ್ನು ನಿರೋಧಿಸಿ ಉಚ್ವಾಸ, ನಿಶ್ವಾಸಗಳನ್ನು ನಿಗ್ರಹಿಸಿ ಯೋಗ ಮಾರ್ಗದಿಂದ ಪ್ರಾಣವಾಯು ತ್ಯಜಿಸಿದ. ಉಕ್ಕೇರಿದ ಸರಯೂ ನದಿಯು ಕ್ಷಣಾರ್ಧದಲ್ಲಿ ಲಕ್ಷ್ಮಣನ ಮೃತ ಶರೀರವನ್ನು ತನ್ನ ಒಡಲಿನಲ್ಲಿ ತೆಗೆದುಕೊಂಡು ಮುಂದೆ ಹರಿದಳು. ಧರ್ಮವನ್ನೇ ಉಸಿರಾಗಿಸಿಕೊಂಡ ಸತಿ–ಪತಿಯರ ಜೀವನದ ಅಂತಿಮ ಯಾತ್ರೆಯ ವೇದಿಕೆಯಾಗಿ ಸರಯೂ ನದಿ ಪ್ರವಹಿಸುತ್ತಲೇ ಇದ್ದಳು.

ಊರ್ಮಿಳೆಯ ಪ್ರಸ್ತಾಪ ರಾಮಾಯಣದಲ್ಲಿ ಅಲ್ಪವಿದ್ದರೂ ಅವರು ಬಾಳಿ ಬದುಕಿನ ರೀತಿ ಆಗಿನ ಕೌಟುಂಬಿಕ, ಸಾಮಾಜಿಕ ಸಂಸ್ಕಾರಗಳನ್ನು ವಿಧಿತಗೊಳಿಸುತ್ತವೆ. ಜೀವನ ನಿರ್ವಹಣೆಗೆ ನೀಡಲಾಗುವ ಶಿಕ್ಷಣ ಅದೆಷ್ಟು ಮೌಲ್ಯಯುತ ವ್ಯಕ್ತಿಗಳನ್ನು ಹುಟ್ಟುಹಾಕುತ್ತವೆ ಎನ್ನುವುದನ್ನು ಗಮನಿಸಿ. ರಾಮಾಯಾಣದಲ್ಲಿ ಬರುವ ಒಂದೊಂದು ಪಾತ್ರಗಳಲ್ಲಿ ಈ ಐದು ಮೌಲ್ಯಗಳಾದ ವೈಯುಕ್ತಿಕ ಮೌಲ್ಯ, ಕೌಟುಂಬಿಕ ಮೌಲ್ಯ, ಸಾಮಾಜಿಕ ಮೌಲ್ಯ, ರಾಷ್ಟ್ರೀಯ ಮೌಲ್ಯ, ಆಧ್ಯಾತ್ಮಿಕ ಮೌಲ್ಯಗಳನ್ನು ನೀವು ಕಾಣಬಹುದು. ಇವಿಷ್ಟೂ ಮೌಲ್ಯಗಳನ್ನು ಧರಿಸಿದ ವ್ಯಕ್ತಿ ಚರಿತ್ರೆಯಲ್ಲಿ ಪೂಜನೀಯನಾಗಿ ಗುರುತಿಸಿಕೊಂಡರೆ, ಆ ಐದು ಮೌಲ್ಯಗಳಲ್ಲಿ ಒಂದರ ಅಭಾವವಿದ್ದವರು ಯಾವ ರೀತಿಯ ಅವಸಾನ ಕಾಣಬಹುದು ಎಂಬುದಕ್ಕೆ ಶತಮಾನಗಳ ಹಿಂದಿನ ಇತಿಹಾಸದ ಚರಿತ್ರೆಯಾದ ರಾಮಾಯಣವೇ ಸಾಕ್ಷಿ.

●

# ರಾಮಾಯಣದಲ್ಲಿ ಋಷಿಗಳ ವೈಭವ

■ ಡಾ॥ ವೆಂಕಟರಮಣ ದೇವರು ಭಟ್ಟ
ಪ್ರಧಾನ ಕಾರ್ಯದರ್ಶಿಗಳು, ಕ.ರಾ.ಮಾ.ಶಿ.ಸಂಘ
ಬೆಂಗಳೂರು ದಕ್ಷಿಣ ಜಿಲ್ಲೆ

ಭಾರತ ದೇಶವು ತನ್ನ ವಿಶಿಷ್ಟವಾದ ಸಂಸ್ಕೃತಿಯಿಂದಲೇ ಸಹಸ್ರಾರು ವರ್ಷಗಳಿಂದಲೂ ಸಮಸ್ತ ವಿಶ್ವದ ಗೌರವಕ್ಕೆ ಪಾತ್ರವಾಗಿದೆ. ಪ್ರಾಚೀನ ಕಾಲದಿಂದಲೂ ಈ ದೇಶವು ಜ್ಞಾನ ವಿಜ್ಞಾನಗಳ ನೆಲೆವೀಡು. ಇಲ್ಲಿನ ಸಂಸ್ಕೃತಿ ಆರ್ಯವೈದಿಕ ಸಂಸ್ಕೃತಿ, ಋಷಿ ಸಂಸ್ಕೃತಿ. ಈ ಸಂಸ್ಕೃತಿಯು ವೇದಗಳ ಕಾಲ, ರಾಮಾಯಣ– ಮಹಾಭಾರತಗಳ ಕಾಲದಿಂದ ಇಲ್ಲಿಯವರೆಗೂ ನಿರಂತರವಾಗಿ ಹರಿದು ಬಂದಿದೆ. ಋಷಿಗಳ ಕಠಿಣ ತಪಸ್ಸು, ತ್ರಿಕಾಲ ಜ್ಞಾನ, ದಿವ್ಯದೃಷ್ಟಿ ಮತ್ತು ಲೋಕಕಾರುಣ್ಯ ಇವುಗಳು ಇಂದಿಗೂ ಈ ದೇಶವನ್ನು ಕಾಪಾಡುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಜ್ಞಾನದಿಂದ ಸಂಸಾರದ ಕೊನೆಯನ್ನು ಮುಟ್ಟಿದವನು ಋಷಿ. 'ಋಷತಿ ಜ್ಞಾನೇನ ಸಂಸಾರಪಾರಮ್ ಋಷಿಃ'. ತಪಸ್ಸಿನಿಂದ ಸಕಲಪಾಪಗಳನ್ನು ಕಳೆದುಕೊಂಡವನೂ ಸತ್ಯಸಂಧನೂ ವೇದ ಮತ್ತು ವೇದಾಂಗಗಳ ತತ್ವವನ್ನು ಚೆನ್ನಾಗಿ ತಿಳಿದವನೂ ಋಷಿಯೆನಿಸುವನು.

**ತಪೋ ನಿರ್ಧೂತಪಾಪ್ಮಾನೋ ಯಾಥಾತಥ್ಯವಿಧಾಯಿನಃ।**
**ವೇದವೇದಾಂಗತತ್ತ್ವಜ್ಞಾಃ ಋಷಯಃ ಪರಿಕೀರ್ತಿತಾಃ॥**

ಋಷಿಗಳ ಜ್ಞಾನವನ್ನು ನಮ್ಮ ಜ್ಞಾನದಿಂದ ಅಳೆಯಲು ಸಾಧ್ಯವಿಲ್ಲ. ಒಂದೊಮ್ಮೆ ಹಾಗೆ ಮಾಡಹೋದರೆ ಅದು ಮೂರ್ಖತನದ ಪರಮಾವಧಿಯೆನಿಸುತ್ತದೆ. ಋಷಿಗಳ ಜ್ಞಾನ ವೇದಪೂರ್ವಕವಾಗಿ ಬಂದಿರುವಂತಹದ್ದು. ಅಸಾಧ್ಯವಾದದ್ದನ್ನು ಸಾಧ್ಯಮಾಡಿ ತೋರಿಸುವುದು ಋಷಿಗಳ ವಿಶೇಷ ಸಾಮರ್ಥ್ಯ. ಅದು ಪವಾಡವಲ್ಲ. ಸಂಸ್ಕೃತದ ಶ್ರೇಷ್ಠ ನಾಟಕಕಾರರಲ್ಲೊಬ್ಬರಾದ ಭವಭೂತಿಯು ಉತ್ತರರಾಮಚರಿತ ನಾಟಕದಲ್ಲಿ ಹೇಳುವ ಅದ್ಭುತ ಮಾತನ್ನು ನೆನಪಿಸಿಕೊಳ್ಳಬಹುದು– ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋನುಧಾವತಿ– ಪ್ರಾಚೀನ ಮಹರ್ಷಿಗಳ ನುಡಿಗೆ ಅನುಸಾರವಾಗಿಯೇ ವಸ್ತುಗಳು ಓಡಿಬರುತ್ತವೆ. ಅಂತಹ ಸಾಮರ್ಥ್ಯ ಋಷಿಗಳ ವಾಣಿಯಲ್ಲಿ ಇರುತ್ತದೆ. ಅವರು ನಗರದಿಂದ ದೂರ ಇದ್ದು ಆಶ್ರಮದಲ್ಲಿ ಅಧ್ಯಾತ್ಮಸಾಧನೆ ಮಾಡುತ್ತಿದ್ದರೂ ಅದರ ಫಲವನ್ನು ಮಾತ್ರ ಸ್ವಾರ್ಥಕ್ಕಾಗಿ ಬಳಸದೇ ಲೋಕಕಲ್ಯಾಣಕ್ಕಾಗಿ ಬಳಸಿರುವುದು ರಾಮಾಯಣಾದಿ ಗ್ರಂಥಗಳ ಅವಲೋಕನದಿಂದ ಕಂಡುಬರುತ್ತದೆ. ಅವರು ಜನರ ಕಷ್ಟವನ್ನು ತಮ್ಮ ಕಷ್ಟವೆಂದೇ ಭಾವಿಸಿ ಆತ್ಮೀಯತೆಯಿಂದ ಸ್ಪಂದಿಸುತ್ತಿದ್ದರು. ರಾಮಾಯಣದುದ್ದಕ್ಕೂ ಹಾಸುಹೊಕ್ಕಾಗಿ ಅದೆಷ್ಟೋ ಇಂತಹ ಮಹರ್ಷಿಗಳ ದರ್ಶನವಾಗುತ್ತದೆ.

**ಬ್ರಹ್ಮರ್ಷಿ ವಸಿಷ್ಠರು–** ಸೂರ್ಯವಂಶದ ಚಕ್ರವರ್ತಿಗಳ ಪುರೋಹಿತರು. ಬ್ರಹ್ಮನ ಮಾನಸಪುತ್ರರು. ಅನೇಕ ವೇದಮಂತ್ರಗಳನ್ನು ಸಾಕ್ಷಾತ್ಕರಿಸಿದವರು. ಧರ್ಮಾತ್ಮನಾದ ದಿಲೀಪ ಮಹಾರಾಜನು ಎಷ್ಟೋ ವರ್ಷಗಳ ಕಾಲ ಮಕ್ಕಳಾಗದ ಕಾರಣ ಕೊರಗಿನಲ್ಲಿದ್ದಾಗ ತಮ್ಮ ತಪಶ್ಶಕ್ತಿಯಿಂದ ಕಾರಣವನ್ನು ತಿಳಿದು, ಅದಕ್ಕೆ ತಮ್ಮ ಆಶ್ರಮದಲ್ಲಿರುವ ಕಾಮಧೇನುವಿನ ಮಗಳಾದ ನಂದಿನಿಧೇನುವಿನ ಸೇವೆಯನ್ನು ರಾಜರಾಣಿ ಇಬ್ಬರೂ ನಿರಂತರವಾಗಿ ಮಾಡಬೇಕೆಂದು ಪರಿಹಾರವನ್ನು ಹೇಳಿ ಪುತ್ರನನ್ನು ಪಡೆಯುವಂತೆ ಮಾಡಿದ ಮಹಾತ್ಮರು. ದಶರಥಮಹಾರಾಜನ ಎಷ್ಟೋ ಧರ್ಮಸಂಕಟಗಳಿಗೆ ಶಾಸ್ತ್ರಪ್ರಮಾಣಗಳಿಂದ ರಾಜಧರ್ಮವನ್ನು



ಬೋಧಿಸಿದ ಧಾರ್ಮಿಕ ಪುರುಷರು. ಅತ್ಯಂತ ಸುಂದರನೂ, ಆನಂದದಾಯಕನೂ, ಜಗತ್ತಿನ ಮೊದಲ ಮಂಗಲಸ್ವರೂಪನೂ ಆದ ಕೌಸಲ್ಯೆಯ ಮಗುವಿಗೆ 'ರಾಮ' ಎಂದು ಹೆಸರಿಸಿದ, ಹಾಗೂ ದಶರಥನ ಮಕ್ಕಳಿಗೆ ಕ್ಷತ್ರಿಯರಾಜರಿಗೆ ಯೋಗ್ಯವಾದ ಸಂಸ್ಕಾರ ವಿದ್ಯೆಯನ್ನು ಹೇಳಿಕೊಟ್ಟ ಶ್ರೇಷ್ಠಗುರುಗಳು. ಪರಮಸಾಧ್ವಿ ಅರುಂಧತಿಯು ಈ ಮಹರ್ಷಿಯ ಪತ್ನಿ.

**ಋಷ್ಯಶೃಂಗ ಮಹರ್ಷಿಗಳು–** ಒಬ್ಬ ಬ್ರಹ್ಮರ್ಷಿ, ವಿಭಾಂಡಕ ಮಹರ್ಷಿಗಳ ಮಗ. ಅವನು ಅರಣ್ಯದಲ್ಲಿಯೇ ಪೋಷಿಸಲ್ಪಟ್ಟು ಯಾವಾಗಲೂ ಅಲ್ಲಿಯೇ ಸಂಚರಿಸುತ್ತ ತಪಸ್ವಿಯಾಗಿರುವನು. ಅವನು ತಪಸ್ಸು ವೇದಾಧ್ಯಯನಗಳಲ್ಲಿ ನಿರತನಾಗಿ ಕಾಡಿನಲ್ಲಿಯೇ ಇರತಕ್ಕವನು. ಅಗ್ನಿಯ ಉಪಾಸನೆ, ತಂದೆಯ ಶುಶ್ರೂಷೆಯೊಂದನ್ನು ಬಿಟ್ಟು ಹೊರಗಿನ ವ್ಯವಹಾರವೇನೂ ತಿಳಿಯದವನು. ಅಸಾಧಾರಣ ತಪಶ್ಶಕ್ತಿಯನ್ನು ಹೊಂದಿದ್ದವನು. ಒಮ್ಮೆ ಅಂಗದೇಶದಲ್ಲಿ ಅನಾವೃಷ್ಟಿ ತಲೆದೋರಿದಾಗ ಅಂಗದೇಶಾಧಿಪನಾದ ರೋಮಪಾದ ಈತನ್ನು ಕರೆದೊಯ್ದು ತನ್ನ ದೇಶದಲ್ಲಿ ಸುವೃಷ್ಟಿಯನ್ನು ಪಡೆದ. ದಶರಥಮಹಾರಾಜನು ಪುತ್ರಕಾಮನೆಗಾಗಿ ಋಷ್ಯಶೃಂಗರನ್ನು ಪ್ರಧಾನ ಋತ್ವಿಜನನ್ನಾಗಿ ಮಾಡಿಕೊಂಡು ಅಶ್ವಮೇಧ ಮತ್ತು ಪುತ್ರಕಾಮೇಷ್ಟಿ ಯಾಗವನ್ನು ಮಾಡಿ ಯಶಸ್ಸನ್ನು ಪಡೆದನು.

**ವಿಶ್ವಾಮಿತ್ರ ಮಹರ್ಷಿಗಳು–** ವಿಶ್ವಾಮಿತ್ರ ಋಷಿಗಳು ಕುಶಿಕರಾಜನ ವಂಶದಲ್ಲಿ ಗಾಧಿರಾಜನ ಪುತ್ರನಾಗಿ ಹುಟ್ಟಿದ ಒಬ್ಬ ಕ್ಷತ್ರಿಯ. ವಸಿಷ್ಠಮಹರ್ಷಿಯಿಂದ ಸತ್ಕೃತನಾಗಿ ನಂದಿನೀ ಧೇನುವಿನ ಮಹಿಮೆಯನ್ನು ಕಂಡು ಅದನ್ನು ತನಗೆ ಕೊಡಬೇಕೆಂದು ಬೇಡಲು ವಸಿಷ್ಠರು ಸಮ್ಮತಿಸಲಿಲ್ಲ. ಅದಕ್ಕಾಗಿ ಬಹಳ ಹೋರಾಡಿ ಬ್ರಹ್ಮ ದಂಡದಿಂದ ಪರಿಭವ ಹೊಂದಿ 'ದಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ


ಪುಟ 15 ಕ್ಕೆ ➤

➢ ಪುಟ 14 ರಿಂದ...



ಬಲಂ ಬಲಮ್' ಈ ಕ್ಷತ್ರಿಯ ಬಲಕ್ಕೆ ಧಿಕ್ಕಾರ! ಬ್ರಹ್ಮತೇಜೋಬಲವೇ ಬಲ. ಒಂದೇ ಬ್ರಹ್ಮ ದಂಡವು ನನ್ನ ಸಮಸ್ತ ದಿವ್ಯಾಸ್ತ್ರಗಳನ್ನು ನುಂಗಿಹಾಕಿತು. ಆದ್ದರಿಂದ ಬ್ರಹ್ಮರ್ಷಿಯಾಗಬೇಕೆಂದು ನಿಶ್ಚಯಿಸಿ, ಅನೇಕ ಸಹಸ್ರವರ್ಷಗಳ ಕಾಲ ತಪಸ್ಸನ್ನಾಚರಿಸಿ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡು, ಕೊನೆಗೆ ಬ್ರಹ್ಮರ್ಷಿಯೆನಿಸಿಕೊಂಡರು. ಈ ಮಹರ್ಷಿಗಳು ಯಾಗರಕ್ಷಣೆಯ ನೆಪದಿಂದ ರಾಮಲಕ್ಷ್ಮಣರನ್ನು ಕರೆದುಕೊಂಡು ಹೋಗಿ ಬಲ ಮತ್ತು ಅತಿಬಲ ಮುಂತಾದ ದಿವ್ಯಾಸ್ತ್ರಗಳನ್ನು ಉಪದೇಶಿಸಿ ತಾಟಕಾದಿ ರಾಕ್ಷಸರನ್ನು ಸಂಹಾರ ಮಾಡಿಸಿ, ಜನಕರಾಜನ ಆಹ್ವಾನದ ಮೇರೆಗೆ ಮಿಥಿಲಾಪಟ್ಟಣವನ್ನು ಪ್ರವೇಶಿಸಿ, ಶ್ರೀರಾಮನಿಂದ ಶಿವಧನುರ್ಭಂಗ ಮಾಡಿಸಿ ಸೀತಾಸ್ವಯಂವರ ಮಾಡಿಸಿದರು.

**ಭರದ್ವಾಜ ಮಹರ್ಷಿಗಳು–** ವಾಲ್ಮೀಕಿಮಹರ್ಷಿಗಳ ಶಿಷ್ಯರು. ಪ್ರಯಾಗಕ್ಷೇತ್ರದ ಸಮೀಪದಲ್ಲಿ ಆಶ್ರಮ. ಶ್ರೀರಾಮನು ದಂಡಕಾರಣ್ಯಕ್ಕೆ ಹೋದಾಗ ಇವರ ಆಶ್ರಮಕ್ಕೆ ಹೋಗಿ ತನಗೆ ವಾಸಯೋಗ್ಯವಾದ ಪ್ರದೇಶಯಾವುದೆಂದು ಕೇಳಲಾಗಿ, ಇಲ್ಲಿಯೇ ಹತ್ತು ರಹದಾರಿ ದೂರದಲ್ಲಿರುವ ಚಿತ್ರಕೂಟಪರ್ವತವು ಯೋಗ್ಯವಾಗಿದೆಯೆಂದು ತಿಳಿಸಿದರು. ಮುಂದೆ ರಾವಣನ ವಧೆಯ ನಂತರವೂ ಶ್ರೀರಾಮನು ಸೀತಾ, ಲಕ್ಷ್ಮಣ, ವಿಭೀಷಣ, ಸುಗ್ರೀವಾದಿಗಳೊಂದಿಗೆ ಅಯೋಧ್ಯೆಗೆ ಹೊರಟು ನಡುದಾರಿಯಲ್ಲಿ ಭರದ್ವಾಜರ ಆಶ್ರಮಕ್ಕೆ ಬಂದು, ತಾವು ಬರುತ್ತಿರುವ ಸಮಾಚಾರವನ್ನು ಭರತನಿಗೆ ತಿಳಿಸುವಂತೆ ಹನುಮಂತನನ್ನು ಕಳುಹಿಸಿದನು.



**ಬ್ರಹ್ಮರ್ಷಿ ವಾಲ್ಮೀಕಿ–** ಪ್ರಚೇತಸ ಮುನಿಯ ಮಗ. ಈತ ಕಾಡಿನಲ್ಲಿ ಬೇಡರ ಸಂಗಡ ಸೇರಿ ದಾರಿಗಳ್ಳನಾಗಿದ್ದ. ಒಮ್ಮೆ ಸಪ್ತರ್ಷಿಗಳನ್ನು ಇದಿರಿಸಿ, ಅವರ ಮೂಲಕ ಜ್ಞಾನವನ್ನು ಪಡೆದು ರಾಮಮಂತ್ರದ ಜಪದಿಂದ ಮೈಮರೆತಿದ್ದಾಗ ಈತನ ಮೇಲೆ ಹುತ್ತ ಬೆಳೆದಿತ್ತು. ಮತ್ತೆ ಸಪ್ತರ್ಷಿಗಳು ಬಂದು ಈತನನ್ನು ಎಚ್ಚರಗೊಳಿಸಿ ವಾಲ್ಮೀಕಿ ಎಂದು ಹೆಸರಿಟ್ಟರು. ರಾಮನು ಸೀತಾಲಕ್ಷ್ಮಣರೊಡನೆ ವನವಾಸಕ್ಕೆ ಹೋದಾಗ ಚಿತ್ರಕೂಟವನದಲ್ಲಿ ವಾಲ್ಮೀಕಿ ಅವರನ್ನು ಸತ್ಕರಿಸಿದರು. ಮುಂದೆ ನಾರದರು ಉಪದೇಶಿಸಿದ ಸಂಕ್ಷೇಪ ರಾಮಾಯಣವನ್ನು ಬ್ರಹ್ಮದೇವರ ಅಪ್ಪಣೆಯಂತೆ ವಿಸ್ತೃತವಾಗಿ ಬರೆದರು. ಲಕ್ಷ್ಮಣನು ರಾಮನ ಅಪ್ಪಣೆಯಂತೆ ಅರಣ್ಯದಲ್ಲಿ ಬಿಟ್ಟುಹೋದಾಗ, ವಾಲ್ಮೀಕಿ ಆಕೆಯನ್ನು ಆಶ್ರಮಕ್ಕೆ ಕರೆದೊಯ್ದು ಆದರಿಸಿದರು. ಸೀತೆಯು ಅವಳಿಮಕ್ಕಳಿಗೆ ಜನ್ಮ ನೀಡಲಾಗಿ ಅವರಿಗೆ ಲವ–ಕುಶರೆಂದು ನಾಮಕರಣ ಮಾಡಿ ಉಪನಯನಾದಿ ಯೋಗ್ಯಸಂಸ್ಕಾರವನ್ನು ನೀಡಿ, ಕ್ಷತ್ರಿಯರಿಗೆ ಯೋಗ್ಯವಾದ ವಿದ್ಯೆಯನ್ನು ಹೇಳಿಕೊಟ್ಟು ದಿವ್ಯಾಸ್ತ್ರಗಳ ಉಪದೇಶವನ್ನು ಮಾಡಿದರು. ತಾವು ಬರೆದಿರುವ ರಾಮಾಯಣವನ್ನು ಶ್ರೀರಾಮನ ಸಭೆಯಲ್ಲಿ ಲವಕುಶರ ಮೂಲಕ ಸುಶ್ರಾವ್ಯವಾಗಿ ಹಾಡಿಸಿದರು.

**ಅಗಸ್ತ್ಯ ಮಹರ್ಷಿಗಳು–** ಮಿತ್ರಾವರುಣರೆಂಬ ಋಷಿಗಳ ಮಗ. ಒಂದು ಸಲ ವಿಂಧ್ಯಾಚಲವು ಸೂರ್ಯನ ಗತಿಯನ್ನು ತಡೆಯುವುದಕ್ಕಾಗಿ ಬೆಳೆಯತೊಡಗಿತು. ಆಗ ಅಗಸ್ತ್ಯಮುನಿಗಳು ಆಜ್ಞಾಪಿಸಿದ್ದರಿಂದ ಅವರ ಆಜ್ಞೆಗೆ ತಲೆಬಾಗಿ ಆ ಶೈಲವು ಬೆಳೆಯದೇ ಅಲ್ಲಿಗೇ ನಿಂತಿತು. ಬೆಟ್ಟದ ಬೆಳವಣಿಗೆಯನ್ನು ನಿಲ್ಲಿಸಿದನಾದ್ದರಿಂದ ಅಗಸ್ತ್ಯ ಎಂಬ ಹೆಸರು ಬಂತು. ಬ್ರಾಹ್ಮಣರನ್ನು ಸಾಯಿಸಿ ತೊಂದರೆ ಕೊಡಿತ್ತಿದ್ದ ಇಲ್ವಲ ಮತ್ತು ವಾತಾಪಿ ರಾಕ್ಷಸರನ್ನು ಸಾಯಿಸಿದ ಮಹಾಮಹಿಮರು. ವಿದರ್ಭ ರಾಜಕುಮಾರಿಯಾದ ಲೋಪಾಮುದ್ರೆ ಇವರ ಹೆಂಡತಿ. ಕಾಲಕೇಯರೆಂಬ ರಾಕ್ಷಸರು ಸಮುದ್ರದ ಒಳಗಡೆ ಅಡಗಿಕೊಂಡು ರಾತ್ರಿಯಲ್ಲಿ ಜನರನ್ನು ಹಿಂಸಿಸುತ್ತಿದ್ದರಿಂದ ವಿಷ್ಣುವಿನ ಅಪ್ಪಣೆಯಂತೆ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಅಗಸ್ತ್ಯರು ಸಮುದ್ರಪಾನವನ್ನು ಮಾಡಿದುದರಿಂದ ದೇವತೆಗಳು ರಾಕ್ಷಸರನ್ನು ಜಯಿಸಲು ಸಹಾಯುವಾಡಿದ ಪರೋಪಕಾರಿಗಳು. ಮಹಾತೇಜಸ್ವಿಗಳಾದ ಭಗವಾನ್ ಅಗಸ್ತ್ಯರು ರಾಮಲಕ್ಷ್ಮಣಸೀತೆಯರು ಆಶ್ರಮಕ್ಕೆ ಬಂದಾಗ ಸತ್ಕರಿಸಿ, ಮಹಾವಿಷ್ಣುವು ದೈತ್ಯರವಿರುದ್ಧ ಉಪಯೋಗಿಸಿದ್ದ ರತ್ನಖಚಿತವಾದ ಚಾಪವನ್ನು, ಇಂದ್ರನ ಧನಸ್ಸನ್ನು, ಚಿನ್ನದ ಹಿಡಿಯುಳ್ಳ ಖಡ್ಗವನ್ನು, ಅಕ್ಷಯ ಬತ್ತಳಿಕೆಯನ್ನು, ಅಮೋಘಾಸ್ತ್ರವನ್ನು ನೀಡಿ ಅನುಗ್ರಹಿಸಿದರು.

ಋಷೀಣಾಮ್ ಅಗ್ನಿಕಲ್ಪಾನಾಂ ದಂಡಕಾರಣ್ಯವಾಸಿನಾಮ್ ಅಗ್ನಿಯಂತೆ ಪರಮತೇಜಸ್ವಿಗಳಾದ ನಾನಾರೀತಿಯಲ್ಲಿ ತಪಸ್ಸುಮಾಡುತ್ತಿರುವ ಸಹಸ್ರಾರು ಋಷಿಗಳು ದಂಡಕಾರಣ್ಯದಲ್ಲಿ ವಾಸವಾಗಿದ್ದರು ಎಂಬುದಾಗಿ ವಾಲ್ಮೀಕಿರಾಮಾಯಣದಲ್ಲಿ ನಾರದರು ಹೇಳುವ ಮಾತು. ಋಷಿಗಳು ವಿಭಿನ್ನಜಾತಿ ಸ್ತ್ರೀಯರಲ್ಲಿ ಜನಿಸಿವರಾದರೂ ಅವರ ತಪಸ್ಸು, ವಿದ್ಯೆಗಳೇ ಅವರ ಮಹಿಮೆಗೆ ಕಾರಣ. ಸತ್ವರಜಸ್ತಮಗುಣಗಳಿಂದ ಮುಕ್ತರಾದ ಋಷಿಗಳಿಗೆ ಯಾವ ವಿಧಿ–ನಿಷೇಧಗಳೂ ಇರುವುದಿಲ್ಲ. ಅವರು ಸರ್ವತಂತ್ರಸ್ವತಂತ್ರರು. ತ್ರಿಕಾಲಜ್ಞಾನಿಗಳಾದ್ದರಿಂದ ಇದ್ದದ್ದನ್ನು ಇದ್ದಹಾಗೇ ಬರೆಯುತ್ತಾರೆ. ಅವರು ಯಾರನ್ನೂ ಕೂಡ ಮೆಚ್ಚಿಸಬೇಕಾಗಿಲ್ಲ. ಹಾಗಾಗಿ ವಾಲ್ಮೀಕಿ ರಾಮಾಯಣ ಮತ್ತು ವ್ಯಾಸರ ಮಹಾಭಾರತ ಪ್ರಮಾಣಭೂತವಾದದ್ದು ಮತ್ತು ಪಾರಾಯಣಯೋಗ್ಯವಾದ ಪವಿತ್ರ ಗ್ರಂಥಗಳು. ●

# ಗಾಂಧಿ ಕಂಡ ರಾಮರಾಜ್ಯ

ಡಾ॥ ಟಿ. ಎನ್. ಲೋಕೇಶ್
ಪ್ರಾಧ್ಯಾಪಕರು ಮತ್ತು ಚಿಂತಕರು
ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು
ಜಯನಗರ, ಬೆಂಗಳೂರು–11



ಶ್ರೀರಾಮಚಂದ್ರ ಭಾರತೀಯರ ಶೀಲ ಮತ್ತು ಸಂಸ್ಕೃತಿಗಳ ಮೇಲೆ ಅಚ್ಚಳಿಯದ ಅನನ್ಯ ಪ್ರಭಾವದ ಮುದ್ರೆ ಒತ್ತಿದ ಆದರ್ಶ ಪುರುಷ. ಶ್ರೀರಾಮಚಂದ್ರ ತಲೆತಲಾಂತರಗಳಿಂದ ಕೋಟಿ ಕೋಟಿ ಭಾರತೀಯರ ಹೃದಯಾಳದಲ್ಲಿ ನೆಲೆ ನಿಂತ ಸರ್ವಕಾಲಿಕ ಮೌಲ್ಯಗಳ ಪ್ರತಿರೂಪ. ಶ್ರೀರಾಮನ ಪುಣ್ಯಪಾದ ಸ್ಪರ್ಶದಿಂದ ಪುನೀತವಾದ ಪಾವನ ನಾಡಿನ ವಾರಸುದಾರರು ನಾವು ಎಂಬುದು ವಾಸ್ತವವಾಗಿ ಗರ್ವಪಡಬೇಕಾದ ಸಂಗತಿಯೇ ಆಗಿದೆ. ಶ್ರೀರಾಮಚಂದ್ರ ಅಖಂಡ ಭಾರತದ ಏಕೀಕರಣದ ಮೂಲಪುರುಷ. ಜೀವನದುದ್ದಕ್ಕೂ ವೈದಿಕ ಧರ್ಮವನ್ನು ಸಂರಕ್ಷಿಸಿ, ಪೋಷಿಸಿದ ಧರ್ಮಪಾಲಕ. ಧರ್ಮಕ್ಕೆ ವಿರುದ್ಧವಾಗಿ ನಿಂತ ಕಬಂಧ, ವಿರಾದ, ತಾಟಕಿ, ಖರ, ದೂಷಣ, ಮಾರೀಚ, ವಾಲಿ ಮತ್ತು ರಾವಣನಂತಹ ಅಧರ್ಮಿಯರನ್ನು ವಧಿಸಿ ಧರ್ಮವನ್ನು ಪುನರ್ ಪ್ರತಿಷ್ಠಾಪಿಸಿ ಸಮಸ್ತ ಸಮಾಜವನ್ನು ಸನ್ಮಾರ್ಗಕ್ಕೆ ತಂದ ಕ್ಷತ್ರಿಯ ಕುಲ ಪ್ರಸೂತದ ಕ್ರಾಂತಿವೀರ ಶ್ರೀರಾಮಚಂದ್ರ ಎಂದರೆ ಅತಿಶಯೋಕ್ತಿಯಲ್ಲ.

"ಜನನೀ ಜನ್ಮಭೂಮಿಶ್ಚ, ಸ್ವರ್ಗಾದಪೀ ಗರಿಯಸೀ" ಉದ್ಘೋಷದಿಂದ ಅದಮ್ಯ ರಾಷ್ಟ್ರಪ್ರೇಮ ಮೆರೆದ ಶ್ರೀರಾಮಚಂದ್ರ ನಮ್ಮ ರಾಷ್ಟ್ರೀಯತೆಯ ಆದ್ಯಪ್ರವರ್ತಕ. ಭರತವರ್ಷದ ಮೂಲ ರಾಷ್ಟ್ರಪುರುಷ. ಭಾರತೀಯ ಹೆಮ್ಮೆಯ ಸಂಸ್ಕೃತಿ ಮತ್ತು ಪರಂಪರೆಯ ಹಿರಿಮೆ–ಗರಿಮೆಗಳ ಪ್ರತೀಕ. ಈ ಕಾರಣದಿಂದಲೇ ನಮಗೆಲ್ಲ ಶ್ರೀರಾಮಚಂದ್ರ ಇಂದಿಗೂ ಅನುಕರಣೀಯ.

ತಂದೆಗೆ ಕೊಟ್ಟ ಮಾತಿನಂತೆ ಹದಿನಾಲ್ಕು ವರ್ಷಗಳ ವನವಾಸಕ್ಕೆ ತೆರಳಿ, ಪಿತೃವಾಕ್ಯ ಪರಿಪಾಲನೆ ಮಾಡಿ ಇಂದಿನ ತಲೆಮಾರಿನವರಾದ ನಮಗೆಲ್ಲ ಮಗನಾದವನ ಕರ್ತವ್ಯ ಪ್ರಜ್ಞೆ ಹೇಗಿರಬೇಕೆಂಬ ಅರಿವಿನ ಅನಾವರಣ ಮಾಡಿಸಿದ್ದಾನೆ. ಆದ್ದರಿಂದಲೇ ಶ್ರೀರಾಮಚಂದ್ರ ಭಾರತೀಯರ ಜೀವನ ಕ್ರಮದ ಅವಿಭಾಜ್ಯ ಅಂಶವಾಗಿದ್ದಾನೆ. ವನವಾಸ ಮುಗಿಸಿ ಅಯೋಧ್ಯೆಯ ರಾಜನಾಗಿ ಪಟ್ಟಾಭಿಷೇಕ ಹೊಂದಿ ತನ್ನ ತಾಯಂದಿರ ಅನರ್ಘ್ಯ ಪುತ್ರನಾಗಿ, ಅನುಜರಿಗೆ ಆದರ್ಶಪ್ರಾಯ ಅಗ್ರಜನಾಗಿ, ಪ್ರಜೆಗಳಿಗೆ ಸರ್ವಸ್ವವಾಗಿ, ಹದಿನಾರು ಕಲ್ಯಾಣ ಗುಣವಿಶೇಷಣಗಳಿಂದ ಅನನ್ಯ ಮತ್ತು ಆದರ್ಶಪ್ರಾಯ ಆಡಳಿತ ನಡೆಸಿದ ಶ್ರೀರಾಮಚಂದ್ರ ಸ್ಫೂರ್ತಿ ಚೈತನ್ಯದ ಪ್ರತೀಕವಾಗಿದ್ದಾನೆ. ಭರತವರ್ಷದ ಚಕ್ರವರ್ತಿಯಾಗಿ ದೋಷರಹಿತ, ಪಾರದರ್ಶಕ, ಪ್ರೀತಿ, ಸಹಾನುಭೂತಿ, ಸದಾಚಾರ, ಶಾಂತಿ, ಸಮೃದ್ಧತೆ ಹಾಗೂ ಸಾಮರಸ್ಯ ಆಡಳಿತದ ಅನುಷ್ಠಾನ ತಂದು ತನ್ನ ಸಾಮ್ರಾಜ್ಯವನ್ನು ಸ್ವರ್ಗವನ್ನಾಗಿ ಮನ್ವಂತರಗೊಳಿಸಿದ ದೇವೋತ್ತಮ ಪರಮಪುರುಷ. ಸ್ವರಾಜ್ಯದಿಂದ ಸುರಾಜ್ಯದೆಡೆಗೆ ಸುಖೀರಾಜ್ಯವನ್ನು ನಿರ್ಮಿಸಿ, ಪ್ರಜೆಗಳು ನಿರ್ಭಯತೆಯಿಂದ ಚಾತುವರ್ಣ ಮತ್ತು ಚತುರಾಶ್ರಮ ಪದ್ಧತಿಗಳನ್ನು ಪರಿಪಾಲಿಸುವಂತೆ ಪ್ರೇರೇಪಿಸಿ, 'ಸರ್ವರಿಗೂ ಸಮಬಾಳು' 'ಸರ್ವರಿಗೂ ಸಮಪಾಲು' ಎಂಬ ಧ್ಯೇಯದೊಂದಿಗೆ 'ಪ್ರಜೆಗಳೇ ಪ್ರಭುಗಳು' ಎಂಬ ಸುಶಿಕ್ಷಿತ ಸಮಾಜದ ಕನಸನ್ನು ನನಸು ಮಾಡಿ ಸಮೃದ್ಧಿಯ ಸುಖೀರಾಜ್ಯವಾದ 'ರಾಮರಾಜ್ಯ'ದ ಏಕಾಮೇವಾ ಜನಕ ಪ್ರಭು ಶ್ರೀರಾಮಚಂದ್ರ.

ಸಾಮಾನ್ಯ ಸಾಮ್ರಾಜ್ಯವನ್ನು ರಾಮರಾಜ್ಯವನ್ನಾಗಿ ಪರಿವರ್ತಿಸಿದ ಶ್ರೀರಾಮಚಂದ್ರ ಕಳಂಕರಹಿತ, ಶುದ್ಧ, ಸರ್ವಗುಣ ಸಂಪನ್ನ, ಚಾರಿತ್ರ್ಯಪೂರ್ಣ ಅಸಾಮಾನ್ಯ ವ್ಯಕ್ತಿತ್ವದಿಂದ ತನ್ನ ಪ್ರಜೆಗಳ ಯೋಗಕ್ಷೇಮಕ್ಕೆ ಕಟಿಬದ್ಧತೆ ಹೊಂದಿದ್ದ. ಚಕ್ರವರ್ತಿಯಾಗಿದ್ದ ಶ್ರೀರಾಮಚಂದ್ರ ತನ್ನ ಆಡಳಿತದಲ್ಲಿ ಮತಶ್ರದ್ಧೆ ಸೀಮೋಲ್ಲಂಘನೆ ಮಾಡಿ ಎಲ್ಲಾ ಪ್ರಜೆಗಳನ್ನು ಸಮಾನ ದೃಷ್ಟಿಕೋನದಿಂದ ಕಾಣುತ್ತಿದ್ದ. ತನ್ನ ಸಾಮ್ರಾಜ್ಯದ ಸಕಲ ಜೀವಿಗಳ ಪುರೋಭಿವೃದ್ಧಿಯ ಶ್ರೇಯಸ್ಸು ಬಯಸಿ, ಸರ್ವರೂ ಸುಖೀ ಜೀವನ ನಡೆಸಲು ಅನುವು ಮಾಡಿಕೊಟ್ಟಿದ್ದ.

ಯುಗಯುಗಾಂತರಗಳಿಂದ ಆದರ್ಶಪ್ರಾಯ ರಾಮರಾಜ್ಯದ ಪರಿಕಲ್ಪನೆ ಭಾರತೀಯರ ಜೀವನಕ್ರಮ, ಚಿಂತನೆ ಮತ್ತು ಮನೋಧರ್ಮದ ಮೇಲೆ ಅಗಾಧ ಪ್ರಭಾವ ಬೀರಿರುವುದು ಸಹ ಅಷ್ಟೇ ಸತ್ಯಸಂಗತಿಯಾಗಿದೆ. ಸ್ವಾತಂತ್ರ್ಯ ನಂತರ ಭಾರತ 'ರಾಮರಾಜ್ಯ'ವಾಗಬೇಕೆಂದು ಮಹಾತ್ಮ ಗಾಂಧೀಜಿ ಕನಸು ಕಂಡಿದ್ದರು. ರಾಮಾಯಣ ಹಾಗೂ ರಾಮನ ವ್ಯಕ್ತಿತ್ವ ಗಾಂಧೀಯವರನ್ನು ಪ್ರಬಲವಾಗಿ ಪ್ರಭಾವಿಸಿತ್ತು. ಗಾಂಧೀ ತಮ್ಮ ದೀರ್ಘಕಾಲದ ಸಾರ್ವಜನಿಕ ಜೀವನದ ಫಲಶ್ರುತಿಯಂತೆ ಹಾಗೂ ತಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ ಮತ್ತು ಆಧ್ಯಾತ್ಮಿಕ ಅನುಭವದ ಮೂಸೆಯಲ್ಲಿ ರಾಮರಾಜ್ಯದ ಬಗ್ಗೆ ವಿಭಿನ್ನ ಚಿಂತನೆ ಹೊಂದಿದ್ದರು. ಹಲವಾರು ಸಾರ್ವಜನಿಕ ಭಾಷಣಗಳಲ್ಲಿ 'ರಾಜರಾಜ್ಯ'ದ ಬಗ್ಗೆ ಪ್ರಸ್ತಾಪಿಸಿದ್ದರು.

ಗಾಂಧಿಯವರಿಗೆ ರಾಮರಾಜ್ಯ ಎಂದರೆ "ಹಿಂದೂ ರಾಜ್ಯವಾಗಿರದೆ, ಎಲ್ಲ ಧರ್ಮಗಳನ್ನು ಸರ್ವಸಮಾನವಾಗಿ ಗೌರವಿಸುವ, ಸರ್ವಸಮಾನತೆ ಸಾರುವ ಸಮಾಜವಾಗಿತ್ತು. ಇಲ್ಲಿ ರಾಜ ಮತ್ತು ಪ್ರಜೆಗಳ ನಡುವೆ ಯಾವುದೇ ವ್ಯತ್ಯಾಸದ ಅಂತರವಿರಲಿಲ್ಲ. ಒಬ್ಬ ಸಾಮಾನ್ಯ ಪ್ರಜೆ ತನಗೆ ಸಿಗಬೇಕಾದ ನ್ಯಾಯವನ್ನು ತ್ವರಿತವಾಗಿ ಪಡೆದುಕೊಳ್ಳಬಹುದಿತ್ತು."

ಗಾಂಧೀಜಿಯ ಪ್ರಕಾರ ರಾಮರಾಜ್ಯವೆಂದರೆ ದೇವತಾರಾಜ್ಯ, ದೈವತ್ವದ ರಾಜ್ಯ. ರಾಮ ಮತ್ತು ರಹೀಮ್ ಇಬ್ಬರೂ ಸಹ ಒಂದೇ ಎನ್ನುವುದರ ಮೂಲಕ ಬಹುಕಾಲದ ಧಾರ್ಮಿಕ ಸಂಘರ್ಷಕ್ಕೆ ತಿಲಾಂಜಲಿ ಇಡಲು ಬಯಸಿದ್ದರು. ಸನ್ಮಾರ್ಗವೇ ನನಗೆ ದೇವರಿದ್ದಂತೆ ಎಂದು ಸಾರಿದ್ದರು. ರಾಮರಾಜ್ಯದಲ್ಲಿ ಸತ್ಯ, ಅಹಿಂಸೆ, ಶಾಂತಿ, ಶ್ರಮಜೀವನದ ಕಾರ್ಯಗೌರವ, ಸ್ವಚ್ಛತೆ ಇವು ಆಡಳಿತದ ಮೂಲ ಮಂತ್ರಗಳಾಗಬೇಕು ಎಂದು ಬಯಸಿದ್ದರು. ಇಂದಿನ ಚುನಾಯಿತ ಜನಪ್ರತಿನಿಧಿಗಳು ಇದನ್ನು ಅರ್ಥ ಮಾಡಿಕೊಂಡರೆ ಗಾಂಧಿ ಕಂಡ ರಾಮರಾಜ್ಯದ ಕನಸನ್ನು ನನಸು ಮಾಡುವುದು ಸುಲಭ ಎಂದೆನಿಸುತ್ತದೆ. ಭಾರತದಲ್ಲಿನ ಗ್ರಾಮಗಳು ಸ್ವಾವಲಂಬನೆ ಸಾಧಿಸಬೇಕು. ಭಾರತದ ರಾಜಕೀಯ ವ್ಯವಸ್ಥೆಯ ಅಡಿಪಾಯವಾಗಿ ಪ್ರತಿಗ್ರಾಮವು ತನ್ನದೇ ಆದ ವ್ಯವಹಾರಗಳಿಗೆ ಜವಾಬ್ದಾರರಾಗಿರುವ ವಿಕೇಂದ್ರಿಕೃತ ಸರ್ಕಾರದ ಮಾದರಿಯಾದ ಪಂಚಾಯತ್ ರಾಜ್ಯವನ್ನು ಗಾಂಧಿ ಪ್ರಬಲವಾಗಿ ಪ್ರತಿಪಾದಿಸಿದ್ದರು. ರಾಮರಾಜ್ಯದಲ್ಲಿ ಜಾತಿ ಮತ್ತು ಧರ್ಮದ ಬೇಧವಿಲ್ಲ. ಜಾತಿ ವ್ಯವಸ್ಥೆಯು ಒಂದು ಅಡಚಣೆಯಾಗಿದೆ, ಆದರೆ ಪಾಪವಲ್ಲ. ಅಸ್ಪೃಶ್ಯತೆಯ ಆಚರಣೆ

ಪುಟ 17 ಕ್ಕೆ ➤

# ಕೋವಿಡ್–19 ಹಿನ್ನೆಲೆ : ತಂತ್ರಜ್ಞಾನದ ಮೂಲಕ ನಡೆದ ಸಭೆಗಳು

## ತುಮಕೂರು ವಿಭಾಗ

ಸಂದೀಪ್ ಬೂದಿಹಾಳ್‌ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಚಿದಾನಂದ ಪಾಟೀಲ್ ಮತ್ತು ಶ್ರೀಮತಿ ಮಮತ ಹಾಗೂ ಶ್ರೀ ಗಂಗಾಧರಾಚಾರ್‌ರವರ ಮಾರ್ಗದರ್ಶನದಲ್ಲಿ ತುಮಕೂರು ವಿಭಾಗದಲ್ಲಿ ಝೂಮ್ ವೀಡಿಯೋ ಆ್ಯಪ್ ಮೂಲಕ ದಿನಾಂಕ 3–5–2020ರ ಭಾನುವಾರದಂದು ಬೆ–11 ರಿಂದ 12 ರ ವರೆಗೆ ಸಭೆ ನಡೆಸಲಾಯಿತು.

ಸರಸ್ವತಿ ವಂದನೆ ಹಾಗೂ ಪರಿಚಯದೊಂದಿಗೆ ಸಭೆ ಆರಂಭಿಸಲಾಯಿತು. ನಂತರ ಜಿಲ್ಲೆಗಳಲ್ಲಿ ನಡೆಸಲಾದ ಕಾರ್ಯಕ್ರಮಗಳ ವರದಿ ಪಡೆಯಲಾಯಿತು. 10ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸುತ್ತಿರುವ ಫೋನ್ ಇನ್ ಕಾರ್ಯಕ್ರಮ, ಕರ್ತವ್ಯ ಬೋಧ ದಿವಸ ಅಲ್ಲದೆ ಕರೋನ ಸಂಕಷ್ಟದ ಈ ಸಂದರ್ಭದಲ್ಲಿ ಆಯಾ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾದ ಸೇವಾ ಚಟುವಟಿಕೆಗಳ ಮಾಹಿತಿಗಳನ್ನು ಸಭೆಯಲ್ಲಿ ಹಂಚಿಕೊಳ್ಳಲಾಯಿತು.

ಎಬಿಆರ್‌ಎಸ್‌ಎಂ ಪ್ರಮುಖರಾದ ಶ್ರೀಮತಿ ಮಮತಾರವರು ರಾಷ್ಟ್ರೀಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ವಿವಿಧ ರಾಜ್ಯಗಳಲ್ಲಿ ನಡೆಸಲಾದ ಸಂಘಟನೆಯ ಚಟುವಟಿಕೆಗಳ ಬಗ್ಗೆ ತಿಳಿಸಿ ಹೇಳಿದರು.

ಮುಂದಿನ ದಿನಗಳಲ್ಲಿ ನಡೆಸಬೇಕಿರುವ ಕಾರ್ಯ ಚಟುವಟಿಕೆಗಳ ಬಗ್ಗೆ ಶ್ರೀ ಸಂದೀಪ್ ಬೂದಿಹಾಳ್, ಶ್ರೀ ಚಿದಾನಂದ ಪಾಟೀಲ್, ಗಂಗಾಧರಾಚಾರ್‌ರವರು ಸಭೆಗೆ ಮಾರ್ಗದರ್ಶನ ಮಾಡಿದರು. ಜಿಲ್ಲಾ ಮಟ್ಟಗಳಲ್ಲಿಯೂ ಇದೇ ರೀತಿ ಸಭೆಗಳನ್ನು ನಡೆಸುವಂತೆ ತಿಳಿಸಲಾಯಿತು. ಲಾಕ್‌ಡೌನ್ ಈ ದಿನಗಳಲ್ಲಿ ಮನೆಯಲ್ಲಿದ್ದುಕೊಂಡೇ ಸಂಘಟನೆ ಕಾರ್ಯಕರ್ತರ ಸಂಪರ್ಕವಿರಿಸಿಕೊಂಡು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆಯೂ ಸಲಹೆ ನೀಡಲಾಯಿತು.

ಸಭೆಯಲ್ಲಿ ಶ್ರೀ ಸಿದ್ದಲಿಂಗಪ್ಪನವರು ತುಮಕೂರು ಜಿಲ್ಲಾ ಅಧ್ಯಕ್ಷರು, ಶ್ರೀ ಬಸವರಾಜ್ ಚಿತ್ರದುರ್ಗ ಜಿಲ್ಲಾ ಕಾರ್ಯದರ್ಶಿ, ಶ್ರೀಮತಿ ಮನೋರಮ ರಾಜ್ಯ ಕಾರ್ಯಕಾರಿಣಿ ಸದಸ್ಯರು ಚಿತ್ರದುರ್ಗ, ಶ್ರೀಮತಿ ತ್ರಿವೇಣಿ ರಾಜ್ಯ ಕಾರ್ಯಕಾರಿಣಿ ಸದಸ್ಯರು ಮಧುಗಿರಿ ಇವರೆಲ್ಲರೂ ಭಾಗವಹಿಸಿದ್ದರು. ಶಾಂತಿ ಮಂತ್ರದೊಂದಿಗೆ ಸಭೆಯು ಮುಕ್ತಾಯವಾಯಿತು.

## ಬೆಳಗಾವಿ ವಿಭಾಗ

ದಿನಾಂಕ 4–5–2020 ರಂದು 11 ಗಂಟೆಗೆ ಸಹ ಪ್ರಧಾನ ಕಾರ್ಯದರ್ಶಿಗಳು ಸರಸ್ವತಿ ಮಂತ್ರ ಹೇಳುವುದರ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು. ಪ್ರತಿ ಜಿಲ್ಲೆಯ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಭಾಗವಹಿಸಿದ್ದು, ತಮ್ಮ ಪರಿಚಯ ಮಾಡಿಕೊಂಡರು. ಡಿಸೆಂಬರ್ ಕಾರ್ಯಕಾರಿಣಿಯ ನಂತರ ತಮ್ಮ–ತಮ್ಮ ಜಿಲ್ಲೆಗಳಲ್ಲಿ ನಡೆದ ಕಾರ್ಯಕ್ರಮಗಳ ವಿವರವನ್ನು ನೀಡಿದರು. ಕರೋನಾದಿಂದ ಇಡೀ ದೇಶ ಸಂಕಷ್ಟಕ್ಕೆ ಸಿಲುಕಿದೆ. ಈ ಸಂದರ್ಭದಲ್ಲಿ ಸಂಘಟನೆಯ ಕಡೆಯಿಂದ ತಮ್ಮ ತಮ್ಮ ಊರುಗಳಲ್ಲಿ, ತಾಲೂಕುಗಳಲ್ಲಿ, ಜಿಲ್ಲಾ ಹಂತದಲ್ಲಿ ಸಂಘಟನೆಯ ಪದಾಧಿಕಾರಿಗಳ ಕಾರ್ಯ ವಿವರಿಸಿದರು.

ನಂತರ ರಾಜ್ಯಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು. ಸಹ ಪ್ರಧಾನ ಕಾರ್ಯದರ್ಶಿಗಳು ಸಂಘದ ಸದಸ್ಯನಾಗಿ, ಕಾರ್ಯಕರ್ತನಾಗಿ ಮಾಡಬೇಕಾದ ಕಾರ್ಯಗಳನ್ನು ತಿಳಿಸಿ ಮಾರ್ಗದರ್ಶನ ಮಾಡಿದರು.

ಶ್ರೀ ಸಂದೀಪ್ ಬೂದಿಹಾಳ ರಾಜ್ಯಾಧ್ಯಕ್ಷರು, ಶ್ರೀ ಚಿದಾನಂದ ಪಾಟೀಲ್ ಪ್ರಧಾನ ಕಾರ್ಯದರ್ಶಿಗಳು, ಶ್ರೀ ಗಂಗಾಧರ್ ಆಚಾರ ಸಹ ಪ್ರಧಾನ ಕಾರ್ಯದರ್ಶಿಗಳು, ಶ್ರೀಮತಿ ಮಮತಾ ಡಿ. ಕೆ A.B.R.S.M ಮಹಿಳಾ ಪ್ರಮುಖರು, ಶ್ರೀಮತಿ ರೋಹಿಣಿ ದೇಶಪಾಂಡೆ ರಾಜ್ಯ ಮಹಿಳಾ ಉಪಾಧ್ಯಕ್ಷರು, ಶ್ರೀ ಸಂತೋಷ ವೈ. ಹೂನಳ್ಳಿ ಬೆಳಗಾವಿ ವಿಭಾಗದ ಪ್ರಮುಖರು ಭಾಗವಹಿಸಿದ್ದರು. ●

---

➢ ಪುಟ 16 ರಿಂದ.....

ಮಹಾಪಾಪ ಮತ್ತು ದೊಡ್ಡ ಅಪರಾಧ ಎಂದು ನಂಬಿದ್ದರು. ಸಮಾಜದಲ್ಲಿನ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯನ್ನು ತೊಲಗಿಸಲು ರಾಮರಾಜ್ಯದ ಅನುಷ್ಠಾನವೇ ರಾಮಬಾಣ ಎಂದು ಪ್ರತಿಪಾದಿಸಿದ್ದರು. ಗಾಂಧಿಯ ಅನಿಸಿಕೆಯಂತೆ ಜನತೆಯ ಪರಿಪೂರ್ಣ ನೈತಿಕತೆಯ ಸಾರ್ವಭೌಮತ್ವವೇ ರಾಮರಾಜ್ಯ. ರಾಜ ಮತ್ತು ಬಿಕ್ಷುಕನಿಗೂ ಸಹ ಸರ್ವ ಸಮಾನವಾದ ನ್ಯಾಯ ಮತ್ತು ಹಕ್ಕುಗಳಿರಬೇಕು. ಸ್ವನಿಯಂತ್ರಣ, ಸ್ವಯಂ ಅರಿವು, ಸ್ವಯಂಶಿಸ್ತು, ಸ್ವಯಂಗೌರವ ರಾಮರಾಜ್ಯದ ವಿಭಿನ್ನ ಆಯಾಮಗಳಾಗಬೇಕು. ರಾಮರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಯು ಸರ್ವ ಸ್ವತಂತ್ರನಾಗಿದ್ದು ಕುಟುಂಬ, ಗ್ರಾಮ, ಜಿಲ್ಲೆ, ಸಂಸ್ಥಾನ ಮತ್ತು ರಾಷ್ಟ್ರಕ್ಕಾಗಿ ನಿಸ್ವಾರ್ಥ ತ್ಯಾಗ ಜೀವನ ನಡೆಸಬೇಕು ಎಂಬ ಆಶಯ ಹೊಂದಿದ್ದರು.

ರಾಮರಾಜ್ಯದಲ್ಲಿ ಪ್ರತಿಯೊಬ್ಬ ಪ್ರಜೆಯು ತನ್ನ ಅಧ್ಯಾತ್ಮಿಕ ವಿಸ್ತಾರತೆಯ ಹರಿವು ಹೆಚ್ಚಿಸಿಕೊಳ್ಳುತ್ತ ಮಾನವ ಜನಾಂಗದಲ್ಲಿ ತನ್ನ ಅಸ್ತಿತ್ವ ಕಂಡುಕೊಳ್ಳಬೇಕು. ರಾಮರಾಜ್ಯವೆಂದರೆ ಹೊಸ ಸಾಮಾಜಿಕ ವ್ಯವಸ್ಥೆ. ಅದು ಸಾರ್ವತ್ರಿಕ ಪ್ರೀತಿ ಮತ್ತು ಅಹಿಂಸಾಧಾರಿತವಾಗಿರಬೇಕು. ಸರ್ವಧರ್ಮ ಸಮನ್ವಯತೆ ಸಾಧಿಸಿ ದೇವರ ದರ್ಶನ ಸಾಕ್ಷಾತ್ಕರಿಸಿಕೊಳ್ಳಬೇಕು. ಪ್ರತಿಯೊಬ್ಬರು ತಮ್ಮ ಅಂತರಾವಲೋಕನದಿಂದ ತಮ್ಮ ತಪ್ಪುಗಳನ್ನು ತಿದ್ದಿಕೊಂಡು, ನೆರೆಹೊರೆಯವರ ತಪ್ಪುಗಳ ಬಗ್ಗೆ ಗಮನಹರಿಸದೆ ಪ್ರಗತಿಯ ದಿಶೆಯತ್ತ ಸಾಗುವುದರಲ್ಲಿ ರಾಮರಾಜ್ಯದ ಯಶಸ್ಸು ಅಡಗಿದೆ.

ಸರಳ ಜೀವನ, ಉದಾತ್ತ ಚಿಂತನೆ ಪ್ರತಿಯೊಬ್ಬ ಪ್ರಜೆಯ ಕಾಯಕವಾಗಬೇಕು. ಆಗ ಮಾತ್ರ ಉತ್ತಮ ಆಡಳಿತದ ಯಂತ್ರ ರೂಪಗೊಳ್ಳಲು ಸಾಧ್ಯ ಎಂದಿದ್ದಾರೆ. ಗಾಂಧಿ ತಮ್ಮ ಅನುಭಾವದಲ್ಲಿ ರಾಮರಾಜ್ಯವನ್ನು ಅಂತ್ಯೋದಯ (ಸಮಾಜದ ಕಟ್ಟಕಡೆ ವ್ಯಕ್ತಿಯ ಉದ್ಧಾರ), ಸರ್ವೋದಯ (ಸರ್ವರ ಉದಯ) ಹಾಗೂ ಸುಖೀಸಮಾಜ ಎಂದು ದಿಗ್ದರ್ಶಿಸಿದ್ದಾರೆ.

ಪ್ರಸಕ್ತ ಸಂದರ್ಭದಲ್ಲಿ ರಾಷ್ಟ್ರವನ್ನು ಯಶಸ್ವಿಯಾಗಿ ಮುನ್ನಡೆಸುವ ಜವಾಬ್ದಾರಿ ಹೊತ್ತಿರುವ ನಾವು ಸದ್ಗುಣ ಸಂಪನ್ನರಾಗಿ, ಸ್ವಚ್ಛ ಆಡಳಿತದ ಭಾಗವಾಗಿ ಅವಿಚ್ಛಿನ್ನತೆಯಿಂದ ಪ್ರಜಾಪ್ರಭುತ್ವದಲ್ಲಿ ಭಾಗವಹಿಸಿ, ಆಚರಿಸುವುದೇ ಗಾಂಧೀ ಕಂಡ ನಿಜವಾದ ಸುದೃಢ–ಸುಭೀಕ್ಷ ರಾಮರಾಜ್ಯ ಸಾಕಾರ–ಸಾಕ್ಷತ್ಕಾರಕ್ಕಿರುವ ಉತ್ತಮ ಮಾರ್ಗ ಎಂದರೆ ಅತಿಶಯೋಕ್ತಿಯಲ್ಲ. ಗಾಂಧಿ ಕಂಡ ರಾಮರಾಜ್ಯದ ಹೆಮ್ಮೆಯ ಪಾಲುದಾರರಾಗಿ ಭಾರತವನ್ನು ಜಾಗತಿಕ ಭೂಪಟದಲ್ಲಿ ಅನನ್ಯಗೊಳಿಸೋಣ. ●

# ಪ್ರಾಚೀನ ಭಾರತದ ಗಡಿಗಳನ್ನು ಅರಿಯಲು ರಾಮಾಯಣವೇ ರಾಮ ಬಾಣ

**ಚಿದಾನಂದ ಆ. ಪಾಟೀಲ**
**ಪ್ರಧಾನಕಾರ್ಯದರ್ಶಿ**
**ಕ.ರಾ.ಮಾ.ಶಿ.ಸಂಘ, ಬೆಂಗಳೂರು**



**ಮೂ**ವತ್ತು ವರ್ಷಗಳ ಹಿಂದೆ ಸಿದ್ಧವಾದ ರಮಾನಂದ ಸಾಗರ ಅವರ ರಾಮಾಯಣ ದೂರದರ್ಶನದಲ್ಲಿ ಪ್ರಥಮವಾಗಿ ಪ್ರಸಾರವಾದಾಗ ನಾನು ನಾಲ್ಕು ಅಥವಾ ಐದನೇ ತರಗತಿ ಓದುತ್ತಿದ್ದ ವಿದ್ಯಾರ್ಥಿ. ಅಂದು ಆಕಾಶದಲ್ಲಿ ಮೂಡಿ ಬಂದ ದೇವತೆಗಳ ಚಿತ್ರ, ರಾಕ್ಷಸರ ಅಜಾನುಭಾಹು ದೇಹದ ದೃಶ್ಯ. ಹನುಮಂತ ಸಮುದ್ರ ಜಿಗಿಯುವ ದೃಶ್ಯ. ಅದರ ಜೊತೆಯಲ್ಲಿ ಯುದ್ಧದ ಸಂದರ್ಭದಲ್ಲಿ ಎದುರುಬದುರಾಗುವ ಬಾಣಗಳು, ಅಲ್ಲಿ ಮೂಡಿಬರುವ ಚಿತ್ತಾರದ ಬೆಂಕಿ ಉಗುಳುವ ಸನ್ನಿವೇಶಗಳನ್ನು ನೋಡಿ ಆನಂದಿಸಿರುವವರು ನಾವೆಲ್ಲ. ಬಿಲ್ಲು ಬಾಣಗಳನ್ನು ಮಾಡಿಕೊಂಡು ಹೆಗಲಲ್ಲಿ ಸಿಕ್ಕಿಸಿಕೊಂಡು ಊರೆಲ್ಲಾ ಓಡಾಡುತ್ತಿದ್ದ ಅನುಭವ ನನ್ನಂತಹ ಅನೇಕರಿಗೆ ಇರಲೇಬೇಕು. ಅಂದು ಆನಂದಿಸಿದ ಕ್ಷಣಗಳು ಮತ್ತೆ ಸಿಗದು.



ಕೋವಿಡ್–19 ರ ಮಹಾಮಾರಿಯಿಂದ ಮನೆಯಲ್ಲಿಯೇ ಉಳಿದ ನಮಗೆಲ್ಲ ದೂರದರ್ಶನ ವಾಹಿನಿ ಮತ್ತೊಮ್ಮೆ ರಾಮಾಯಣವನ್ನು ತೋರಿಸಿತು. ಈಗ ಆ ಎಳೆಯ ವಯಸ್ಸಿನ ಉತ್ಸಾಹ, ಆನಂದ ಸಿಗಲಿಲ್ಲ, ಏಕೆಂದರೆ ತಂತ್ರಜ್ಞಾನದ ತಿಳುವಳಿಕೆ ಅಡ್ಡವಾಗಿ ನಿಂತು, ವಾಸ್ತವಿಕತೆಯ ಪರಿಚಯ ಮಾಡುತ್ತಿತ್ತು. ಆದರೆ ನನಗೆ ಈಗ ಹೊಸ ಆಲೋಚನೆಗೆ ರಾಮಾಯಣ ಕಾರಣವಾಯಿತು. ಭೂಗೋಳಶಾಸ್ತ್ರದ ವಿದ್ಯಾರ್ಥಿಯಾಗಿದ್ದು, ಇಂದು ಅಧ್ಯಾಪಕನಾಗಿ ಕಾರ್ಯ ಮಾಡುತ್ತಿರುವ ನನಗೆ ರಾಮಾಯಣ ಭಾರತದ ಭೌಗೋಳಿಕ ಅಂಶಗಳನ್ನು ಕಲಿಸಿತು. ಭಾರತದಲ್ಲಿಯ ಪರ್ವತಗಳು, ನದಿಗಳು, ಸರೋವರಗಳು ಪರಿಸರ, ಪ್ರಾಣಿಸಂಪತ್ತು, ಜನರ ಜೀವನ ಕ್ರಮ ಹೀಗೆ ಅನೇಕ ಮುಖಗಳ ಪರಿಚಯ ಮಾಡಿಸಿತು. ಭಾರತದ ಗಡಿಗಳನ್ನು ರಾಮಾಯಣ ನಮಗೆ ಪರಿಚಯಿಸುತ್ತದೆ. ಹೀಗಾಗಿ ನಾನು ಇಂದು ರಾಮಾಯಣವನ್ನು ಭೂಗೋಳಶಾಸ್ತ್ರದ ಗ್ರಂಥವಾಗಿ ನೋಡಬಯಸುತ್ತೇನೆ.

ಸುಗ್ರೀವನು ಶ್ರೀರಾಮ, ಲಕ್ಷ್ಮಣರ ಸಮ್ಮುಖದಲ್ಲಿ ತನ್ನ ಸೈನ್ಯಕ್ಕೆ ಸೀತೆಯನ್ನು ಹುಡುಕುವುದಕ್ಕಾಗಿ ನಾಲ್ಕು ದಿಕ್ಕುಗಳಲ್ಲಿ ಕಳುಹಿಸಲು ನಿರ್ಧರಿಸಿ ಒಂದೊಂದು ದಿಕ್ಕಿನಲ್ಲಿ ಅಂದಿನ ಭಾರತದ ವಿಸ್ತೀರ್ಣವನ್ನು ನಮಗೆಲ್ಲ ಪರಿಚಯಿಸುತ್ತಾನೆ.

### ಪೂರ್ವ ದಿಕ್ಕಿನಲ್ಲಿಯ ಭಾರತದ ಪರಿಚಯ

ಯುತಪತಿ ವಿನಂತನ ನೇತೃತ್ವದ ಸೈನ್ಯಕ್ಕೆ ಪೂರ್ವದಿಕ್ಕಿನಲ್ಲಿ ಭಾರತದ ವಿಸ್ತಾರದ ಬಗ್ಗೆ ವಿವರಿಸುತ್ತಾ ನದಿಗಳಾದ ಗಂಗಾ, ಸರಾಯು, ಕೌಶಕಿ, ಯಮುನಾ, ಸೋನಾ ನದಿಗಳ ಪರಿಚಯ ಮಾಡಿಸುವ ಸುಗ್ರೀವ ಇಂದಿನ ಬರ್ಮಾದೇಶ, ಕಾಸಿ, ಕೋಸಲ್, ಮಗಧಗಳ ಪರಿಚಯ ಮಾಡಿಸುತ್ತಾನೆ. ಅದಲ್ಲದೆ ಯುವದ್ವೀಪ, ಸುವರ್ಣದ್ವೀಪಗಳ ಹೆಸರನ್ನು ಬಳಸುತ್ತಾನೆ. ಕೊನೆಗೆ ಉದಯಗಿರಿ ಪರ್ವತಪ್ರದೇಶವನ್ನು ನೆನಪಿಸುತ್ತಾನೆ.

ಅಂದರೆ ಇಂದಿನ ಭಾರತದ ಗಡಿಯಲ್ಲಿ ನೇಪಾಳ, ಮಯನ್ಮಾರ್‌ನ್ನು ಒಳಗೊಂಡಂತೆ, ಗಂಗಾ, ಯುಮುನಾ, ಬ್ರಹ್ಮಪುತ್ರ ನದಿಗಳು ಬಂಗಾಳಕೊಲ್ಲಿಯನ್ನು ಸೇರುವ ಸ್ಥಳದಲ್ಲಿ ಸಣ್ಣ ದ್ವೀಪಗಳನ್ನು ಮತ್ತು ಉದಯಗಿರಿ ಎನ್ನುವುದು ಅರುಣಾಚಲ ಪ್ರದೇಶ ಮತ್ತು ಮಯಾನ್‌ಮಾರ್‌ನಲ್ಲಿರುವ ಪರ್ವತ ಪ್ರದೇಶ (ಸೂರ್ಯನು ಭಾರತವನ್ನು ಪ್ರವೇಶಿಸುವಾಗ ಮೊದಲು ಇಲ್ಲಿ ಉದಯಿಸುವುದರಿಂದ ಉದಯಗಿರಿ)ವನ್ನು ಇಲ್ಲಿ ಕಾಣಬಹುದಾಗಿದೆ. ಭೌಗೋಳಿಕವಾಗಿಯೂ ಭಾರತದ ವಿಸ್ತಾರ ಪೂರ್ವಭಾಗದಲ್ಲಿ ಹೀಗಿತ್ತು ಎನ್ನವುದನ್ನು ಅರಿಯಬಹುದಾಗಿದೆ.

### ಪಶ್ಚಿಮ ದಿಕ್ಕಿನಲ್ಲಿ ಭಾರತದ ಪರಿಚಯ

ಅರ್ಚಿಸ್ಮಾನ್ ಮತ್ತು ಅಚಿರ್‌ಮಲ್ಯ ಸಹೋದರರ ನೇತೃತ್ವದ ವಾನರ ಸೈನ್ಯ ಪಶ್ಚಿಮ ದಿಕ್ಕಿನಲ್ಲಿ ಪ್ರಯಾಣಿಸಬೇಕಾಗಿರುವುದರಿಂದ ಸೌರಾಷ್ಟ್ರ, ಬಹಲೀಕ್ಸ್, ಕುಕ್ರ ಈ ಭಾಗಗಳೂ ಸಮುದ್ರದ ದಡದಲ್ಲಿರುವ ಮೊರ್ವ ಮತ್ತು ಜಠಾಪುರ ನಗರಗಳು ಹಾಗೂ ಸಿಂಧೂ ನದಿ ಸಮುದ್ರವನ್ನು ಸೇರುವ ಸ್ಥಳ ಹಾಗೂ ಪ್ರಾಗಜ್ಯೋತಿಷ ಎನ್ನುವ ನಗರದ ಪರಿಚಯ, ಅಷ್ಟಾಚಲ್ ಎನ್ನುವ ಪ್ರದೇಶದ ಪರಿಚಯವನ್ನು ಸುಗ್ರೀವ ಮಾಡುತ್ತಾನೆ.

ಇಂದಿನ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನವನ್ನು ಒಳಗೊಂಡಂತೆ ಭಯಾನಕ ಪರ್ವತಗಳ ಸಾಲಾದ ಹಿಂದೂ ಕುಷ್ ಪರ್ವತಗಳ ಬಗ್ಗೆ ತಿಳುವಳಿಕೆ ಇಲ್ಲಿ ಕಾಣಬಹುದಾಗಿದೆ. ಜೊತೆಗೆ ಸಮುದ್ರ ದಡದಲ್ಲಿರುವ ನಗರಗಳು(ಮೌರ್‍ವ, ಜಠಾಪುರ) ಅಂದರೆ ಬಂದರುಗಳು (ಹಡಗು ನಿಲ್ಲುವ ಸ್ಥಳ) ಪರಿಚಯಿಸುವರು. ಜೊತೆಯಲ್ಲಿ ಸಿಂಧೂ ನದಿಯ ಪೂರ್ಣ ಪರಿಚಯ ಅವರಿಗಿತ್ತು. ಸಿಂಧೂ ನದಿ ಸಮುದ್ರವನ್ನು ಸೇರುವ ಸ್ಥಳ ಇಂದಿನ ಪಾಕಿಸ್ತಾನದ ಕರಾಚಿಯ ಬಗ್ಗೆ ಪೂರ್ಣ ಪರಿಚಯವಿರುವುದನ್ನು ನಾವು ಕಾಣಬಹುದಾಗಿದೆ.

### ಉತ್ತರ ದಿಕ್ಕಿನಲ್ಲಿರುವ ಭಾರತದ ಪರಿಚಯ

'ಶತವಲಿ'ಯ ನೇತೃತ್ವದ ಸೈನ್ಯ ಉತ್ತರ ದಿಕ್ಕಿನತ್ತ ಹೊರಡುತ್ತದೆ. ಆದರೆ ಇಲ್ಲಿ ಭೌಗೋಳಿಕ ವಿಸ್ತಾರದ ವರ್ಣನೆ ಇಲ್ಲ. ಆದರೆ ರಾಮಾಯಣದ ಅನೇಕ ಭಾಗಗಲ್ಲಿ ಹಿಮಾಲಯದ ಹೆಸರು

ಪುಟ 19 ಕ್ಕೆ ➤

# ರಾಜ್ಯ ಮಹಿಳಾ ವಿಭಾಗದ ಸಭೆ

ಕೋವಿಡ್ –19 ಎಂಬ ಮಹಾಮಾರಿಯ ವಿರುದ್ಧದ ಹೋರಾಟ ಒಂದೆಡೆಯಾದರೆ, ಶಿಕ್ಷಕ ಸಂಘದ ಜವಾಬ್ದಾರಿ ಹೊತ್ತು, ಸಂಘದ ಪದಾಧಿಕಾರಿಗಳನ್ನು ಮುಖತಃ ಭೇಟಿಯಾಗಲು ಸಾಧ್ಯವಾಗುತ್ತಿಲ್ಲ ಹಾಗೂ ಕಾರ್ಯನಿರ್ವಹಿಸಲು ಆಗುತ್ತಿಲ್ಲ ಎನ್ನುವ ಬೇಸರ ಮತ್ತೊಂದೆಡೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹೊಸ ತಂತ್ರಜ್ಞಾನದ ಸದುಪಯೋಗ ಪಡೆದುಕೊಂಡು ಝೂಮ್ ಆ್ಯಪ್‌ನಲ್ಲಿ ಸಭೆ ನಡೆಸೋಣ ಎಂಬ ಆಲೋಚನೆ ಬಂದಿದ್ದೇ ತಡ ರಾಜ್ಯ ಸಂಘದ ಹಿರಿಯರ ಸಲಹೆಯಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಮಹಿಳಾ ಪ್ರತಿನಿಧಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ ದಿನಾಂಕ 5–5–2020ರ ಸಂಜೆ 4 ಗಂಟೆಗೆ ಸಭೆ ನಡೆಸಲು ಆಹ್ವಾನಿಸಿದೆ. ಸಮಯಕ್ಕೆ ಸರಿಯಾಗಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 26 ಮಹಿಳಾ ಕಾರ್ಯಕರ್ತ ಬಂಧುಗಳೊಂದಿಗೆ ಸರಸ್ವತಿ ಪ್ರಾರ್ಥನೆಯೊಂದಿಗೆ ಆರಂಭವಾದ ಸಭೆ ಶ್ರೀಮತಿ ಜಿ.ಎನ್ ವಾಸುಕಿ ಯವರ ಸ್ವಾಗತ ಹಾಗೂ ಸರ್ವರ ಪರಿಚಯದೊಂದಿಗೆ ಮುಂದುವರೆಯಿತು.

ನಂತರ ಈ ಕಾರ್ಯಕರ್ತೆಯರು ಕೋವಿಡ್–19ರಿಂದ ಇಡೀ ರಾಜ್ಯವೇ ಸಂಕಷ್ಟದಲ್ಲಿರುವ ಈ ಎರಡು ತಿಂಗಳಿನಿಂದ ತಮ್ಮ ತಮ್ಮ ಸ್ಥಳಗಳಲ್ಲಿ ಸ್ವತಃ ತಾವು ಹಾಗೂ ಇತರೆ ಸಂಘ ಸಂಸ್ಥೆಗಳೊಂದಿಗೆ ಸೇರಿ ಮಾಡಿದ ಸಮಾಜಸೇವಾ ಕಾರ್ಯಗಳ ಬಗ್ಗೆ ವರದಿ ನೀಡಿದರು. ಎಣಿಕೆಗೂ ಮೀರಿ ಅವರು ನಿರ್ವಹಿಸಿದ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

ನಂತರ ಶಿಕ್ಷಕ ಸಂಘದ ಪೋಷಕರಾದ ಶ್ರೀಮತಿ ಆರ್ ಸೀತಾಲಕ್ಷ್ಮಿಯವರು ಮಾತನಾಡುತ್ತಾ ಮಹಿಳೆಯರು ಹೇಗೆ ಮತ್ತು ಏಕೆ ಸಂಘಟಿತರಾಗಬೇಕು? ಅದಕ್ಕಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು? ಎಂದು ತಿಳಿಸುತ್ತಾ ತಾವು ಹಿಂದೆ ಮಾಡಿದ ಅನೇಕ ಕಾರ್ಯಗಳ ಬಗ್ಗೆ ವಿವರ ಹಾಗೂ ಛಾಯಾಚಿತ್ರಗಳನ್ನು ತೋರಿಸಿ ಮಾರ್ಗದರ್ಶನ ನೀಡಿದರು.

ರಾಜ್ಯದ ಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲರು ಶಿಕ್ಷಕಿಯರು ಈ ಸಂಖ್ಯೆಯಲ್ಲಿ ಸಭೆಯಲ್ಲಿರುವುದಕ್ಕೆ ಹರ್ಷ ಸೂಚಿಸುತ್ತಾ ಶಿಕ್ಷಕ ಸಂಘದ ಉದ್ದೇಶ ಹಾಗೂ ಸದಸ್ಯರಾದವರು ಮಾಡಬೇಕಾದ ಕಾರ್ಯಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿಕೊಟ್ಟರು.

ಎಬಿಆರ್‌ಎಸ್‌ಎಂನ ಮಹಿಳಾ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಡಿ.ಕೆ ಮಮತಾ ಅವರು ಶಿಕ್ಷಕ ಸಮಾಚಾರ ಮಾಸಪತ್ರಿಕೆಯ ಬಗೆಗೆ ವಿವರಿಸಿ, ಅದಕ್ಕೆ ಲೇಖನಗಳನ್ನು ನೀಡಲು ಕೋರಿದರು.

ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಸಂದೀಪ್ ಬೂದಿಹಾಳ್‌ರವರು ಶಿಕ್ಷಕಿಯರ ಸಂಖ್ಯೆ ಪ್ರತಿ ಶಾಲೆಯಲ್ಲಿ ಶೇ 60 ಕ್ಕಿಂತ ಹೆಚ್ಚಾಗಿದ್ದು, ಹೆಚ್ಚು ಹೆಚ್ಚು ಶಿಕ್ಷಕಿಯರನ್ನು ಸದಸ್ಯೆಯರನ್ನಾಗಿಸಿ, ಆ ಮೂಲಕ ಸಂಘದ ಶಕ್ತಿ ಹೆಚ್ಚಿಸಲು ತಿಳಿಸಿದರು.

**ಸಭೆಯಲ್ಲಿ ಕೈಗೊಂಡ ನಿರ್ಣಯಗಳು:–**

1. ಪರಿಸ್ಥಿತಿ ಸುಧಾರಣೆ ಆಗುವವರೆಗೆ ಇದೇ ಝೂಮ್ ಆ್ಯಪ್‌ನಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಯಾ ಜಿಲ್ಲಾ ಪ್ರಮುಖರು ಸಭೆಗಳನ್ನು ನಡೆಸುವುದು.
2. ಪ್ರತಿ ತಾಲ್ಲೂಕು ಮಟ್ಟದವರೆಗೂ ಸಂಘಟನೆಯನ್ನು ಕೊಂಡೊಯ್ಯುವುದು.
3. ಏಪ್ರಿಲ್–2020ರ ಶಿಕ್ಷಕ ಸಮಾಚಾರ ಈ ಬಾರಿ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು http://krmss.com ನಲ್ಲಿ ಓದಬಹುದಾಗಿದೆ. ಎಲ್ಲರೂ ಇದನ್ನು ತಮ್ಮ ಪರಿಚಯದ ಕನಿಷ್ಟ 10 ಜನರಿಗೆ ವಾಟ್ಸ್ ಆ್ಯಪ್ ನಲ್ಲಿ ಕಳಿಸಲು ತಿಳಿಸಿದೆ.
4. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಹಿಳೆಯರಿಗಾಗಿ ಎರಡು ದಿನದ ಅಭ್ಯಾಸವರ್ಗ ಹಾಗೂ 2 ದಿನದ ರಾಜ್ಯಮಟ್ಟದ ಸಮ್ಮೇಳನ ನಡೆಸಲು ತೀರ್ಮಾನಿಸಲಾಯಿತು.

ಶಿಕ್ಷಕ ಸಂಘದ ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ ಗಂಗಾಧರಾಚಾರಿ ಅವರು ಸರ್ವರಿಗೂ ವಂದಿಸಿದರು. ಸಭೆಯಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ಕೊಟ್ರಪ್ಪನವರು ಹಾಗೂ ಶ್ರೀ ವೃಷಬೇಂದ್ರ ಸ್ವಾಮಿಯವರೂ ಪಾಲ್ಗೊಂಡಿದ್ದರು. ●

---

➢ ಪುಟ 18 ರಿಂದ.....

ಪರಿಚಿತವಾಗಿದೆ. ಹೀಗಾಗಿ ನಾವು ಭಾರತದ ಉತ್ತರದ ಗಡಿ ಹಿಮಾಲಯದವರೆಗೂ ಇತ್ತು ಎಂದು ದೃಢೀಕರಿಸಬಹುದಾಗಿದೆ.

### ದಕ್ಷಿಣ ದಿಕ್ಕಿನಲ್ಲಿಯ ಭಾರತದ ಪರಿಚಯ

ಯುವ ರಾಜ ಅಂಗಧನ ನೇತೃತ್ವದಲ್ಲಿ ಹನುಮಾನ್, ಜಾಂಬವಂತ, ನೀಲ್, ನಲ್‌ರನ್ನು ಒಳಗೊಂಡ ವಾನರ ಸೈನ್ಯ ಆಂಧ್ರ, ಕರ್ನಾಟಕ್, ತೊಂಡ್ ಚೋಳ, ಪಾಂಡ್ಯರ ನಾಡುಗಳು ಕಾವೇರಿ ಮತ್ತು ತಾಮ್ರ ಪಾಣಿ ನದಿಗಳು ಮಹೇಂದ್ರಗಿರಿ ಪರ್ವತ ಮತ್ತು ಸಮುದ್ರದವರೆಗೆ ಕಳಿಸಲಾಗುತ್ತದೆ.

ದಕ್ಷಿಣ ಭಾರತದ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದ ಪೂರ್ಣ ಪರಿಚಯವನ್ನು ನೋಡಬಹುದು. ಕಾವೇರಿ ನದಿಯ ಮತ್ತು ಮದ್ರಾಸ್ ಹತ್ತಿರವಿರುವ ತಾಮ್ರಪಾಣಿ ನದಿಯ ಬಗ್ಗೆಯು ಇಲ್ಲಿ ಹೇಳಿರುವುದನ್ನು ಕಾಣಬಹುದಾಗಿದೆ. ಇಂದಿನ ಪೂರ್ವ ಘಟ್ಟಗಳಲ್ಲಿಯ ಮಹೇಂದ್ರಗಿರಿ ಪರ್ವತದ ಉಲ್ಲೇಖವನ್ನು ಇಲ್ಲಿ ಕಾಣಬಹುದು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ರಾಮಾಯಣದ ಕಾಲದಲ್ಲಿಯೇ ಭಾರತದ ಪೂರ್ಣ ಪರಿಚಯ ಇತ್ತು ಎನ್ನುವುದು. ಇನ್ನೊಂದು ಅಂಶ ಗಮನಿಸುವಂತಹುದು ಎಂದರೆ 30 ದಿನಗಳಲ್ಲಿ ಈ ಪ್ರದೇಶಗಳನ್ನು ತಲುಪಿ ಮರಳಿ ಬರುವುದು ಎಂದು ನಿರ್ಧಾರವಾಗುವ ಅಂಶ.

ರಾಮಾಯಣವನ್ನು ಒಂದು ಮಹಾ ಗ್ರಂಥವಾಗಿ ನೋಡಬೇಕು ಎನ್ನುವುದು ಒಂದು ಕಡೆಯಾದರೆ, ಪ್ರಾಚೀನ ಭಾರತವನ್ನು ಅರಿಯಲು ರಾಮಾಯಣವೇ ರಾಮ ಬಾಣ ಎನ್ನುವುದು ನನ್ನ ಅಭಿಪ್ರಾಯ. ಜಾಣ ಓದುಗರಾದ ತಾವು ತಮ್ಮ ಅಭಿಪ್ರಾಯವನ್ನು ಹೇಳಬಹುದೇ? ●

# ಪ್ರಾಚೀನ ಕವಿಗಳ ದೃಷ್ಟಿಯಲ್ಲಿ ರಾಮ

**ಆರ್. ಸೀತಾಲಕ್ಷ್ಮಿ**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ**
**ಶಿಕ್ಷಕ ಸಂಘ**



ಶ್ರೀರಾಮಚಂದ್ರ ಭಾರತೀಯರ ಜನಮಾನಸದಲ್ಲಿ ಶಾಶ್ವತವಾಗಿ ನೆಲೆಸಿದ ದಿವ್ಯಮೂರ್ತಿ. ರಾಮಾಯಣ ಶಬ್ದದಲ್ಲೇ ಅದರ ಅರ್ಥ ಅಡಗಿದೆ. ರಾಮ+ಆಯಣ (ಕಥೆ) ರಾಮನ ಕಥೆಯೇ ರಾಮಾಯಣ. ಅಂದಾಜು 10,000 ವರ್ಷಗಳ ಹಿಂದೆ ತ್ರೇತಾಯುಗದಲ್ಲಿ ನಡೆದ ಈ ರಾಮಾಯಣವು ಮನುಕುಲಕ್ಕೆ ತಾರಕ ಮಂತ್ರವಾಗಿ ಉಳಿದಿದೆಯೆಂದರೆ ಅದರ ಸತ್ವ ಎಷ್ಟಿದೆಯೆಂದು ಆಲೋಚಿಸಬೇಕಾಗುತ್ತದೆ. ರಾಮಾಯಣವು ಧರ್ಮವನ್ನು ಗೌರವಿಸುತ್ತದೆ. ಸಂಬಂಧ ಹಾಗೂ ಕರ್ತವ್ಯ ಒಟ್ಟಿಗೆ ಬಂದ ಸಂದರ್ಭದಲ್ಲಿ ಕರ್ತವ್ಯವೇ ಹೆಚ್ಚು ಎಂಬ ಅರಿವನ್ನು ಮೂಡಿಸುತ್ತದೆ. ಸಂಬಂಧಗಳ ನಡುವೆ ತ್ಯಾಗಕ್ಕೆ ಹೆಚ್ಚು ಮಹತ್ವವಿದೆಯೆಂದು ತಿಳಿಸುತ್ತದೆ. ಕ್ಷಮಾಗುಣಕ್ಕೆ ಒತ್ತು ನೀಡುತ್ತದೆ. ಬಲಹೀನರಿಗೆ ರಕ್ಷಣೆ ಒದಗಿಸಲು ಸೂಚಿಸಿದೆ. ಸಹಾನುಭೂತಿ, ವಿಶ್ವಭ್ರಾತೃತ್ವ ಪ್ರಸ್ತುತ ಸಮಾಜಕ್ಕೆ ಅವಶ್ಯವಿರುವ ಈ ಮೌಲ್ಯಗಳನ್ನು ರಾಮಾಯಣವು ಸಾರ್ವಕಾಲಿಕವಾಗಿ ಎಲ್ಲ ಸಮಾಜಗಳಿಗೆ ನೀಡಿದೆ.

ಭಾರತೀಯ ನಾಗರೀಕತೆಯ ಆತ್ಮವೇ ರಾಮಾಯಣವಾಗಿದೆ ಎಂದರೆ ತಪ್ಪಾಗಲಾರದು.

ಧರ್ಮದ ಪ್ರತೀಕನಾಗಿರುವ ರಾಮನ ವ್ಯಕ್ತಿತ್ವವೇ ಎಲ್ಲರಿಗೂ ಆದರ್ಶಪ್ರಾಯ. ರಾಮನ ಋಜು ಮಾರ್ಗವೇ ಭಾರತದ ಜನರನ್ನು ಒಗ್ಗೂಡಿಸುವ ಶಕ್ತಿಯಾಗಿದೆ.

ಎಲ್ಲರಿಗೂ ಆದರ್ಶಪ್ರಾಯನಾದ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಗುಣಸ್ವಭಾವಗಳನ್ನು ಕಣ್ಣಿಗೆ ಕಟ್ಟುವಂತೆ ವಿಸ್ತಾರವಾಗಿ ವರ್ಣಿಸಿ ವಾಲ್ಮೀಕಿ ಮುನಿಗಳು ಶ್ರೀಮದ್‌ರಾಮಾಯಣವನ್ನು ರಚಿಸಿ ಇಡೀ ಮಾನವ ಜನಾಂಗಕ್ಕೆ ಅದ್ಭುತ ಕಾಣಿಕೆಯನ್ನು ನೀಡಿದ್ದಾರೆ.

ವಾಲ್ಮೀಕಿ ಮುನಿಗಳ ವರ್ಣನಾಕೌಶಲ್ಯ ಮುಂದಿನ ಎಲ್ಲ ಸಂಸ್ಕೃತ ಕವಿಗಳಿಗೂ, ಭಾಷಾ ಕವಿಗಳಿಗೂ ಸ್ಫೂರ್ತಿಯ ಉಗಮಸ್ಥಾನವಾಗಿ ರಾಮಾಯಣವು ಆದಿಕಾವ್ಯವೆನಿಸಿಕೊಂಡಿತು. ಪ್ರಸಿದ್ಧ ಕವಿಯಾದ ಕ್ಷೇಮೇಂದ್ರನು "ನುಮಃ ಸರ್ವೋಪ ಜೀವ್ಯ ತಂ ಕವೀನಾ ಚಕ್ರವರ್ತಿನಾಂ" ಎಂದು ನುಡಿದು ಸರ್ವಕವಿಗಳಿಗೂ ಮಾರ್ಗದರ್ಶಿಯೆಂದು ಹೇಳುತ್ತಾ ವಾಲ್ಮೀಕಿಯನ್ನು ಕವಿ ಚಕ್ರವರ್ತಿಯೆಂದು ಪಟ್ಟಾಭಿಷೇಕ ಮಾಡಿದ್ದಾನೆ. ಎಲ್ಲ ಕಾಲದ ಕವಿಗಳಿಗೂ ಕಥೆಯ ಮೂಲದ್ರವ್ಯವನ್ನು ಒದಗಿಸಿದವರು ವಾಲ್ಮೀಕಿಗಳೇ. ವಾಲ್ಮೀಕಿಗಳು ಗೊತ್ತುಪಡಿಸಿರುವ ಚೌಕಟ್ಟಿನಲ್ಲಿಯೇ ರಾಮಾಯಣದಲ್ಲಿ ಬರುವ ಪಾತ್ರಧಾರಿಗಳ ಗುಣಸ್ವಭಾವಗಳ ಚಿತ್ರಣವನ್ನು ಇತರ ಕವಿಗಳು ಚಿತ್ರಿಸಿದ್ದಾರೆ. ಕಥಾಸನ್ನಿವೇಶವನ್ನು ಕವಿಗಳು ಪರಿವರ್ತಿಸಿಕೊಂಡಿದ್ದರೂ ಪಾತ್ರಗಳ ಸ್ವಭಾವಗಳ ಮೂಲಸ್ರೋತ ವಾಲ್ಮೀಕಿ ರಾಮಾಯಣದಿಂದಲೇ ಪ್ರವಹಿಸಿ ಬಂದಿದೆ.



ವಾಲ್ಮೀಕಿ ಹಾಗೂ ನಾರದರ ನಡುವಿನ ಸಂವಾದದಲ್ಲಿ ಬರುವ ರಾಮನ ಗುಣಗಾನವನ್ನು ಇಲ್ಲಿ ಸ್ಮರಿಸುವುದು ಉಚಿತವೆನಿಸುತ್ತದೆ. ಮಹಾಪರಾಕ್ರಮಿ, ಜಿತೇಂದ್ರಿಯನೂ, ತೇಜಸ್ವಿಯೂ, ಧೀರನೂ, ಬುದ್ಧಿವಂತ, ನೀತಿವಂತ, ವಾಗ್ಮಿ ಅಜಾನುಬಾಹು, ಶಂಖದಂತೆ ರೇಖಾತ್ರಯವಿರುವ ಕಂಠ, ಪುಷ್ಟವಾದ ಗಂಡಸ್ಥಲಗಳು, ಲಕ್ಷಣವಾದ ಶಿರಸ್ಸು, ಸುಂದರ ಹಣೆ, ಗಂಭೀರ ನಡಿಗೆ ಸಮಕಟ್ಟಾದ ಆಕೃತಿ, ಮಿಂಚುವ ನಯವಾದ ಮೈಬಣ್ಣ, ಸರ್ವಾಂಗ ಸುಂದರ, ಮಹಾ ಪ್ರತಾಪಿ, ಧರ್ಮಜ್ಞ, ಸತ್ಯಸಂಧ, ಪ್ರಜಾಹಿತೈಷಿ, ಪರಿಶುದ್ಧ ಹೃದಯಿ, ಗುರುಹಿರಿಯರಿಗೆ ವಿಧೇಯನು, ಪರತತ್ತ್ವದಲ್ಲಿ ಸಮಾಹಿಚಿತ್ತನು, ಸಕಲ ಜೀವರಾಶಿಗಳನ್ನು ರಕ್ಷಿಸುವ ಸಾಮರ್ಥ್ಯವನ್ನು ಹೊಂದಿರುವವನು, ಧರ್ಮಪಾಲಕನು, ಶರಣಾಗತ ರಕ್ಷಕನು, ಅಪಾರ ಸ್ಮರಣಶಕ್ತಿಯನ್ನು ಹೊಂದಿರುವವನು ವೇದ ವೇದಾಂಗಗಳ ರಹಸ್ಯಗಳನ್ನರಿತ ವಿದ್ವಾಂಸನು, ಪ್ರತಿಭಾಶಾಲಿ, ಕಾರ್ಯ ದಕ್ಷ್ಯನು ನದಿಗಳು ಸಮುದ್ರದ ಬಳಿ ತೆರಳುವಂತೆ ರಾಮನ ಬಳಿ ಜನರು ಹೋಗುತ್ತಲೇ ಇರುತ್ತಾರೆ. ಹೀಗೆ ಸಕಲಗುಣ ಸಂಪನ್ನನಾಗಿದ್ದಾನೆಂದು ರಾಮನನ್ನು ನಾರದರು ವರ್ಣಿಸಿದ್ದಾರೆ. ಭೂ ಮಂಡಲದಲ್ಲಿ ಇಂತಹವನೊಬ್ಬ ಆದರ್ಶವುಳ್ಳ ಮರ್ಯಾದಾ ಪುರುಷೋತ್ತಮ ಇರಲೆಂದು ಬ್ರಹ್ಮನು ಶ್ರೀರಾಮನನ್ನು ಸೃಷ್ಟಿಸಿದ್ದನೆಂದು ಹೇಳುತ್ತಾರೆ.

**"ಕೂಜಂತಂ ರಾಮ ರಾಮೇತಿ ಮದುರಂ ಮಧುರಾಕ್ಷರಂ।**
**ಆರುಹ್ಯ ಕವಿತಾಶಾಖಂ ವಂದೇ ವಾಲ್ಮೀಕಿ ಕೋಕಿಲಮ್॥**

ಹೀಗೆ ರಾಮ ರಾಮ ಎಂದು ಎಷ್ಟೆಲ್ಲಾ ವರ್ಣಿಸಿದರೂ, ವಾಲ್ಮೀಕಿಗಳಿಗೆ ತೃಪ್ತಿಯೇ ಇಲ್ಲ. ಇಲ್ಲಿ ಒಂದು ಅಂಶ ಗಮನಿಸಬೇಕು. ವಾಲ್ಮೀಕಿಯು ಶ್ರೀರಾಮನನ್ನು "ಮರ್ಯಾದಾಪುರುಷೋತ್ತಮ"ನೆಂದು ಬಿಂಬಿಸಿದ್ದಾರೆಯೇ ಹೊರತು ಎಲ್ಲಿಯೂ ಅವನನ್ನು ವಿಷ್ಣು ಸ್ವರೂಪನೆಂದು ತಿಳಿಸಿಲ್ಲ.

**ಪುಟ 21 ಕ್ಕೆ ➢**

➢ ಪುಟ 21 ರಿಂದ.....

ವಾಲ್ಮೀಕಿಯಲ್ಲದೆ ಇನ್ನೂ ಅನೇಕ ಕವಿಗಳು ತಮ್ಮದೇ ಆದ ಕಲ್ಪನೆಯಲ್ಲಿ, ದೃಷ್ಟಿಕೋನದಲ್ಲಿ ರಾಮಾಯಣವನ್ನು ಬರೆದಿದ್ದಾರೆ. ಸುಮಾರು ನೂರಕ್ಕೂ ಮೀರಿ ವಿವಿಧ ರಾಮಾಯಣಗಳು ಇವೆ. ಉದಾಹರಣೆಗಾಗಿ ಕಂಬ ರಾಮಾಯಣ, ತುಲಸೀ ದಾಸರ ರಾಮಚರಿತಮಾನಸ, ಮೂಲ ರಾಮಾಯಣ, ಆಧ್ಯಾತ್ಮರಾಮಾಯಣ, ತೊರವೆರಾಮಾಯಣ, ರಾಮಾಯಣದರ್ಶನ ಇತ್ಯಾದಿ ಕೆಲವನ್ನು ಮಾತ್ರ ಉಲ್ಲೇಖಿಸುವೆ. ಕೆಲವು ಕವಿಗಳು ತಮ್ಮ ಕಾವ್ಯನಾಟಕಗಳಲ್ಲಿ ಶ್ರೀರಾಮಚಂದ್ರನನ್ನು ಪ್ರತಿಭಾಕಲ್ಪಿತವಾದ ತಮ್ಮ ವಾಗ್ಭೂಷಣಗಳಿಂದ ಅಲಂಕರಿಸಿ ಬರೆದಿದ್ದಾರೆ.

ವಾಲ್ಮೀಕಿಯಾದರೂ ರಾಮನನ್ನು **"ಸೋಮವತ್ ಪ್ರಿಯದರ್ಶನ"**– ಚಂದ್ರನಂತೆ ಆಹ್ಲಾದಕಾರಿ ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಾಕವಿಗಳಾದ ಭಾಸ, ಕಾಳಿದಾಸ, ಭವಭೂತಿಗಳು ತಮ್ಮ ಕಾವ್ಯ ನಾಟಕಗಳಲ್ಲಿ ರಾಮನನ್ನು ಹೇಗೆ ಚಿತ್ರಿಸಿದ್ದಾರೆಂದು ತಿಳಿಯೋಣ. ಭಾಸನ (ಕಾಲ ಕಿ.ಪೂ300 –200 ಅಂದರೆ 2200 ರಿಂದ 2300 ವರ್ಷಗಳ ಮಧ್ಯೆ) ಭಾಸನೆಂದರೆ ಸರಸ್ವತಿಯ ದಾಸ ಎಂಬ ಪ್ರಶಸ್ತಿಗಳಿಸಿದವನು. ಭಾಸನಿಂದ ಉಪಲಬ್ಧವಾದ ನಾಟಕಗಳು ಹದಿನಾಲ್ಕು. ಅವುಗಳಲ್ಲಿ 3 ರಾಮಾಯಣಕ್ಕೆ ಸಂಬಂಧಿಸಿದವು.

1. ಯಜ್ಞಫಲ 2. ಅಭಿಷೇಕ 3. ಪ್ರತಿಮಾನಾಟಕ

**ಯಜ್ಞಫಲ :** ಇದು 7 ಅಂಕಗಳ ನಾಟಕ, ಸೀತಾವಿವಾಹದ ಪರ್ಯಂತದ ಕಥೆ ಇಲ್ಲಿದೆ. ಪುತ್ರಕಾಮೇಷ್ಠಿಯಾಗದ ಫಲ

ಅ) ರಾಮ ಲಕ್ಷ್ಮಣ, ಭರತ, ಶತ್ರುಘ್ನನ ಜನನ

ಆ) ರಾಮ ಲಕ್ಷ್ಮಣರಿಗೆ ದಿವ್ಯಾಸ್ತ್ರ ಲಾಭ

ಇ) ಸೀತಾ ಸ್ವಯಂವರ– ಇವೇ ಯಜ್ಞಫಲಗಳು

ಪಟ್ಟಾಭಿಷೇಕಕ್ಕೆ ಸೂಕ್ತಪುತ್ರನ ಆಯ್ಕೆಯ ವಿಷಯದಲ್ಲಿ ದಾಶರಥನು ಮನೋವ್ಯಾದಿಗೆ ಒಳಗಾಗುತ್ತಾನೆ. ಮೂವರೂ ಪತ್ನಿಯರನ್ನು ಕರೆದು ಪಟ್ಟಾಭಿಷೇಕದ ವಿಷಯ ಪ್ರಸ್ತಾಪಿಸುತ್ತಾನೆ. ಕೌಸಲ್ಯೆ, ಸುಮಿತ್ರೆಯರಿಗಾದರೂ ಯಾರು ಪಟ್ಟಕ್ಕೆ ಬಂದರೂ ಸಮ್ಮತಿಯಿದೆ. ಆದರೆ ಕೊಟ್ಟ ಮಾತಿಗೆ ತಪ್ಪಿ ವಚನಭ್ರಷ್ಟನಾಗಬಾರದೆಂದು ಪಟ್ಟಾಭಿಷೇಕ ಯಾರಿಗೆ ಆಗಬೇಕೆಂದು ಕೈಕೇಯಿಯನ್ನೂ ಪ್ರಶ್ನಿಸುವನು.

ರಾಮಾಯಣದಲ್ಲಿ ಮಂಥರೆಯ ಕುಟಿಲ ಬುದ್ಧಿಯಿಂದ ಕೈಕೇಯಿ ಭರತನಿಗೆ ಪಟ್ಟಕಟ್ಟಲು ಹಠಹಿಡಿದಿದ್ದು ಎಲ್ಲರಿಗೂ ತಿಳಿದ ವಿಷಯ.

ಇಂತಹ ಕೈಕೇಯಿ ಕೂಡ

**ರಾಮೋಗುಣೌನಾಂ ನಿಕಷೋ ವರೀಯಾನ್**
**ನೃಪಾಸನರ್ಹ ಶತುಮನ್ಯುಕಲ್ಪಃ ।**
**ಸಂರಕ್ಷಣೌಯ್ಯೆವ ಭುವೋ ವಿದಾತ್ರಾ**
**ವಿನಿರ್ಮಿತೋ ವಿಷ್ಣುರಿವ ಪ್ರತಾಪೀ॥**

ರಾಮನೇ ಗುಣಾಢ್ಯ, ದೇವೇಂದ್ರನಿಗೆ ಸಮಾನ, ವಿಷ್ಣುವಿನಂತೆ ಪ್ರತಾಪಶಾಲಿ, ಪೃಥವೀ ರಕ್ಷಣೆಗಾಗಿಯೇ ಬ್ರಹ್ಮನು ಅವನನ್ನು ನಿರ್ಮಿಸಿದ್ದಾನೆ ಎಂದು ಹೃದಯಪೂರ್ವಕವಾಗಿ ಹೇಳುತ್ತಾಳೆ.

ಕೈಕೇಯಿಯ ಮನಸ್ಸಿನ ಭಾವವನ್ನು ದೃಢಪಡಿಸಿಕೊಳ್ಳಲು ದಶರಥನು "ಭರತನೂ ಗುಣಶಾಲಿ ರಾಜ್ಯರ್ಹ" ಎಂದು ಹೇಳುವನು.

ಪುನಃ ಕೈಕೇಯಿ–

**"ಭರತಸ್ಯ ಗುಣೌಃ ಕೇಸ್ಯುಃ ರಾಮೇತುಗುಣವತ್ತರೇ**
**ಸರ್ವಲಕ್ಷಣ ಸಂಪನ್ನೋ ರಾಜ್ಯಾರ್ಹೋ ರಾಮ ಏವತತ್"**

ಅಧಿಕ ಗುಣಸಂಪನ್ನನಾದ ಶ್ರೀರಾಮನೆದುರಿನಲ್ಲಿ ಭರತನ ಗುಣಗಳೆಲ್ಲಿ? ಸರ್ವಲಕ್ಷಣಯುಕ್ತ ರಾಮನೇ ರಾಜಪದವಿಗೆ ಅರ್ಹನು ಎನ್ನುತ್ತಾಳೆ. ಕೈಕೇಯಿಯಷ್ಟೇ ಅಲ್ಲ ಮಂಥರೆ ಕೂಡ ಗೌರವಿಸುವ ವ್ಯಕ್ತಿತ್ವವೆಂದು ಭಾಸ ಚಿತ್ರಿಸಿದ್ದಾರೆ.

ಬಾಲ್ಯದಲ್ಲಿಯೇ ಅಸ್ತ್ರವಿದ್ಯಾಕೌಶಲ್ಯನಾದ ರಾಮನ ಗುಣವು ರಾವಣನಿಗೆ ಗೊತ್ತಾಗಿ "ನ ಭವೇನ್ಮತ್ತೋ ಬಲಿಯಾನ್ ನರಃ" ಎಂದುಕೊಂಡು ರಾಮನನ್ನು ಸಂಹರಿಸಲು ತಿರಸ್ಕರಿಣೀ ವಿದ್ಯೆಯಿಂದ ಯಜ್ಞ ನಡೆಯುತ್ತಿರುವ ಪ್ರದೇಶದಲ್ಲಿ ಕಾಯುತ್ತಿರುತ್ತಾನೆ. ಆದರೆ ಅಲ್ಲಿ ರಾಮನ ಅಸ್ತ್ರವಿದ್ಯಾ ಕೌಶಲ್ಯವನ್ನು ಕಣ್ಣಾರೆ ನೋಡಿ ನಿಬ್ಬೆರಗಾಗುತ್ತಾನೆ. ವಿಶ್ವಾಮಿತ್ರನೂ ರಾಮನ ಜತೆಯಲ್ಲಿರುವುದರಿಂದ ನನ್ನದೇನೂ ಬೇಳೆ ಬೇಯುವುದಿಲ್ಲವೆಂದು ವಾಪಸ್ಸು ತೆರಳುತ್ತಾನೆ.

ಲೋಕ ಕಲ್ಯಾಣಕ್ಕಾಗಿ ಅಸ್ತ್ರಗಳ ಉಪಯೋಗವಾಗಲೆಂದು ವಿಶ್ವಾಮಿತ್ರನು ಜೃಂಭಕಾಸ್ತ್ರ, ಬ್ರಹ್ಮಾಸ್ತ್ರ ಮೊದಲಾದ ದಿವ್ಯಾಸ್ತ್ರಗಳನ್ನು ಮಂತ್ರೋಪದೇಶದ ಮೂಲಕ ರಾಮನಿಗೆ ನೀಡುತ್ತಾನೆ.

ರಾಜನಾದವನು ತನ್ನ ಆಡಳಿತಾತ್ಮಕ ದೃಷ್ಟಿ ಹೇಗಿರಬೇಕು ಎನ್ನುವ ದೂರದೃಷ್ಟಿಯನ್ನಿಟ್ಟುಕೊಂಡು ಭಾಸ ಮಹಾಕವಿಯು ಒಂದು ಅಪೂರ್ವ ಸನ್ನಿವೇಶವನ್ನು ಕಲ್ಪಿಸಿದ್ದಾನೆ. ರಾಮ ಲಕ್ಷ್ಮಣರನ್ನು ವಿಶ್ವಾಮಿತ್ರನು ಒಂದು ಹಳ್ಳಿಗೆ ಕರೆದೊಯ್ಯುತ್ತಾನೆ.

**ಏಷಾಂ ಕ್ಷೇತ್ರಂ ಕರ್ಮಭೂಮಿಃ ದಾರಾಪ್ರೋತಾದಿಕಂ ಜಗತ್।**
**ಬಂಧವಃ ಸತತಂ ಗಾವೋ ಧರ್ಮೋ ಭ್ಯಾಗತಪೂಜನಂ॥**

ಈ ಜನರಿಗೆ ಹೊಲವೇ ಕರ್ಮಭೂಮಿ. ಮಡದಿ ಮಕ್ಕಳು ಜಗತ್ತಿಗಿಂತ ಹೆಚ್ಚು. ಹಸುಕರುಗಳೇ ಇವರ ಬಂಧು ಬಳಗ. ಅತಿಥಿ ಅಭ್ಯಾಗತರ ಪೂಜೆಯೇ ಇವರ ಧರ್ಮವು ಎಂದು ಹಳ್ಳಿಗಳ ಸರಳ ಸ್ವಭಾವ, ಧರ್ಮನಿಷ್ಠೆಯ ಬಗ್ಗೆ ವಿಶ್ವಾಮಿತ್ರರು ರಾಜಕುಮಾರರಿಗೆ ತಿಳಿಸುತ್ತಾರೆ. ಇವರಲ್ಲಿ ಹಳ್ಳಿಗರ ಸ್ವಭಾವಕ್ಕೆ ಸಂತೋಷಗೊಂಡು ರಾಮನು ಕೆಲವರನ್ನು ಕರೆದೊಯ್ದರೆ ಅಯೋಧ್ಯೆ ಸ್ವರ್ಗಸಮಾನವಾಗುತ್ತದೆ. ತಪೋವನ ಸದೃಶವಾಗುತ್ತದೆ. ಕೆಲವರನ್ನು ಅಯೋಧ್ಯೆಗೆ ಕರೆದೊಯ್ಯೋಣವೇ ಎಂದು ಕೇಳುತ್ತಾನೆ. ಆಗ ವಿಶ್ವಾಮಿತ್ರನು ಇವರು ಪಟ್ಟಣಕ್ಕೆ ಬಂದರೆ ಪಟ್ಟಣಿಗರೇ ಆಗಿ ಕೃಷಿಯನ್ನು ಬಿಡುತ್ತರೆ. ವಿನಯ ಗುಣ ಹೋಗಿ ರಾಜರಿಗಿಂತ ನಾವೇನು ಕಡಿಮೆ ಎಂದು ಭಾವಿಸಿ ನಗರವೆಲ್ಲಾ ದೋಷಯುಕ್ತವಾಗುತ್ತದೆ. ಅತಿಥಿಗಳನ್ನು ಗೌರವಿಸಿದರೆ ಮನೆಗೆ ಬಂದವರೇ ತಮ್ಮನ್ನು ಗೌರವಿಸಲಿ ಎಂದು ಬೀಗುತ್ತಾರೆ. ಹಳ್ಳಿಗರು ಹಳ್ಳಿಯಲ್ಲೇ ಇರಲಿ. ಈ ಜನರಿಗೆ ಪಟ್ಟಣಿಗರಿಂದ ಯಾವ ತೊಂದರೆಯೂ ಆಗದಂತೆ ನೀನು ಮತ್ತು ದಶರಥನು ನೋಡಿಕೊಳ್ಳಬೇಕೆಂದು ತಿಳಿಸುತ್ತಾರೆ. ಪ್ರಾಯಶಃ ಭವಿಷ್ಯದ ಇಂದಿನ ಚಿತ್ರಣ ಅವರ ಕಣ್ಮುಂದೆ ಸುಳಿದಿರಬೇಕು. ಭಾಸ ಕವಿಯ ನೂರಾರು ವರ್ಷಗಳ ಹಿಂದಿನ ಈ ಮಾತನ್ನು **ಈಗಿನ ರಾಜಕೀಯಸ್ಥರು ಏನಾದರೂ ಗ್ರಹಿಸಿಯಾರೆಂದು ಆಶಿಸೋಣ.** ಸೀತಾಪರಿಣಯದ ಸಂದರ್ಭದಲ್ಲಿ ಭಾಸಕವಿಯು ಒಂದು ನೂತನ ಸನ್ನಿವೇಶವನ್ನು ತಂದಿದ್ದಾನೆ. ಶಿವಧನುರ್ಭಂಗವಾದ ನಂತರ ಸೀತಾ ವಿವಾಹವಾಗುತ್ತದೆ.

ಪುಟ 22 ಕ್ಕೆ ➢

➢ ಪುಟ 22 ರಿಂದ.....

ಶಿವಧನುಸ್ಸನ್ನು ಹೆದೆಯೇರಿಸಿದ ಬಾಲಕನನ್ನು ನೋಡುವ ಸಲುವಾಗಿ ಪರಶುರಾಮ ಅಲ್ಲಿಗೆ ಬರುತ್ತಾನೆ.

ತನ್ನಲ್ಲಿದ್ದ ವೈಷ್ಣವ ಧನುಸ್ಸನ್ನು ಹೆದೆಯೇರಿಸು ಎಂದು ರಾಮನಿಗೆ ಕೊಡುತ್ತಾನೆ. ರಾಮನು ಹೆದೆಯೇರಿಸುವುದನ್ನು ಕಂಡು ನಾನು ತಪಸ್ಸಿಗೆ ಹೋದರೆ ಇವನು ದುಷ್ಟರನ್ನು ನಿಗ್ರಹಿಸಬಲ್ಲನೆಂದು ಭಾವಿಸಿ

"ವತ್ಸಾ– ದಾಶರಥಿ ನೀನು ರಾಮರೂಪದಲ್ಲಿರುವ ಪುರಷೋತ್ತಮ" ಎಂದು ವಂದನಾಪೂರ್ವಕವಾಗಿ ಧನುಸ್ಸನ್ನು ಶ್ರೀರಾಮನಿಗೆ ಅರ್ಪಿಸುತ್ತಾನೆ.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. **ಭಾಸಕವಿಯು ರಾಮನನ್ನು ದೇವರೆಂದೇ ಭಾವಿಸುತ್ತಾನೆ.**

ರಾಮ ಪಟ್ಟಾಭಿಷೇಕ, ಕೈಕೇಯಿಂದ ವಿಘ್ನ, ದಶರಥನ ಮರಣ, ದಶರಥನ ಪ್ರತಿಮೆಯನ್ನು ಕಂಡು ಭರತನ ಶೋಕ, ರಾಮ–ಭರತರ ಸಮಾಗಮ ಪಾದುಕಾಗ್ರಹಣ, ಸೀತಾಪಹರಣ ಮತ್ತು ಸೀತಾಪಹರಣ ಪ್ರಸಂಗದಲ್ಲಿ ರಾಮನಿಗೆ ಸಹಾಯ ಮಾಡಲು ಭರತ ಪ್ರಯತ್ನ, ರಾವಣನ ಸಂಹಾರ, ರಾಮ ಪಟ್ಟಾಭಿಷೇಕ ಈ ರೀತಿ 7 ಅಂಕಗಳಿಂದ ಕೂಡಿದ "ಪ್ರತಿಭಾ ನಾಟಕ"ದಲ್ಲಿ ರಾಮನ ವ್ಯಕ್ತಿತ್ವದ ವರ್ಣನೆ ಇಡೀ ನಾಟಕದಲ್ಲಿ ವರ್ಣಿಸಿದ್ದಾನೆ.

ರಾಮನ ಪಟ್ಟಾಭಿಷೇಕಕ್ಕಾಗಿ ತಂದೆಯ ಬಳಿಗೆ ಹೋದಾಗ ಪರಿಸ್ಥಿತಿಯ ದೆಸೆಯಿಂದಾಗಿ ರಾಮನು ವನವಾಸಕ್ಕೆ ಹೋಗುವ ಆದೇಶ ಬರುತ್ತದೆ. ಏನೂ ವ್ಯತ್ಯಾಸ ಆಗಲಿಲ್ಲವೆಂಬಂತೆ ರಾಮನು ಸೀತೆಯೊಡನೆ ವನವಾಸಕ್ಕೆ ತೆರಳಿದ್ದನ್ನು ನೋಡಿ ಪ್ರಜೆಗಳೆಲ್ಲರೂ ವಿಸ್ಮಯ ಪಡುತ್ತಿದ್ದಾಗ ರಾಮನು–

**"ಸ್ವಃ ಪುತಃ ಕುರುತೇ ಪಿತುರ್ಯಾದಿ**
**ವಚಃ ಕಸ್ತತ್ರ ಭೂ ವಿಸ್ಮಯಃ"**

ಮಗನು ತಂದೆಯ ಮಾತಿನಂತೆ ನಡೆದರೆ ಆಶ್ಚರ್ಯವೇನು ಬಂತಪ್ಪಾ ಎನ್ನುತಾನೆ!

ಭಾಸಕವಿ ಪಿತೃವಾಕ್ಯ ಪಾಲನೆಯ ಮಹತ್ವವನ್ನು ರಾಮನ ಮೂಲಕ ಸಮಾಜಕ್ಕೆ ತಿಳಿಸಿದ್ದಾನೆ.

**ಇನ್ನೊಂದು ಪ್ರಸಂಗ:** ರಾಮ, ಸೀತೆ, ಲಕ್ಷ್ಮಣರು ವನವಾಸಕ್ಕೆ ಹೋದಾಗ ದಶರಥ

**"ಸೂರ್ಯ ಇವಗತೋ ರಾಮಃ ಸೂರ್ಯಂ ದಿವಸ ಇವಲಕ್ಷಣೋನುಗತಃ। ಸೂರ್ಯದಿವಸಾವಸಾವೇ ಛಾಯೇವ ನ ದೃಶ್ಯತೇ ಸೀತಾ॥**

**ಸೂರ್ಯನಂತೆ ರಾಮನಿಂದು ಹೋದನು ।**
**ದವಸದಂತೆ ಲಕ್ಷ್ಮಣನೂ ಹಿಂದೆ ಹೋದನು ।**
**ಸೂರ್ಯದಿನಗಳೆರಡು ಹೋಗಲು**
**ನೆರಳಿನಂತೆ ಸೀತೆಯೂ ಅದೃಶ್ಯಳಾದಳು ॥**

ರಾಮ– ತೇಜಸ್ವಿಯಾದ ಸೂರ್ಯ, ಲಕ್ಷ್ಮಣ ದವಸ–ಹಗಲು, ಸೂರ್ಯನ ನೆರಳು–ಸೀತಾ, ದಶರಥನ ಅರಮನೆಯಲ್ಲಿ ಕತ್ತಲು ಕವಿಯಿತು ಎಂಬ ಭಾವವನ್ನು ಭಾಸಕವಿಯು ಎಷ್ಟು ಸುಂದರವಾಗಿ ವರ್ಣಿಸಿದ್ದಾನೆ!

ಭರತನು ಶ್ರೀರಾಮನನ್ನು ಕಾಣಲು ಅರಣ್ಯಕ್ಕೆ ಹೋಗುವನು. ವಾಪಸ್ಸು ಹೊರಡುವಾಗ ರಾಮನಿಂದ ಪಾದುಕೆಯನ್ನು ಕೇಳುವನು. ಆಗ ಶ್ರೀರಾಮನ ಉದ್ಗಾರ ಹೃದಯ ಸ್ಪರ್ಶಿಯಾಗಿದೆ.

**ಸುಚಿರೇಣಾಪಿ ಕಾಲೇನ ಯಶಃ ಕಿಂಚಿನ್ಮಯಾರ್ಜಿತ**
**ಅಚಿರೇಣೈವ ಕಾಲೇನ ಭರತೇನಾದ್ಯ ಸಂಚಿತಂ॥**

ಬಹುಕಾಲ ಯತ್ನಿಸಿ ನಾನು ಗಳಿಸಿರಬಹುದಾದ ಕೀರ್ತಿಯನ್ನು ಭರತನು ಅಲ್ಪಕಾಲದಲ್ಲಿಯೇ ಸಂಪಾದಿಸಿಬಿಟ್ಟನು ಎಂದು ಭರತನ ಬಗ್ಗೆ ಹೆಮ್ಮೆ ಪಡುತ್ತಾನೆ. ತಂದೆಯ ಮೃತ ವಾರ್ತೆಯನ್ನು ಭರತನಿಂದ ತಿಳಿದ ರಾಮನು ತಂದೆಗೆ ಶ್ರಾದ್ಧ ಮಾಡುವಾಗ "ನಾವು ಕಿತ್ತುತಂದ ಹಣ್ಣುಗಳನ್ನು ದರ್ಬೆಗಳ ಮೇಲೆ ಅರ್ಪಿಸಿದಾಗ ನಮ್ಮ ವನವಾಸದ ಸ್ಮರಣೆ ಬಂದು (ಪರಲೋಕದಲ್ಲಿರುವ) ನನ್ನ ತಂದೆ ಅತ್ತುಬಿಡುತ್ತಾನೇನೋ ಎಂದು ಭಾವಿಸಿಕೊಂಡು ತಂದೆಗೆ ಯೋಗ್ಯನಾದ ರೀತಿಯಲ್ಲಿ ಶ್ರಾದ್ಧ ಮಾಡಲು ಸಾಧ್ಯವಾಗಲಿಲ್ಲವಲ್ಲ ಎಂದು ವಿಷಾದಪಡುತ್ತಾನೆ. ಈ ಪ್ರಸಂಗದಿಂದ ತಂದೆಯ ಮೇಲಿರುವ ರಾಮನ ಅಪಾರ ಶ್ರದ್ಧಾಭಕ್ತಿಯನ್ನು ಭಾಸ ಕವಿಯು ಅತಿ ಸುಂದರವಾಗಿ ಚಿತ್ರಿಸಿದ್ದಾನೆ.

ಕಿಷ್ಕಿಂದಾಕಾಂಡ, ಸುಂದರಕಾಂಡ, ಯುದ್ಧಕಾಂಡ, ವಿಭೀಷಣನ ಪಟ್ಟಾಭಿಷೇಕ, ನಂತರ ರಾಮನ ಅಯೋಧ್ಯೆಗೆ ಆಗಮನ ಹೀಗೆ 6 ಅಂಕಗಳಿರುವ ನಾಟಕಗಳು.

ಭಾಸನು ರಚಿಸಿರುವ ಮೂರನೇ ನಾಟಕ "ಅಭಿಷೇಕ".

ರಾಮಬಾಣದಿಂದ ಪೀಡಿತನಾದ ವಾಲಿ ಕೆಳಗೆ ಬಿದ್ದು

**"ಯುಕ್ತಂ ಭೋ ನರಪತಿ ಧರ್ಮ ಮಾಸ್ಥಿತೇನ**
**ಯುದ್ಧೇ ಮಾಂ ಛಲಯಿತುಮಕ್ರೇಣ ರಾಮ"**

ಎಂದು ರಾಮನನ್ನು ವಾಲಿ ಮೂದಲಿಸಿದಾಗ, ರಾಮನು "ವಾಲಿ ನೀನು ಮರಣ ದಂಡನೆಗೆ ಯೋಗ್ಯವಾದ ಪಾಪಕೃತ್ಯ ಮಾಡಿದ್ದೀಯ? ತಮ್ಮನ ಭಾರ್ಯೆಯನ್ನು ಸ್ಪರ್ಶಿಸಿದ ನೀನು ವಧ್ಯ" ಎಂದು ಉತ್ತರಿಸುವನು. ವಾಲಿಸಂಹಾರದ ಈ ಪ್ರಸಂಗದಲ್ಲಿ ಭಾಸಕವಿಯು ಶ್ರೇಷ್ಠ ನ್ಯಾಯಾಧೀಶನಂತೆ ವರ್ತಿಸಿದ್ದಾನೆ.

ಭಾಸಕವಿಯ ಅಭಿಪ್ರಾಯವೇನೆಂದರೆ ಅಪರಾಧಿಯನ್ನು ರಾಜನು ಯಾವ ಮಾರ್ಗದಿಂದಲಾದರೂ ವಧಿಸಬಹುದು, ಗಲ್ಲಿಗೇರಿಸಬಹುದು, ತಲೆಕಡಿಸಬಹುದು, ವಿಷಪ್ರಾಶನ ಮಾಡಿಸಬಹುದು.

ಖೈದಿಗೆ ಮರಣದಂಡನೆಯನ್ನು ವಿಧಿಸಿದ ನ್ಯಾಯಾಧಿಪತಿಯು ಆತನೊಡನೆ ಯುದ್ಧ ಮಾಡುವುದಿಲ್ಲ. ಕವಿಯು ನ್ಯಾಯವನ್ನು ಸಮಾನವಾಗಿ ತಿಳಿಹೇಳಿದ್ದಾನೆ. ವಾಲಿಯು ನಿರುತ್ತರನಾಗುತ್ತಾನೆ. ಅಂದರೆ ವಾಲಿ ಸಂಹಾರ ಧರ್ಮವಿರುದ್ಧವಲ್ಲ ಎಂದು ವಾಲಿ ಒಪ್ಪಿಕೊಂಡಿದ್ದಾನೆ.

ಸಮುದ್ರ ರಾಜನು ಬಿಡಲಿಲ್ಲವೆಂದು ರಾಮನಿಗೆ ಕೋಪ ಬಂದಾಗ ರಾಮನ ಧೀರೋದಾತ್ತ ಪರಾಕ್ರಮಕ್ಕೆ ಸಮುದ್ರ ರಾಜ "ನಾಯಾಯಣಸ್ಯ ನರರೂಪ ಮಾಶ್ರಿತಸ್ಯ" ಎಂದು ಭೀತಿಯಿಂದ ಶರಣಾಗುತ್ತಾನೆ.

ರಾವಣನ ವಧೆಯ ನಂತರ "ರಾಕ್ಷಸ ಸ್ಪರ್ಶದಿಂದ ದೂಷಿತಳಾದ ಸೀತೆ ಇಕ್ಷಾಕು ಕುಲಕ್ಕೇ ಕಳಂಕ ತಂದಿರುವವಳು ಅವಳು ನನ್ನನ್ನು ನೋಡುವುದೂ ತರವಲ್ಲ" ಎಂದು ರಾಮನು ಹೇಳಿದಾಗ ಸೀತೆಯು ಅಗ್ನಿ ಪ್ರವೇಶ ಮಾಡಲು ಲಕ್ಷ್ಮಣನು ಅಣ್ಣನಿಗೆ ತಿಳಿಸುತ್ತಾನೆ. ಆಗ ರಾಮನು ಆ ಪತಿವ್ರತೆಗೆ ಬೇಕಾದ ಸಕಲ ಸಿದ್ಧತೆ ಮಾಡಿಕೊಡು ಎಂದು ಹೇಳುತ್ತಾನೆ.

ಪುಟ 23 ಕ್ಕೆ ➢

➢ ಪುಟ 6 ರಿಂದ.....

ಅಗ್ನಿದೇವನು ಜಾನಕಿಯನ್ನು ತಂದೊಪ್ಪಿಸಿದಾಗ

**ಜಾನಾತಾಪಿ ಚ ವೈದೇಹ್ಯಾಃ ಶುಚಿತಾಂಧೂಮಕೇತನ ।**
**ಪ್ರತ್ಯಯಾರ್ಥಂ ಹಿ ಲೋಕನಾಮೇವ ಮೇವ ಮಯಾಕೃತಮ್ ॥**

ವೈದೇಹಿ ಪರಿಶುದ್ಧಳೆಂದು ಗೊತ್ತಿದ್ದರೂ ಜನರಿಗೆ ನಂಬಿಕೆ ಬರಲೆಂದು ಹೀಗೆ ಮಾಡಿದೆ ಎಂದು ರಾಮನು ಹೇಳುತ್ತಾನೆ.

ಭಾಸಮಹಾಕವಿಗೆ ಸೀತಾರಾಮರೇ ಲಕ್ಷ್ಮಿ ನಾರಾಯಣರೆಂಬುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ಪದೇ ಪದೇ ವಿರಾಟಪುರುಷನಾದ ಶ್ರೀಮನ್ ನಾರಾಯಣನೇ ಶ್ರೀರಾಮಚಂದ್ರನೆಂದೂ ಪದ್ಮನಿಲಯಗಳಾದ ಮಹಾಲಕ್ಷ್ಮಿಯೇ ಸೀತಾಮಾತೆಯೂ ಎಂದೂ ತನ್ನ ನಾಟಕಗಳಲ್ಲಿ ರಾಮ ಸೀತೆಯರನ್ನು ನೇರವಾಗಿ ದೈವತ್ವಕ್ಕೇರಿಸಿದ್ದಾರೆ.

ವರಕವಿಯೆಂದೂ, ಕವಿಕಾಳಿದಾಸ ಕುಲಗುರುವೆಂದೂ ವಿಖ್ಯಾತನಾದ ಕಾಳಿದಾಸನ ಕಾಲ ಕ್ರಿ.ಶ 400 ಎಂದು ಹೇಳುವರು. ಕಾಳಿದಾಸನ ಶ್ರಾವ್ಯನಾಟಕಗಳಲ್ಲಿ "ರಘುವಂಶ"ದಲ್ಲಿ ರಾಮಾಯಣದ ಕಥೆಯಿದೆ. ಒಟ್ಟು 19 ಸರ್ಗಗಳಿವೆ. 10ನೇ ಸರ್ಗದಿಂದ 15ನೇ ಸರ್ಗದವರೆಗೆ ಪೂರ್ತಿ ರಾಮಾಯಣವಿದೆ.

ಒಂದು ಮುತ್ತಿನ ಹಾರದ ಪದಕದಂತಿರುವುದೇ ರಾಮಾಯಣ. ಇಡೀ ರಘುವಂಶದ ಶ್ಲೋಕಗಳಲ್ಲಿ ಮೂರನೇ ಒಂದು ಭಾಗ 552 ಶ್ಲೋಕಗಳನ್ನು ರಾಮಾಯಣಕ್ಕೆ ಕಾಳಿದಾಸನು ಮೀಸಲಿಟ್ಟಿದ್ದಾನೆ.

ಶ್ರಾವ್ಯನಾಟಕದಲ್ಲಿ ಕಥೆಯನ್ನು ಮಾರ್ಪಡಿಸದೆ, ಎಲ್ಲಾ ಕಥಾಂಶಗಳಿಗೂ ಸಮಾನಸ್ಥಾನವನ್ನು ಕೊಟ್ಟು ಸಮಗ್ರ ಕಥೆಯನ್ನು ವರ್ಣಿಸಬೇಕಾಗಿದೆ. ಸ್ಥಳವು ಪರಿಮಿತವಾದ್ದರಿಂದ ವಿಸ್ತರಿಸಲು ಸಾಧ್ಯವಿಲ್ಲ. ಸಂಭಾಷಣೆಗಳು ಪರಿಮಿತ. ಇಷ್ಟೆಲ್ಲ ಪರಿಮಿತಿ ಒಳಗೆ, ವಾಲ್ಮೀಕಿ ರಾಮಯಣ ಕಥೆಯನ್ನು ಅದೇ ಶೈಲಿಯಲ್ಲಿ ಸಹೃದಯರು ಮೆಚ್ಚುವಂತೆ ವರ್ಣಿಸುವಲ್ಲಿ ಒಂದು ಪರೀಕ್ಷೆಯೇ ಸರಿ. ಅದು ಕಾಳಿದಾಸನಂತಹ ವರಕವಿಗೆ ಮಾತ್ರಸಾಧ್ಯ.

ಎರಡು ಸಂದರ್ಭಗಳಲ್ಲಿ ಕವಿಯು ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದಾನೆ. ರಾವಣನ ಹಾವಳಿಯಿಂದ ನೊಂದ ದೇವತೆಗಳು ವಿಷ್ಣುವನ್ನು ಮೊರೆ ಹೊಕ್ಕು ಸ್ತೋತ್ರ ಮಾಡುವುದು ಒಂದು.

ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಹಿಂತಿರುಗುವಾಗ ಶ್ರೀರಾಮನು ದಾರಿಯಲ್ಲಿ ಕಾಣುವ ವಿವಿಧ ವಸ್ತುಗಳನ್ನು ಸೀತೆಗೆ ವರ್ಣಿಸಿ ಹೇಳುವ ಸಂದರ್ಭ ಇವೆರಡೂ ಕಾಳಿದಾಸನ ಕಾವ್ಯ ಪ್ರತಿಭೆಯ ಮಹಾಸಂಕೇತಗಳು. ಶ್ರೀರಾಮನು ವಿಷ್ಣುವಿನ ಅವತಾರವೆಂದು ಕಾಳಿದಾಸನು ನಂಬಿದ್ದನು. ಕೌಸಲ್ಯ, ಕೈಕೇಯಿ, ಸುಮಿತ್ರರು, ವೈಷ್ಣವ ಚರುವನ್ನು ಭಕ್ಷಿಸಿ ಗರ್ಭಿಣಿಯರಾದರು. ವಿಷ್ಣುವು ತನ್ನನ್ನು ವಿಭಜಿಸಿಕೊಂಡು ಅವರ ಮೂರು ಗರ್ಭಗಳಲ್ಲಿ "ಉವಾಸ ಪ್ರತಿಮಾಚಂದ್ರಃ ಪ್ರಸನ್ನಾಮಾನಪಾಮಿವ".

ನಿರ್ಮಲ ಜಲವಿರುವ ಸರೋವರಗಳಲ್ಲಿ ಒಬ್ಬನೇ ಚಂದ್ರನ ಪ್ರತಿಬಿಂಬವಿರುವಂತೆ (3 ಗರ್ಭಗಳಲ್ಲಿ ವಿಷ್ಣುವಿನ ಅಂಶ) ನೆಲೆಸಿದ್ದರು.

ಕೌಸಲ್ಯಾಪುತ್ರನಿಗೆ ನಾಮಕರಣವಾದಾಗ

**ರಾಮ ಇತ್ಯಭಿರಾಮೇಣ ವಪುಸಾ ತಸ್ಯ ಚೋದಿತಃ ।**
**ನಾಮಧ್ಯೇಯಂ ಗುರುಶ್ಚಕ್ರೇ ಜಗತ್ ಪ್ರಥಮ ಮಂಗಳಮ್ ।**

ಶ್ರೀರಾಮ ಹೇಗೆ ಮಂಗಳಕರನೋ ಹಾಗೆ ಅವನ ಹೆಸರು ಮಂಗಳಕರ ಎಂದು ವರ್ಣಿಸಿದ್ದಾನೆ. ವಿಶ್ವಾಮಿತ್ರರು, ತಮ್ಮ ಯಜ್ಞ ರಕ್ಷಣೆಗಾಗಿ ಶ್ರೀರಾಮನನ್ನು ಕಳಿಸಿಕೊಡಬೇಕೆಂದು ಕೇಳಿದಾಗ ದಶರಥನು ಅವನು ಬಾಲಕನೆಂದು ಹಿಂಜರಿಯುತ್ತಾನೆ. ಆಗ ವಿಶ್ವಾಮಿತ್ರರು "ತೇಜಸಂ ಹಿನ ವಯಃ ಸಮೀಕ್ಷ್ಯತೇ" ತೇಜಸ್ವಿಗಳ ವಯಸ್ಸನ್ನು ಯಾರೂ ಪರಿಗಣಿಸುವುದಿಲ್ಲ ಎಂದು ಹೇಳುತ್ತಾರೆ.

ವಿಶ್ವಾಮಿತ್ರರ ಹಿಂದೆ ಹೊರಟ ರಾಮ ಲಕ್ಷ್ಮಣರು "ಪೌರದೃಷ್ಟಿಕೃತ ಮಾರ್ಗ ತೋರಣೌ" ಸಾಲು ನೈದಿಲೆಗಳಿಂದ ರಚಿತವಾದ ತೋರಣದಂತೆ ಪೌರರ ಕಣ್ಣಿಗೆ ಕಂಡರು.

ವಿಶ್ವಾಮಿತ್ರರು ಬಲಾ, ಅತಿಬಲಾ ಮಂತ್ರವನ್ನು ರಾಮ ಲಕ್ಷ್ಮಣರಿಗೆ ಉಪದೇಶಿಸಿದ್ದ ಫಲ ಅವರಿಗೆ ಹಸಿವು ಮತ್ತು ಮಾರ್ಗಾಯಾಸವಾಗಲಿಲ್ಲ.

ವಿವಾಹದ ನಂತರ ಅಯೋಧ್ಯೆಯ ಕಡೆಗೆ ಪಯಣಿಸುತ್ತಿದ್ದಾಗ ಜಾಮಧ್ಯಗ್ನನ (ಪರಶುರಾಮ) ಆಗಮನ, ಧನಸ್ಸನ್ನು ಹೆಗಲಿಗೇರಿಸು ಇಲ್ಲ, ಪರಾಜಯನಾಗು ಎಂಬ ದರ್ಪೋದ್ಧಿತ ನುಡಿ ಕೇಳಿ ರಾಮನು ಮುಗುಳ್ನಗುತ್ತಾ ಧನಸ್ಸನ್ನು ಹೆಗಲಿಗೇರಿಸಿದನು. ಪರಶುರಾಮನು ನಿಷ್ಪ್ರಭನಾಗಿ ತನ್ನ ಸೋಲನ್ನೊಪ್ಪಿಕೊಳ್ಳುತ್ತಾನೆ. ಇಲ್ಲಿ ಕಾಳಿದಾಸನ ವರ್ಣನೆ ರಂಜಿತವಾಗಿದೆ. ಪರಶುರಾಮ ಅಮಾವಾಸ್ಯೆಯ ಚಂದ್ರನಂತಾದರೆ ಶ್ರೀರಾಮನು ಸೂರ್ಯನಂತಾದ ಪರಶುರಾಮನು ಶ್ರೀರಾಮನನ್ನು ಕುರಿತು "ನನ್ನ ತಾಯಿಯಿಂದ ಬಂದ ರಜೋಗುಣವನ್ನು ನೀಗಿಸಿ ತಂದೆಯಿಂದ ಬಂದ ಸಾತ್ವಿಕಗುಣವನ್ನು ನೆಲೆಗೊಳಿಸಿದೆ. ನನ್ನ ನಿಗ್ರಹ ನಿನ್ನ ಅನುಗ್ರಹವೇ ಸರಿ" ಎಂದಾಗ ರಾಮನು ಮುನಿಯ ಪಾದಕ್ಕೆ ವಂದಿಸುತ್ತಾನೆ. ಜಯಶಾಲಿಯಾದವನಿಗೆ ವಿನಯವೇ ಭೂಷಣ ಎಂಬ ಮಾತನ್ನು ಜಗತ್ತಿಗೆ ಸಾರುತ್ತಾನೆ. ತಂದೆಯ ಅಣತಿಯಂತೆ ರಾಮನು ವನವಾಸಕ್ಕೆ ತೆರಳುವಾಗ ಅವನ ಮನಸ್ಥಿತಿಯನ್ನು ಕಾಳಿದಾಸನು ಹೀಗೆ ವರ್ಣಿಸುತ್ತಾನೆ.

**ದದತೋ ಮಂಗಲಕ್ಷೌಮೆ ವಸಾನಸ್ಯ ಚ ವಲ್ಕಲೇ ।**
**ದದೃಶುರ್ವಿಸ್ಮಿತಾಸ್ತಸ್ಯ ಮುಖರಾಗಂ ಸವಾಂಜನಾಃ ॥**

ಶ್ರೀರಾಮನು ಪಟ್ಟಾಭಿಷೇಕಕ್ಕಾಗಿ ಮಂಗಳವಸ್ತ್ರವನ್ನಾಡುವಾಗ ಮುಖದಲ್ಲಿ ಯಾವ ಬಗೆಯ ಗೆಲುವಿನ ಕಳೆಯಿತ್ತೋ, ವನವಾಸಕ್ಕಾಗಿ ನಾರುಡಿಗೆಯನ್ನು ಉಡುವಾಗಲೂ ಅದೇ ಕಳೆ ಇತ್ತು. ಇದನ್ನು ಕಂಡ ಜನಕ್ಕೆ ಅಚ್ಚರಿ. ಶ್ರೀರಾಮನು ಸೀತಾ, ಲಕ್ಷ್ಮಣ ಸಮೇತವಾಗಿ ಬರೀ ದಂಡಕಾರುಣ್ಯ ಮಾತ್ರವಲ್ಲ ಪ್ರತಿಯೊಬ್ಬ ಸಜ್ಜನರ ಹೃದಯವನ್ನು ಪ್ರವೇಶಿಸಿದ್ದಾನೆ.

ರಾವಣನ ಸಂಹಾರದ ನಂತರ ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಬರುತ್ತಿದ್ದಾಗ ಮಾರ್ಗದಲ್ಲಿ ಕಾಣುವ ಹಲವು ದೃಶ್ಯಗಳನ್ನು ಸೀತೆಗೆ ವರ್ಣಿಸುತ್ತಾನೆ. ಇದನ್ನು ಕಾಳಿದಾಸ 60 ಶ್ಲೋಕಗಳಲ್ಲಿ ಹಿಡಿದಿಟ್ಟಿದ್ದಾನೆ. ಬಹುದಿನಗಳಿಂದ ಅಗಲಿದ ದಂಪತಿಗಳು ಮತ್ತೆ ಒಂದೆಡೆ ಸೇರಿದಾಗ ವಿಶೇಷ ಸಂಭಾಷಣೆ ಅತ್ಯಂತ ಸಹಜ. ನೊಂದು ಬೆಂದ ಸೀತೆಯ ಹೃದಯಕ್ಕೆ ಇದು ಸಾಂತ್ವಾನ. ಈ ಉಚಿತಜ್ಞತೆ ರಾಮನಲ್ಲಿತ್ತೆಂದು ಕವಿಯ ಆಶಯ. ಪುಷ್ಪಕವಿಮಾನದಲ್ಲಿ ಬರುವಾಗ ಒಂದು ಸ್ಥಳವನೇ ತೋರಿಸಿ ಸೀತೆಗೆ ಹೇಳುತ್ತಾನೆ.

**ಸೈಷ್ ಸ್ಥಳಿಯತ್ರ ವಿಚಿನ್ವತಾತ್ವಂ ಭಷ್ಟಂ ಮಯಾ**
**ನೂಪುರಮೇಕಮುರ್ವ್ಯಾಂ ।**

**ಅದೃಶ್ಯತ ತ್ವಚ್ಚರಣೌರವಿಂದ ವಿಶ್ಲೇಷ ದುಃಖಾದಿವ**
**ಬದ್ಧಮೌನಮಾ ॥**

ಪುಟ 24 ಕ್ಕೆ ➢

➢ ಪುಟ 23 ರಿಂದ.....

("ಸೀತೆ ಇಲ್ಲಿ ನೋಡು ಕಾಡಿನಲ್ಲಿ ನಿನ್ನನ್ನು ಹುಡುಕುತ್ತಿರುವಾಗ ನಾನು ನಿನ್ನ ಕಾಲಿಂದ ಜಾರಿ ಬಿದ್ದ ಒಂದು ಕಾಲಂದುಗೆಯನ್ನು ಇಲ್ಲಿ ನೋಡಿದೆ. ನಿನ್ನ ಪಾದ ಕಮಲದ ವಿಯೋಗವಾಯಿತೆಂಬ ದುಃಖದಿಂದಲೋ ಏನೋ, ಅದು ಶಬ್ಧ ಮಾಡದೆ ಮೌನವಾಗಿತ್ತು") ಈ ಕೊನೆಯ ವಾಕ್ಯ ಕವಿಯ ಕಲ್ಪನಾ ವಿಲಾಸವನ್ನು ಸಾರುತ್ತದೆ.

ರಾಮನು ಇಂಗಿತಜ್ಞ ಎನುವುದಕ್ಕೆ ಮತ್ತೊಂದು ಸನ್ನಿವೇಶ. ವನವಾಸ, ರಾವಣನ ವಧೆ ಮುಗಿಸಿ ಅಯೋಧ್ಯೆಗೆ ಬಂದಾಗ ಎಲ್ಲ ಮಾತೆಯರ ಪಾದಕ್ಕೆರಗಿ ನಮಸ್ಕರಿಸಬೇಕೆಂದುಕೊಂಡಾಗ, ಕೈಕೇಯಿಯನ್ನು ರಾಮನ ಕಣ್ಣುಗಳು ಅರಸುತ್ತವೆ. ಕೈಕೇಯಿ ಪಶ್ಚಾತ್ತಾಪದಿಂದ ಬೆಂದು ಹೋಗಿರುವಳೆಂದು ಭಾವಿಸಿ ಅವಳನ್ನು ಹುಡುಕಿಕೊಂಡು ಹೋಗಿ ವಿನಯದಿಂದ ನಮಸ್ಕರಿಸಿ "ಅಮ್ಮ ವ್ಯಥೆ ಪಡಬೇಡ ನಿನ್ನಿಂದ ನನ್ನ ತಂದೆ ಸತ್ಯ ಪ್ರತಿಜ್ಞನೆಂದು ಲೋಕವಿಖ್ಯಾತನಾದನು". ನಿನ್ನ ಆಶೀರ್ವಾದ ಬಲದಿಂದ ನಾನು ಅದನ್ನು ರುಜುವಾತು ಮಾಡಿದಂತಾಯಿತು. ಮಹಾರಾಜರು ಸತ್ಯವಾದಿಯಾಗಿ ಕೀರ್ತಿಗಳಿಸಿದ್ದು ನಿನ್ನ ಸುಕೃತದಿಂದ ಎಂದು ಸಂತೈಸುತ್ತಾನೆ.

ಉತ್ತರಕಾಂಡದಲ್ಲಿ ಕಾಳಿದಾಸರು ಚಿತ್ರಿಸಿರುವಂತೆ ರಾಮನ ಗುಣಸ್ವಭಾವ ಅಭಿವ್ಯಕ್ತಿಗೆ ಒಂದೆರಡು ಸಂದರ್ಭಗಳನ್ನು ನೋಡಬಹುದು. ಸೀತೆಯ ಶೀಲಕ್ಕೆ ಬಂದ ಅಪವಾದವನ್ನು ಉಪೇಕ್ಷಿಸಲೇ ಅಥವಾ ಸೀತೆಯನ್ನು ತ್ಯಜಿಸಲೇ ಎಂಬ ಜಿಜ್ಞಾಸೆ ಬಂದಾಗ ರಾಜ ಧರ್ಮವೇ ಒಳ್ಳೆಯದೆಂದು ಸೀತಾಪರಿತ್ಯಾಗ ಮಾಡಿದನು.

ಲಕ್ಷ್ಮಣನು ವಾಪಸ್ಸು ಬಂದು ಸೀತಾಮಾತೆಯು ರಾಮನಿಗೆ ಹೇಳಿದ–

**ಕಲ್ಯಾಬದ್ದೇರಥವಾ ತವಾಯಂ"**
**ನ ಕಾಮಚಾರೋ ಮಯಿ ಶಂಕನೀಯಃ।**
**ಮಮೈವ ಜನ್ಮಾಂತರ ಪಾತಕಾನಂಃ**
**ವಿಪಾಕ ವಿಸ್ಫೂರ್ಜಥುರ ಪ್ರಸಹ್ಯಃ॥**

"ನಿನ್ನ ಬುದ್ಧಿ ಸದಾ ಲೋಕಕಲ್ಯಾಣವನ್ನು ಚಿಂತಿಸತಕ್ಕದ್ದು. ನೀನು ಮನಸ್ಸಿಗೆ ತೋರಿದಂತೆ ನಡೆದುಕೊಂಡಿದ್ದೀಯೇ ಎಂದು ನಾ ಹೇಳಲಾರೆ. ಜನ್ಮಾಂತರದಲ್ಲಿ ನಾನು ಮಾಡಿದ ಕರ್ಮಗಳ ಫಲ ಸಿಡಿಲಿನಂತೆ ಎರಗಿದೆ ಎಂದುಕೊಳ್ಳುತ್ತೇನೆ" ಎಂದು ವರದಿಯನ್ನು ಲಕ್ಷ್ಮಣನು ಅಣ್ಣನಿಗೆ ಒಪ್ಪಿಸಿದ.

ಒಡನೆ ರಾಮನ ಕಣ್ಣೀರು ಪ್ರವಾಹದಂತೆ ಉಕ್ಕಿತು. ಮಂಜು ಮುಸುಕಿದ ಪುಷ್ಯಮಾಸದ ಚಂದ್ರನಂತೆ ಅವನ ಮುಖ ಕಾಣಿಸಿತು. ಅಪವಾದಕ್ಕೆ ಹೆದರಿ ಜನಕ ಸುತೆಯನ್ನು ಮನೆಯಿಂದ ಕಳುಹಿಸಿದನೇ ಹೊರತು ಹೃದಯದಿಂದ ಹೊರಗೆ ಕಳುಹಿಸಿರಲಿಲ್ಲ ಎಂದು ಶ್ರೀರಾಮನು ಕೊರಗುತ್ತಾನೆ.

ತಂದೆಯ ಮಾತಿನಿಂದ ರಾಜ್ಯತ್ಯಾಗ, ಲೋಕಾಪವಾದದಿಂದ ಸೀತಾಪರಿತ್ಯಾಗ, ಕಾಲಪುರುಷನಿಗೆ ಹೇಳಿದ ಮಾತಿನಿಂದ ಲಕ್ಷ್ಮಣನ ತ್ಯಾಗ ಈ ಮೂರು ಶ್ರೀರಾಮನ ಸತ್ವ ಪರೀಕ್ಷೆಗೆ ಒದಗಿದ ಕಠೋರ ಪ್ರಸಂಗಗಳು.

ಕಾಲಪುರುಷನ ಭೇಟಿಯ ನಂತರ ಶ್ರೀರಾಮನು ತನ್ನ ಮಕ್ಕಳಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ತನ್ನ ಅವತಾರ ಕಾರ್ಯವನ್ನು ಮುಗಿಸಿ ವೈಕುಂಠದತ್ತ ನಿರ್ಗಮಿಸುತ್ತಾನೆ.

ಕಾಳಿದಾಸನಿಗೆ ಶ್ರೀರಾಮ ಬೇರೆ ಅಲ್ಲ, ಮಹಾವಿಷ್ಣು ಬೇರೆ ಅಲ್ಲ. ಶ್ರೀರಾಮನ ಪ್ರತಿಪ್ರಸಂಗವನ್ನು ಅರ್ಥೈಸುವಾಗಲೂ ಕವಿಯು ತನ್ನ ಕವಿತ್ವದ ಮೇರುಪರ್ವತವನ್ನೇರಿಸಿದ್ದಾನೆ.

ಭವಭೂತಿಯ ಹುಟ್ಟು ಹೆಸರು ಶ್ರೀಕಂಠ. ಕಾವ್ಯನಾಂ ಭವಭೂತಿಃ– ಕವಿಯ ಕಾಲ ಕ್ರಿಶ ಸುಮಾರು 700 ಎಂದು ವಿದ್ವಾಂಸರು ಊಹಿಸಿದ್ದಾರೆ. ಭವಭೂತಿಗೆ ಶಾಸ್ತ್ರ ಸಾಹಿತ್ಯಗಳಲ್ಲಿ ಅಪಾರ ಪಾಂಡಿತ್ಯವಿತ್ತು. ಈತನ ವಾಗ್ಝರಿ ಅಸಾಧಾರಣವಾದದ್ದು. ಮಾತುಗಳು ಅರ್ಥ ಗೌರವದಿಂದ ತುಂಬಿರುತ್ತಿದ್ದವು. ಮಾಲತೀ ಮಾಧವ ಮಹಾವೀರಚರಿತ, ಉತ್ತರರಾಮ ಚರಿತವೆಂಬ 3 ನಾಟಕಗಳನ್ನು ಬರೆದಿದ್ದಾನೆ. ಮಹಾವೀರ ಚರಿತವು ಉತ್ತರರಾಮ ಚರಿತ ರಾಮಾಯಣಕ್ಕೆ ಸಂಬಂಧಿಸಿದವು.

ಮಹಾವೀರ ಚರಿತೆಯನ್ನು ತೆಗೆದುಕೊಂಡರೆ ಇದರಲ್ಲಿ ಪಟ್ಟಾಭಿಷೇಕಾಂತವಾದ ಶ್ರೀರಾಮನ ಚರಿತ್ರೆ ಇದೆ. ಮಹಾವೀರ ಎಂದರೆ ರಾಮ. ಭವಭೂತಿಯ ಉದ್ದೇಶ ಆತನ ಅದ್ಭುತ ಪರಾಕ್ರಮವನ್ನು ಚಿತ್ರಿಸುವುದು ಏಳು ಅಂಕಗಳ ನಾಟಕ.

ವಿಶ್ವಾಮಿತ್ರರು ಯಜ್ಞ ಸಂರಕ್ಷಣೆಗಾಗಿ ತನ್ನ ಆಶ್ರಮಕ್ಕೆ ರಾಮಲಕ್ಷ್ಮಣರನ್ನು ಕರೆತರುತ್ತಾರೆ. ಇತ್ತ ಜನಕರಾಜನ ತಮ್ಮ ಕುಶಧ್ವಜನು ಸೀತಾ–ಊರ್ಮಿಳೆಯರನ್ನು ವಿಶ್ವಾಮಿತ್ರರಾಶ್ರಮಕ್ಕೆ ಕರೆತರುತ್ತಾನೆ. ಇದು ಮಹಾವೀರ ಚರಿತೆಯ ಆರಂಭದ ಭಾಗ ಶ್ರೀರಾಮ ಪಟ್ಟಾಭಿಷೇಕದಲ್ಲಿ ಮುಕ್ತಾಯವಾಗುತ್ತದೆ. ಅದ್ಭುತ ರಸವನ್ನು ತರುವ ಸಲುವಾಗಿ ಭವಭೂತಿಯು ಈ ಕಥಾ ಸನ್ನಿವೇಶವನ್ನು ಮಾರ್ಪಡಿಸಿದ್ದಾರೆ.

ರಾವಣನು ಸೀತೆಯನ್ನು ಮದುವೆಯಾಗಲು ಬಯಸಿ ತನ್ನ ದೂತನನ್ನಾಗಿ ಮಾಲ್ಯವಂತನನ್ನು ಕುಶಧ್ವಜನ ಬಳಿ ಕಳುಹಿಸುತ್ತಾನೆ. ಶಿವಧನಸ್ಸು ಅಲ್ಲಿಗೇ ಬರುತ್ತದೆ. ಶ್ರೀರಾಮನು ಶಿವಧನಸ್ಸು ಮುರಿಯಲಾಗಿ ಸೀತಾ–ರಾಮರ ವಿವಾಹ ನಿಶ್ಚಯವಾಗುತ್ತದೆ.

ರಾಕ್ಷಸ ಮಾತನಾದ ಮೌಲ್ಯವಂತನು ರಾವಣನನ್ನು ತ್ರೈಲೋಕ ವಿಜಯಿಯೆಂದು ಹೊಗಳಿದಾಗ ಲಕ್ಷ್ಮಣನಿಗೆ ಕೋಪ ಬರುತ್ತದೆ. ಗುಣಪಕ್ಷಪಾತಿಯಾದ ರಾಮನು ಲಕ್ಷ್ಮಣನಿಗೆ ರಾವಣನು ದುಷ್ಟನಾದರೂ "ನವಸಂತ್ಯೇಕತ್ರ ಸರ್ವೇಗಣೌಃ" ಎಂಬಂತೆ ಎಲ್ಲ ಗುಣಗಳು ಒಬ್ಬ ಮನುಷ್ಯನಲ್ಲಿಯೇ ಇರುವುದಿಲ್ಲ. ಈ ಮಾತನ್ನು ಕೇಳಿದ ಮಾಲ್ಯವಂತನಿಗೆ ರಾಘವನು ಗುಣಪಕ್ಷಪಾತಿಯೆಂದು ತಿಳಿಯುತ್ತದೆ. ಭೈರವ ರೂಪದಿಂದ ಬಂದು ತಾಟಕಿಯನ್ನು ರಾಮನು ಒಂದೇ ಬಾಣದಿಂದ ಸಂಹರಿಸುತ್ತಾನೆ. ಇದನ್ನು ನೋಡಿದ ನಂತರ ರಾವಣನಿಗಿಂತ ಶ್ರೀರಾಮನು ಪರಾಕ್ರಮಿ ಎಂದು ಮಾಲ್ಯವಂತನಿಗೆ ಮನವರಿಕೆಯಾಗುತ್ತದೆ.

**ಉತ್ತತ್ಯೈವ ರಾಘವಃ ಕಿಮಪಿ ತದ್‌ಭೂತಂ**
**ಜಗತ್ಯಾದ್ಭುತಂ (ರಾಘವನು ಸ್ವಭಾವದಿಂದಲೇ ಅದ್ಭುತನು)**
**ನಿಸರ್ಗೇಣ ಸ ಧರ್ಮಸ್ಯ ಗೋಪ್ತಾ**
**(ಆತನು ಸಹಜವಾಗಿ ಧರ್ಮ ರಕ್ಷಕ)**

ಧರ್ಮ ದ್ರೋಹಿಯಾದ ರಾವಣನಿಗೆ ರಾಮನಿಂದ ವಿಪತ್ತು ಕಾದಿದೆಯೆಂದು ಅರಿತು ಚಾಣಕ್ಯನ ಕುಟಿಲ ನೀತಿಗಳನ್ನು ಹೆಣೆದನು. ಪರಶುರಾಮನನ್ನು ಎತ್ತಿಕಟ್ಟಿದ್ದು ಮಾಲ್ಯವಂತನೇ. ಪರಶುರಾಮ ಪರಾಜಿತನಾದ ನಂತರ ದಂಡಕಾರಣ್ಯಕ್ಕೆ ರಾಮನನ್ನು ಕಳುಹಿಸಬೇಕೆಂದು ಪ್ರಯತ್ನಿಸಿದ್ದರು. ಮಾಲ್ಯವಂತನೆ, ಅವನ ಪ್ರೇರಣೆಯಿಂದಲೇ ಶೂರ್ಪಣಖಿಯೂ ಮಂಥರೆಯಲ್ಲಿ ಅವಿಷ್ಟಳಾಗಿ ಕೈಕೇಯಿಯ ಮೂಲಕ

ಪುಟ 25 ಕ್ಕೆ ➢

➢ ಪುಟ 24 ರಿಂದ.....

2 ವರಗಳ ಬೇಡಿಕೆಯನ್ನು ಇರಿಸುತ್ತಾನೆ. ಇವನ ಪ್ರೇರಣೆಯಿಂದ ಕಬಂಧನೂ, ಅನಂತರ ವಾಲಿಯು ರಾಮನಿಗೆ ಎದುರಾಗುತ್ತಾರೆ. ರಾಮನ ಪರಾಕ್ರಮದಿಂದ ವಾಲಿಸಂಹಾರ, ಕಬಂದ ವದೆ ನಡೆಯುತ್ತದೆ. ಈ ವಿಶೇಷ ಪ್ರಸಂಗಗಳು ಭವಭೂತಿ ಕಲ್ಪಿತ ಪರಿವರ್ತನೆಗಳು.

ಆದರೆ ವಾಲ್ಮೀಕಿ ರಾಮಾಯಣದಲ್ಲಿರುವಂತೆ ಮಹಾವೀರ ಚರಿತದಲ್ಲಿಯೂ ಶ್ರೀರಾಮನ ಧೀರೋಧ್ದಾತ, ಗುಣಶಾಲಿ, ನಯವಿನಯ ಸಂಪನ್ನ, ತೇಜಸ್ವಿ ಈ ಎಲ್ಲ ಗುಣಗಳನ್ನು ಭವಭೂತಿಯೂ ಪ್ರಕಟಿಸಿದ್ದಾನೆ. ವಿಶ್ವಾಮಿತ್ರ ಆಶ್ರಯದಲ್ಲಿ ಕುಶಧ್ವಜನು ಶ್ರೀರಾಮನ ಸೌಂದರ್ಯವನ್ನು ನೋಡಿ ಶಿವಧನಸ್ಸಿನ ಸ್ಪರ್ಧೆಯಿಲ್ಲದಿದ್ದಲ್ಲಿ ರಾಮನೇ ಸೀತೆಗೆ ತಕ್ಕ ವರ ಎಂದು ಭಾವಿಸುತ್ತಾನೆ.

ಎಂತಹ ವಿಪತ್ತು ಬಂದರೂ ಎದುರಿಸುತ್ತೇನೆಂಬ ಮನೋಧೈರ್ಯ ಶ್ರೀರಾಮನಿಗುಂಟು. ತನ್ನ ಹತ್ಯೆಗೆ ಹೊಂಚು ಹಾಕಿದವರಲ್ಲಿಯೂ ಗುಣವನ್ನು ಹುಡುಕಿ ಮೆಚ್ಚುವ ಗುಣಗ್ರಾಹಿತೆಯಂಟು.

**ಪರಮಗುಣ ಪರಮಾಣೂನ್ ಪರ್ವತೀಕೃತ್ಯ ನಿತ್ಯಂ।**
**ನಿಜಹೃದಿ ವಿಕಸಂತಃ ಸಂತಿ ಸಂತಃ ಕಿಯಂತಃ॥**

ಬೇರೆಯವರಲ್ಲಿ ಪರಮಾಣುವಿನಷ್ಟು ಗುಣವಿದ್ದರೂ ಅದನ್ನ ಪರ್ವತದಷ್ಟೆಂದು ಭಾವಿಸು ಎಂಬ ನೀತಿ ರಾಮನಲ್ಲಿ ನೆಲೆಸಿದೆ. ಕಬಂದನು ರಾಮನಿಗೆ "ವಾಲಿಯೆಂಬ ವಾನರ ರಾಕ್ಷಸನನ್ನು ಮೌಲ್ಯವಂತ ಎತ್ತಿಕಟ್ಟಿದ್ದಾನೆ" ಎಂದು ಹೇಳಿದಾಗ ರಾಮನು "ಮಿತ್ರನ ಚಾರಿತ್ರ್ಯವೆಂದರೆ ಇದೇ. ವಾಲಿಯಂತಹ ವೀರನು ಮಿತ್ರಕಾರ್ಯ ಒದಗಿದಾಗ ಎಂದಿಗೂ ಸುಮ್ಮನಿರನು" ಎಂದು ಶಾಂತವಾಗಿಯೇ ಎಚ್ಚರಿಕೆಯನ್ನು ಸ್ವೀಕರಿಸುತ್ತಾನೆ. ರಾಮದೇವನನ್ನು ಬಿಟ್ಟರೆ ಇನ್ನೆಲ್ಲಿ ಇಂತಹ ಮಾತುಗಳು ಹೊರಡುತ್ತವೆ ಎಂದು ಮೌಲ್ಯವಂತ ವಿಸ್ಮಿತನಾಗುತ್ತಾನೆ.

ವಾಲಿ ರಾಮನನ್ನು ಕೊಲ್ಲುವ ಉದ್ದೇಶದಿಂದ ಬರುತ್ತಿದ್ದಾಗ ವಾಲಿಯ ಮನಸ್ಸು "ರಾಮನು ಪೂಜ್ಯ ಯಾವ ಅಪರಾಧವನ್ನು ಮಾಡಿದವನಲ್ಲ. ಮಾಯಾವಿಗಳಾದ ಈ ರಾಕ್ಷಸರಿಂದ ವಂಚಿತನಾದ ದುಃಖದಲ್ಲಿದ್ದಾನೆ. ನನ್ನ ಮನೆಗೆ ಅತಿಥಿಯಾಗಿ ಬಂದಿದ್ದಾನೆ. ಸತ್ಕಾರ ಮಾಡುವ ಬದಲು ಯುದ್ಧ ಮಾಡುವ ಪ್ರಸಂಗ ಬಂದಿತಲ್ಲ" ಎಂದು ಪರಿತಪಿಸುತ್ತಾನೆ. ವಾಲಿಯು ಶ್ರೀ ರಾಮನನ್ನು ಪ್ರತ್ಯಕ್ಷ ನೋಡಿದಾಗ "ಅಹೋ ಇದೊಂದು ಅಪ್ರಾಕೃತವಾದ ಜ್ಯೋತಿ ಶ್ರೀಮಾನ್ ನಾರಾಯಣ ಅವತಾರವೇ ಹೌದು" ಎಂದುಕೊಳ್ಳುತ್ತಾನೆ.

ಭವಭೂತಿಯ ಉತ್ತಮ ರಾಮಚರಿತವು ಪಟ್ಟಾಭಿಷೇಕದ ನಂತರದ ಭಾಗ.

**ಉತ್ತಮ ರಾಮಚರಿತ :–** ಕಾಳಿದಾಸ ಮತ್ತು ಭವಭೂತಿಯರು ಉತ್ತರಕಾಂಡವೂ ಕೂಡ ರಾಮಾಯಣದ ಒಂದು ಭಾಗವೆಂದು ಒಪ್ಪಿಕೊಂಡಿದ್ದಾರೆ. ಭವಭೂತಿ ಉತ್ತರ ಕಾಂಡದ ಕಥೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದ್ದಾನೆ.

ಲವಕುಶರ ಯುದ್ಧ ಪ್ರಸಂಗ, ಶ್ರೀರಾಮಸೀತೆ ಪರಿಗ್ರಹಿಸಿ ಪತಿಯೊಡನೆ ಬಾಳ್ವೆ ನಡೆಸಿದನೆಂದು ಸೂಚಿಸುವ ಮಂಗಳಾಂತವಾದ ಕಥೆ.

ಭವಭೂತಿಯು ವಾಲ್ಮೀಕಿ ರಾಮಾಯಣವನ್ನು ಅನುಸರಿಸುತ್ತಾನೆ. ಆದರೂ ನಾಟಕರೂಪಕ್ಕೆ ಅಳವಡಿಸಿಕೊಳ್ಳುವಾಗ ರಂಜನೆಯುಂಟು ಮಾಡುವ ಹಾಗೂ ಮಂಗಳಾಂತವೆಂದೂ ಪದ್ಮಪುರಾಣದ ಕೆಲವು ಅಂಶಗಳನ್ನು ಕವಿ ಕಲ್ಪಿಸಿಕೊಂಡಿದ್ದಾನೆ.

ಉತ್ತರ ರಾಮಚರಿತವು ರಾಮಾಯಣ ಮತ್ತು ಉತ್ತರ ರಾಮಾಯಣ ಹೀಗೆ ಎರಡೂ ನಾಟಕರೂಪದಲ್ಲಿರುವ ಸಮಗ್ರ ರಾಮಾಯಣವಾಗಿದೆ.

**ಉತ್ತರ ರಾಮ ಚರಿತದಲ್ಲಿ**

ಅ) ಪೂರ್ಣ ಗರ್ಭಿಣಿ ಸೀತಳನ್ನು ವಾಲ್ಮೀಕಿ ಆಶ್ರಮಕ್ಕೆ ಲಕ್ಷ್ಮಣ ಬಿಡುವಿಕೆ

ಆ) ಲವಕುಶರ ಬಾಲ್ಯ, ರಾಮನಿಂದ ಶೂದ್ರ ಮುನಿ ಸಂಹಾರ.

ಇ) ಪಾತಾಳಲ್ಲಿದ್ದ ಸೀತೆ ವಾಲ್ಮೀಕಿ ಆಶ್ರಮಕ್ಕೆ ಬರುವಿಕೆ

ಈ) ಲವ ಯಜ್ಞಾಶ್ವವನ್ನು ಕಟ್ಟುಹಾಕುವಿಕೆ

ಉ) ಲವನಿಂದ ಜಂಭುಕಾಸ್ತ್ರ ಪ್ರಯೋಗ

ಊ) ಜಂಭುಕಾಸ್ತ್ರ ಉಪಸಂಹಾರ

ಋ) ವಾಲ್ಮೀಕಿಗಳ ಮೂಲಕ ರಾಮಾಯಣ ನಾಟಕ ಪ್ರದರ್ಶನ, ಪೌರಜನರೆದುರಿಗೆ ಸೀತೆಯ ಚಾರಿತ್ರಿಕ ಸುದ್ದಿ ಘೋಷಿಸಿ, ಶ್ರೀರಾಮನಿಗೆ ಒಪ್ಪಿಸುವಿಕೆ, ಶುಭದಲ್ಲಿ ಮುಕ್ತಾಯ.

ಇದಿಷ್ಟು ಉತ್ತರ ರಾಮಚರಿತದ ಅಂಕಗಳು.

ಶ್ರೀರಾಮನಿಗೆ ತನ್ನ ಮಡದಿಯ ಮೇಲೆ ಎಷ್ಟೊಂದು ಪ್ರೀತಿ ಇದ್ದಿತೆಂಬುದನ್ನು ಭವಭೂತಿ ಮನೋಜ್ಞವಾಗಿ ಚಿತ್ರಿಸಿದ್ದಾನೆ.

ವನವಾಸದಲ್ಲಿ ಸೀತೆಯನ್ನು ಕಳೆದುಕೊಂಡಾಗ ಹುಚ್ಚನಂತೆ ಕಾಡಿನಲ್ಲಿ ಅಲೆದಾಡಿ ಕಣ್ಣೀರ ಹೊಳೆಯನ್ನು ಹರಿಸಿದ ಶ್ರೀರಾಮ,

**"ವಾಹಿವಾತಯತಃಕಾಂತಾತಾಂ ಸೃಷ್ಟ್ವಾಮಾಮಪಿಸ್ಪಶ"**

ಓ ತಂಗಾಳಿಯೇ, ಸೀತೆ ಇರುವ ದಿಕ್ಕಿನಿಂದ ಬೀಸುತ್ತ ಬಾ, ಗಾಳಿ ಅವಳನ್ನು ಮುಟ್ಟಿ ಬಂದು, ನನ್ನನ್ನು ಸ್ಪರ್ಶಿಸು ಎಂದು ಹಲಬುತ್ತಾನೆ.

ಸೀತಾ ವಿರಹದ ಬೇಗೆಯನ್ನು ತಡೆದುಕೊಳ್ಳಲಾರೆ. ಸಮುದ್ರದಲ್ಲಿ ಮುಳುಗಿ ಮಲಗಿ ಬಿಡುತ್ತೇನೆ. "ಅವಗಾಹ್ಯಾರ್ಣ ಸ್ವಪ್ಸ್ಯೇ" ಎಂದು ಪರಿತಪಿಸುತ್ತಾನೆ. ಮತ್ತೊಮ್ಮೆ ಕೋಪದಿಂದ "ನಾಶಯಾಮಿ ಜಗತ್‌ಸರ್ವಂ, ತ್ರೈಲೋಕ್ಯಂ ಸಚರಾಚರಂ" ಎಂದು ಆರ್ಭಟಿಸುತ್ತಾನೆ. ಹೆಂಡತಿಯನ್ನು ಇಷ್ಟು ಪ್ರೀತಿಸುವ ಶ್ರೀರಾಮನಿಗೆ ತುಂಬು ಗರ್ಭಿಣಿಯನ್ನು ಒಂಟಿ ಅರಣ್ಯದಲ್ಲಿ ತಾನೇ ಕೈಬಿಡುವ ಪ್ರಸಂಗ ಬಂದಾಗ ಹೃದಯವು ಎಷ್ಟು ನೊಂದಿರಬೇಡ! ಅವನ ಅಳಲು ಯಾವ ಪರಿಯನ್ನು ಮುಟ್ಟಿರಬಹುದು. ಅನಂತರ ಒಂಟಿ ಬಾಳನ್ನು ಹೇಗೆ ಸವೆಸಿದ್ದಾನು! ಇದನ್ನು ಚಿತ್ರಿಸದೆ ವಾಲ್ಮೀಕಿಗಳು ಅದೇನು ಕಾರಣವೋ ಕೈಬಿಟ್ಟಾಗ, ಭವಭೂತಿ ತನ್ನ ಲೇಖನಿಯನ್ನು ಎತ್ತಿಕೊಳ್ಳಲೇ ಬೇಕಾಯಿತು.

"ರಾಮಸ್ಯ ಕರುಣೋ ರಸಃ" ಎಂದು ಉದ್ಗರಿಸಿದ ಭವಭೂತಿ ಕರುಣಾರಸವನ್ನು ಮುಗಿಲಿಗೇರಿಸಿ ಶೋಕದ ಸಂತತ ಧಾರಾವೃಷ್ಟಿಯನ್ನು ಧರೆಗೆ ಸುರಿಸಿದ್ದಾನೆ. ರಾಮನ ಶೋಕದಿಂದ 'ಅಪಿಗ್ರಾವಾರೋದಿತಿ' ಕಲ್ಲು ಬಂಡೆಯೂ ಅಳುತ್ತದೆ ಎಂದು ಬರೆದು ರಾಮನಿಗೆ ವಿಯೋಗದಿಂದಾದ ದುಃಖವನ್ನು ಅಳೆಯಲು ಸಾಧ್ಯವಾಗಿಸಿದ್ದಾನೆ.

ಭವಭೂತಿಯ ಪ್ರಕಾರ ಶ್ರೀರಾಮಚಂದ್ರ ಸುಖಬೇಡ ಎಂದವನಲ್ಲ. ಸುಖವನ್ನು ದೂರವಿಟ್ಟವನಲ್ಲ. ಸಹೃದಯ, ರಸಜ್ಞ, "ಸಾಂಸಾರಿಕೇಷು ಚಸುಖೇಷು ಚ ಸುಖೇಷು ವಯಂ ರಸಜ್ಞಾಂ" ಎಂದಿದ್ದಾನೆ. ಲೋಕಸಾಧಾರಣ ಹಂಬಲವು ಅವನಿಗೂ ಇದೆ.

ಶ್ರೀರಾಮನಿಗೆ ಅರ್ಥಕಾಮಗಳ ಭೋಗ ಒಪ್ಪಿಗೆಯೇ ಆದರೆ ಅದು

ಪುಟ 26 ಕ್ಕೆ ➢

➢ ಪುಟ 25 ರಿಂದ.....

ಧರ್ಮ ವಿರುದ್ಧವಾದರೆ ಭೋಗವನ್ನು ತೃಣಕ್ಕೆ ಸಮಾನವಾಗಿ ಗಣಿಸಿಯಾನು.

ಧರ್ಮಾರ್ಥ ಕಾಮಗಳೆಂಬ ತ್ರಿವರ್ಗ ಸೆಣಸಾಟ ಪ್ರಾರಂಭವಾದರೆ, ಧರ್ಮವನ್ನೇ ಎತ್ತಿಹಿಡಿಯತಕ್ಕವನು ಶ್ರೀರಾಮ.

ಧರ್ಮಪಕ್ಷವನ್ನು ಅವಲಂಬಿಸಿದಾಗ ಎಷ್ಟುಕಷ್ಟ ಬಂದರೂ ಸಹಿಸಿಕೊಳ್ಳುತ್ತೇನೆಂಬ ಲೋಕೋತ್ತರವಾದ ಮನೋದಾರ್ಢ್ಯ ಮತ್ತು ಕೆಚ್ಚು ರಾಮನಲ್ಲಿ ನೆಲೆಸಿದೆ.

"ರಾಮಭದ್ರ ಹೊಸದಾಗಿ ರಾಜ್ಯಭಾರವನ್ನು ವಹಿಸಿಕೊಂಡಿದ್ದೀಯ. ಪ್ರಜೆಗಳ ಅಭಿಪ್ರಾಯವನ್ನರಿತು ಅವರಿಗೆ ಹಿತವಾಗುವಂತೆ– ಅವರು ಸನ್ಮಾನಿತರಾಗುವಂತೆ ನೋಡಿಕೊಳ್ಳುವುದು ನಿನ್ನ ಕರ್ತವ್ಯ. ರಘುವಂಶೀಯರಾದ ನಿಮಗೆ ಜನಕಲ್ಯಾಣವೇ ಕೀರ್ತಿಕರ, ಅದೇ ನಿಮ್ಮ ಆಸ್ತಿ" ಎಂದು ವಸಿಷ್ಠರು ಶಿಷ್ಯನ ಮೂಲಕ ರಾಮನಿಗೆ ಸಂದೇಶ ಕಳಿಸಿದಾಗ ಶ್ರೀರಾಮನ ಉತ್ತರ

**ಸ್ನೇಹಂ ದಯಾಂಚ ಸೌಖ್ಯಂಚಯದಿವಾ ಜಾನಕೀ ಮಪಿ।**
**ಆರಾಧಯಾನ ಲೋಕಸ್ಯ ಮುಂಚತೋ ನಾಸ್ತಿಮೇ ವ್ಯಥಾ॥**

"ಪ್ರಜಾ ಸಂತೋಷಕ್ಕಾಗಿ ಸ್ನೇಹ, ದಯೆ, ಸೌಖ್ಯಗಳನ್ನು ಸಮಯ ಬಂದರೆ ಜಾನಕಿಯನ್ನೂ ಸಹ ತೊರೆದೇನು, ಆದರೆ ನಾನು ಹಿಂಜರಿಯುವುದಿಲ್ಲ" ಎಂದು ರಾಮನು ಹೇಳಿದ್ದನು.

ರಾಜಧರ್ಮ ಕೆಲವು ವೇಳೆ ಅತಿ ನಿಷ್ಠುರವಾದದ್ದು. ಅದು ಸ್ನೇಹ ದಾಕ್ಷಿಣ್ಯಗಳಿಗೆ ಕಟ್ಟುಬೀಳುವುದಿಲ್ಲ.

ಧರ್ಮನಿಷ್ಠನಾದ ರಾಜನಿಗೆ ವೈಯುಕ್ತಿಕವಾದ ಸುಖ ಗೌಣ ರಾಷ್ಟ್ರಹಿತ ಪ್ರಧಾನ (ಈ ಭಾಗ ಓದಿದಾಗ ನಿಮಗೆ ಮೋದಿಜೀಯವರು ನೆನಪಾಗುವುದಿಲ್ಲವೇ?) ರಾಜನಲ್ಲಿ ನಂಬಿಕೆ ಕಡಿಮೆಯಾಗಿ ರಾಷ್ಟ್ರವಿಪ್ಲವವಾಗುವ ಶಂಕೆ ಬಂದಾಗ, ತನ್ನ ಮತ್ತು ನನ್ನವರ ಸೌಖ್ಯವನ್ನು ಬಲಿದಾನ ಮಾಡಲು ಅವನು ಸಿದ್ಧ. ಈ ಸೀತೆ ಪರಿಶುದ್ಧಳು ಅಗ್ನಿಯಿಂದ ಪರಿಶುದ್ಧಳಾದಳೆಂದು ಹೇಳುವುದೇ ಅಸಂಗತವೆನ್ನುತ್ತಾನೆ ರಾಮ.

**"ತೀರ್ಥೋದಕಂ ಚ ವಹ್ನಿಶ್ಚ ನಾನ್ಯತಃ ಶುದ್ಧಿಮರ್ಹತಃ"**

"ಗಂಗಾತೀರ್ಥಜಲವೂ, ಅಗ್ನಿಯೂ ಇನ್ನೊಂದರಿಂದ ಶುದ್ಧವಾಗಬೇಕೇ"

ಸೀತೆಯ ಸ್ಪರ್ಶದಿಂದ ಅಗ್ನಿಯೇ ಪರಿಶುದ್ಧನಾದನೆಂದು ರಾಮನ ಭಾವನೆ.

ಲಂಕೆಯನ್ನು ಸುಟ್ಟ ಹನುಮಂತನಿಗೆ ಅಶೋಕವನದಲ್ಲಿರುವ ಸೀತಾಮಾತೆಗೆ ಏನಾಯಿತೋ ಎಂಬ ಸಂಶಯ ಬಂದಾಗ "ನಾಗ್ನಿರಗ್ನೌ ಪ್ರವರ್ತತೇ" ಅಗ್ನಿಯು ಅಗ್ನಿಯನ್ನು ಸುಡಲಾರದೆಂದು ತನ್ನನ್ನು ತಾನು ಸಮಾಧಾನ ಮಾಡಿಕೊಳ್ಳುತ್ತಾನೆ. ರಾಮ, ಹನುಮರಿಗೆ ಸೀತೆ ಅಗ್ನಿಸ್ವರೂಪಿಣಿ ಅರಿವಿದೆ. ಕಾಳಿದಾಸ ಸೂಕ್ತಿ ಇಲ್ಲಿ ಸ್ಮರಣೆಗೆ ಬರುತ್ತದೆ. "ಜನಕತನಯಾ ಸ್ನಾನಪುಣ್ಯೋದಕೇಷು" "ಜಾನಕಿ ಸ್ನಾನ ಮಾಡಿದ್ದರಿಂದ ರಾಮಗೀರ್ಯಾಶ್ರಮದ ಹೊಳೆಕಲ್ಲುಗಳು ಪವಿತ್ರವಾದವಂತೆ".

ಆದರೇನು "ಯಥಾಸ್ತ್ರೀಣ್ಮಾ ತಥಾವಾಚಂ ಸಾಧುತ್ವೇ ದುರ್ಜನೋ ಜನಃ" ಎನ್ನುತ್ತಾನೆ. ಕಾಳಿದಾಸ ಸೀತಾ ಪರಿತ್ಯಾಗದ ನಿಶ್ಚಯ ತೆಗೆದುಕೊಂಡಾಗ ರಾಮನ ಪರಿತಾಪ ಹೇಗಿರುತ್ತದೆ ಊಹಿಸಿದ ಭವಭೂತಿ ಭಾವನೆ "ನಾನು ನೃಶಂಸ ಮನೆಯಲ್ಲಿ ಪ್ರೀತಿಯಿಂದ ಸಾಕಿದ ಹಕ್ಕಿಯನ್ನು ಮೋಸದಿಂದ ಕಟುಕನಿಗ ಕೊಡುತ್ತಿದ್ದೇನೆ ಅಪೂರ್ವ ಕರ್ಮ ಚಾಂಡಾಲ ನಾನು"

"ದುಃಖ ಸಂವೇದನಾಯೈವ ರಾಮೇ ಚೈನ್ಯಮುಗತಃ" ದುಃಖವನ್ನನುಭವಿಸುತ್ತಾನೆ.

ಸುಗ್ರೀವ ಹನುಮಂತ ಮೊದಲಾದವರನ್ನು ಸ್ಮರಿಸಿಕೊಂಡು "ಸಜ್ಜನರೇ ನನಗೆ ಉಪಕಾರ ಮಾಡಿ ಮೋಸಹೋದಿರಿ. ರಾಮನು ಇಂತಹ ಕೊಲೆಗಡುಕನೆಂದು ನಿಮಗೆ ತಿಳಿದಿರಲಿಲ್ಲವೇ?" ಎಂದು ಹಲಬುತ್ತಾನೆ.

ವಾಲ್ಮೀಕಿಯಾಶ್ರಮಕ್ಕೆ, ವಸಿಷ್ಠ ಮುನಿಗಳು,ಅರುಂಧತಿ ಮತ್ತು ಕೌಸಲ್ಯೆ ಮೂರು ಜನ ಬಂದಿದ್ದಾರೆ. ಮಗಳ ವೃತ್ತಾಂತ ತಿಳಿದು ದುಃಖಿತನಾಗಿ ಮನಃ ಶ್ಯಾಂತಿಗಾಗಿ ಜನಕ ಮಹಾರಾಜನು ಬಂದಿದ್ದಾನೆ. ಅಲ್ಲಿ ಬೀಗರಾದ ಕೌಸಲ್ಯ ಜನಕರು ಸೀತೆಯನ್ನು ನೆನಪಿಸಿಕೊಂಡು ಪರಿತಪಿಸುತ್ತಾರೆ ಆಶ್ರಮದಲ್ಲಿ ಓಡಾಡುತ್ತಿದ್ದ ಲವನನ್ನು ಕಂಡು ಸೀತಾರಾಮರ ಸಾದೃಶ್ಯ ಅವನಲ್ಲಿ ಕಂಡು ಆಶ್ಚರ್ಯಚಕಿತರಾಗುತ್ತಾರೆ. ಅವನನ್ನು ಹತ್ತಿರ ಕರೆದು ವಾತ್ಸಲ್ಯದಿಂದ ಮಾತನಾಡಿಸುತ್ತಾರೆ ಅವನಿಂದ ಕುಶನು ತನ್ನ ಅಣ್ಣನೆಂದು ಅವರಿಬ್ಬರೂ ಅವಳಿ–ಜವಳಿ ಎಂದು ತಿಳಿದು ಹರ್ಷಿಸುತ್ತಾರೆ. ಲವನು ವಾಲ್ಮೀಕಿ ಮಹರ್ಷಿಗಳು ತಮ್ಮ ಗುರುಗಳೆಂದೂ ತಮ್ಮ ತಂದೆ ತಾಯಿಗಳ ಹೆಸರು ತಿಳಿಯದೆಂದೂ ಹೇಳಿ, ಸೀತಾಪರಿತ್ಯಾಗದವರೆಗಿನ ರಾಮಾಯಣದ ಕಥೆಯನ್ನು ಗುರುಗಳು ಕಾವ್ಯರೂಪದಲ್ಲಿ ರಚಿಸಿ ಕಲಿಸಿದ್ದಾರೆಂಬುದನ್ನು ತಿಳಿಸುತ್ತಾರೆ. ನಾಟಕ ದೃಶ್ಯ ಪ್ರೇಕ್ಷಕರಲ್ಲಿ ಯಾವ ಭಾವನೆಯನ್ನುಂಟುಮಾಡಿರಬಹುದೆಂಬುದನ್ನು ನೀವೇ ಕಲ್ಪಿಸಿಕೊಳ್ಳಿರಿ.

ಈ ದೃಶ್ಯದ ನಂತರ ಬರುವ ದೃಶ್ಯ ಭವಭೂತಿಯ ಕಲ್ಪನಾ ಸಾಮರ್ಥ್ಯವನ್ನು ಎತ್ತಿತೋರಿಸುತ್ತದೆ. ಯುದ್ಧಾಶ್ವವನ್ನು ಕಟ್ಟಿಹಾಕಿದ ಲವ ತನ್ನ ಮಗನೆಂದರಿಯದೆ ಯುದ್ಧ ಭೂಮಿಯಲ್ಲಿ ಲವನನ್ನು ಎದುರುಗೊಳ್ಳುತ್ತಾನೆ. ರಾಮನ ಆಗಮನವಾದ ಕೂಡಲೇ ಯುದ್ಧ ಭೂಮಿಯಲ್ಲಿ ಆವರೆಗೆ ಕ್ರೋಧ, ವೈರ ಶಸ್ತ್ರಾಸ್ತ್ರಗಳ ಭೀಕರ ಘರ್ಷಣೆಯಾಗಿದ್ದ ಪರಿಸರ ಬದಲಾಗಿ ಸ್ನೇಹ ಪ್ರೇಮಗಳ ಚಿಲುಮೆ ಹರಿಯುತ್ತದೆ. ಲವನು ಈವರೆಗೆ ಹೋರಾಡುತ್ತಿದ್ದ ಚಂದ್ರಕೇತುವನ್ನು ಕುರಿತು ಶ್ರೀರಾಮನನ್ನು ತೋರಿಸಿ ಇವರು ಯಾರೆಂದು ಕೇಳುತ್ತಾನೆ. ರಾಮಕಥೆಯನ್ನು ಬಾಯಿಪಾಠ ಮಾಡಿದ್ದ ಲವನಿಗೆ ತನ್ನೆದುರು ನಿಂತ ಗಂಭೀರ ತೇಜಸ್ವಿಯೇ ಆ ಕಥಾನಾಯಕನೆಂದು ತಿಳಿದು "ಆಹಾ ನನಗಿಂದು ಸುಪ್ರಭಾತವಾಯಿತು" ಎಂದು ಉದ್ಗರಿಸುತ್ತಾನೆ. ಇಲ್ಲಿ ಭವಭೂತಿ ತಂದೆ ಮಗನ ಮಿಲನವನ್ನು ಅದ್ಭುತವಾಗಿ ಚಿತ್ರಿಸಿದ್ದಾನೆ ನಾಟಕ ನೋಡಿ ಅಥವಾ ಓದಿಯೇ ಆ ರಸಾನುಭವವನ್ನು ಪಡೆಯಬೇಕು.

ಭರತಾಶ್ರಮಕ್ಕೆ ಹೋಗಿದ್ದ ಕುಶನಿಗೆ ಲವನು ಯುದ್ಧಾಶ್ವವನ್ನು ತಡೆದುದು ತಿಳಿದು ತಮ್ಮನ ರಕ್ಷಣೆಗೆ ಓಡಿ ಬರುತ್ತಾನೆ. ಅವನ ಮುಖದಲ್ಲಿ ಕ್ರೋಧಾವೇಶಗಳು ಮಡುಗಟ್ಟಿವೆ. ರೋಷಾವಿಷ್ಟನಾಗಿ ಸಿಡಿಲಮರಿಯಂತೆ ನುಗ್ಗಿ ಬರುತ್ತಿದ್ದ ಅಣ್ಣನನ್ನು ಕುರಿತು ಲವನು "ಅಣ್ಣಾ ವಿನಯದಿಂದ ಬಾ" ಆಶ್ಚರ್ಯಚಕಿತನಾದ ಕುಶನು ಲವನಿಗೆ ಏಕೆಂದು ಪ್ರಶ್ನಿಸಿದಾಗ "ಅಣ್ಣಾ ರಾಮಾಯಣದ ಕಥಾನಾಯಕನಾದ ಶ್ರೀರಾಮಚಂದ್ರ ಬಂದಿದ್ದಾನೆ" ಎನ್ನಲು ಕುಶನು "ಆಹಾ! ಆ ಪುಣ್ಯ ಪುರುಷನ ದರ್ಶನವಾಯಿತಲ್ಲ" ಎನ್ನುತ್ತಾ ವಿನಯದಿಂದ ರಾಮನಿಗೆ ವಂದಿಸುತ್ತಾನೆ.

ಪುಟ 27 ಕ್ಕೆ ➢

➢ ಪುಟ 26 ರಿಂದ.....

ಉತ್ತರರಾಮಾಯಣದಲ್ಲಿ ರಾಮ ಲವಕುಶರು ಯುದ್ಧ ಮಾಡಲು ಸಿದ್ಧರಾದರೆ ಭವಭೂತಿ ರಾಮನು ತನ್ನ ಮಕ್ಕಳೊಂದಿಗೆ ಯುದ್ಧವನ್ನೇ ಮಾಡುವುದಿಲ್ಲವೆಂದು ಚಿತ್ರಿಸುತ್ತಾನೆ. ಲವಕುಶರನ್ನು ಕಂಡಾಗ ಅವರು ತನ್ನ ಮಕ್ಕಳಿರಬಹುದೇ ಎಂಬ ಶಂಕೆಯುಂಟಾಗುತ್ತದೆ. ಸೀತೆಯ ನೆನಪಾಗುತ್ತದೆ. "ಹುಡುಗರ ಮುಖವನ್ನು ನೋಡಿದರೆ ಸೀತೆ ನೆನಪಾಗುತ್ತದೆ. ಹಲ್ಲು, ತುಟಿ, ಕಿವಿ ಎಲ್ಲ ಅವಳಂತೆಯೇ ಇದೆ. ಕಪ್ಪಾದ ಕಣ್ಣುಗುಡ್ಡೆಯ ಸುತ್ತ ಇರುವ ಕೆಂಪು ಛಾಯೆ ಮಾತ್ರ ವಿಶೇಷ. ಏಕೆಂದರೆ ಅವರು ಗಂಡುಮಕ್ಕಳು". ಇವರಲ್ಲಿ ರಾಜಠೀವಿ ಇದೆ. ರಘುಕುಲದವರಿಗೆ ಒಪ್ಪುವ ಮೈಕಟ್ಟು ಎಂದುಕೊಳ್ಳುತ್ತಾ ಅವರನ್ನು ಅಪ್ಪಿಕೊಳ್ಳುತ್ತಾನೆ. ಕುಶಲವರು ತಮಗೆ ರಾಮಾಯಣ ಬಾಯಿಪಾಠವಾಗಿದೆ ಎಂದಾಗ ಅವರ ಬಾಯಲ್ಲಿ ಆ ಮಹಾರಸಕಾವ್ಯವನ್ನು ಹಾಡಿಸಿ ಕೇಳುತ್ತಾ ಶೋಕತಪ್ತನಾಗುತ್ತಾನೆ.

ಭವಭೂತಿ ಉತ್ತರರಾಮ ಚರಿತೆಯಲ್ಲಿನ ಅಂತಿಮ ಭಾಗವನ್ನು ಅತ್ಯಂತ ಪರಿಣಾಮಕಾರಿಯಾಗಿ ಎಲ್ಲ ಪ್ರೇಕ್ಷಕರು ಕರುಣಾರಸದಲ್ಲಿ ಮಿಂದೆದ್ದು ಅದರ ಹನಿಗಳು ಕಣ್ಣೆವೆಯಲ್ಲಿ ತುಂಬಿ ತುಳುಕಿ ಹರಿಯುವಂತೆ ಬರೆದಿದ್ದಾನೆ. ಈ ಭಾಗವನ್ನು ದೃಶ್ಯರೂಪದಲ್ಲಿ ನೋಡಿಯೇ ಅನುಭವಿಸಬೇಕು.

ನಾಟಕದೊಳಗೊಂದು ನಾಟಕ. ಅದೂ ವಾಲ್ಮೀಕಿಗಳೇ ರಚಿಸಿದ್ದು ಗಂಗಾತೀರದಲ್ಲಿ ವಿಶಾಲರಂಗಮಂಟಪ ಸಿದ್ಧವಾಗಿದೆ. ಸಮಸ್ತ ಪೌರಜನರು ಗುಂಪು ಗುಂಪಾಗಿ ಬಂದು ಸೇರಿದ್ದಾರೆ. ನಾಟಕದ ಕಥೆ ಯಾರಿಗೂ ತಿಳಿಯದು ಶ್ರೀರಾಮನಿಗೂ ಆಹ್ವಾನ ತಲುಪಿದೆ. ಲಕ್ಷ್ಮಣನ ಸಮೇತ ಬಂದು ಕುಳಿತಿದ್ದಾನೆ. ಸೂತ್ರಧಾರ ಬಂದು "ಇದೀಗ ವಾಲ್ಮೀಕಿ ಮುನಿವಿರಚಿತ ಕರುಣಾದ್ಭುತ ರಸದೌತಣವನ್ನು ಪ್ರದರ್ಶಿಸಲಾಗುವುದು" ಎಂದು ಹೇಳುತ್ತಿರುವಂತೆ ನೇಪಥ್ಯದಲ್ಲಿ "ಹಾ ಆರ್ಯಪುತ್ರ, ಕುಮಾರ ಲಕ್ಷ್ಮಣ ಒಬ್ಬಂಟಿಗಳಾದ ನನಗೆ ಪ್ರಸವವೇದನೆ ಉಂಟಾಗುತ್ತಿದೆ. ನಾನೀಗ ಕಾಡುಮೃಗಗಳ ಪಾಲಾಗುವೆನಲ್ಲ! ಏನುಮಾಡಲಿ? ಅಸಹಾಯಕಳಾದ ನಾನೀಗ ಗಂಗಾನದಿಯಲ್ಲಿ ಬೀಳುವೆನು!" ಎಂಬ ಮಾತು ಕೇಳಿಬರುತ್ತದೆ. ಪ್ರೇಕ್ಷಕನಾಗಿ ಕುಳಿತಿದ್ದ ಲಕ್ಷ್ಮಣ "ಅಯ್ಯೋದೇವರೇ, ಇದೇನು ಪ್ರಸ್ತುತವಾಯಿತು" ಎಂದು ಮರುಗುತ್ತಾನೆ. ಇದಿಷ್ಟು ಪ್ರಸ್ತಾವನೆ.

ಇದನ್ನು ಮೈಮರೆತು ಕೇಳಿಸಿಕೊಂಡ ಶ್ರೀರಾಮನು ಉದ್ವೇಗದಿಂದ "ದೇವಿ, ದೇವಿ ಲಕ್ಷ್ಮಣನು ಅಲ್ಲಿಯೇ ಇದ್ದಾನೆ ನೋಡು" ಎಂದು ಕೂಗಿದಾಗ ಲಕ್ಷ್ಮಣನು ಅಣ್ಣ ಇದು ನಾಟಕ ಶಾಂತನಾಗು ಎನ್ನುತ್ತಾನೆ.

ಅಷ್ಟರಲ್ಲಿ ಎರಡು ಶಿಶುಗಳನ್ನು ಎತ್ತಿಕೊಂಡು ಸೀತಾದೇವಿ ರಂಗಸ್ಥಳದ ಮೇಲೆ ಕಾಣಿಸಿಕೊಳ್ಳುತ್ತಾಳೆ. ಅವಳನ್ನು ಭೂದೇವಿ ಮತ್ತು ಗಂಗಾದೇವಿಯರಿಬ್ಬರೂ ಹಿಡಿದುಕೊಂಡು ಸಂತೈಸುತ್ತಿದ್ದಾರೆ. ನಾಟಕವೋ, ಸತ್ಯವೋ, ಅಸತ್ಯವೋ ಒಂದನ್ನೂ ತಿಳಿಯಲಾರದೆ ಶ್ರೀರಾಮ ತನ್ಮಯ ಚಿತ್ತದಿಂದ ನೋಡುತ್ತಿದ್ದಾನೆ. ತಾನು ಎಲ್ಲಿದ್ದೇನೆ ಏನಾಗುತ್ತಿದೆಯೆಂದು ತಿಳಿಯದೆ "ತಮ್ಮ ಲಕ್ಷ್ಮಣ ನಾನು ಕತ್ತಲೆಯಲ್ಲಿ ಮುಳುಗಿ ಹೋಗುತ್ತಿದ್ದೇನೆ ನನ್ನನ್ನು ಹಿಡಿದುಕೋ" ಎನ್ನುತ್ತಾನೆ.

ರಂಗಸ್ಥಳದಲ್ಲಿ ಸೀತೆ, ತನ್ನ ತಾಯಿ ಭೂದೇವಿಯನ್ನು ಕುರಿತು "ತಾಯೇ ನೀನು ಈ ಸ್ಥಿತಿಯಲ್ಲಿ ನನ್ನನ್ನು ನೋಡಬೇಕಾಗಿ ಬಂತಲ್ಲ" ಎನ್ನುತ್ತಾಳೆ. ಭೂದೇವಿಯ ಮಾತೃಹೃದಯ ಕರಗಿ ನೀರಾಗಿ ಕಣ್ಣಿನಿಂದ ಉದುರುತ್ತದೆ. ಅವಳು ಗಂಗೆಯನ್ನು ಕುರಿತು "ಭಗವತೀ– ಭಾಗೀರಥಿ ನಿಮ್ಮ ರಾಮಚಂದ್ರನ ವರ್ತನೆ ಸರಿಯೇ?" ಎಂದು ಪ್ರಶ್ನಿಸುತ್ತಾಳೆ.

ಭೂದೇವಿಯ ಆಕ್ಷೇಪಣೆಗೆ ರಾಮವಂಶಜನಾದ ಭಗೀರಥನಿಂದ ಧರೆಗಿಳಿದ ಭಾಗೀರಥಿ ಅಮ್ಮ ವಸುಂಧರೆ, ಏನೂ ತಿಳಿಯದವಳಂತೆ ನಿನ್ನ ಅಳಿಯನ ಮೇಲೇಕೆ ಕೋಪಿಸಿಕೊಳ್ಳುವೇ ಲಂಕೆಯಲ್ಲಾದ ಪರಿಶುದ್ಧಿ ದೂರದ ಅಯೋಧ್ಯೆ ಜನರಿಗೆ ತಿಳಿಯುವುದಾದರೂ ಹೇಗೆ? ಅವರಿಗೆ ನಂಬಿಕೆ ಬಂದಿಲ್ಲ. ಸಕಲ ಪ್ರಜೆಗಳನ್ನು ನೆಮ್ಮದಿಯಾಗಿರಿಸಿ, ಸಂತೋಷಪಡಿಸಬೇಕಾದದ್ದು ಇಕ್ಷ್ವಾಕು ವಂಶದವರ ಕುಲಧರ್ಮ. ಹೀಗಿರುವಾಗ ಧರ್ಮ ಸಂಕಟದಲ್ಲಿ ಶ್ರೀರಾಮನಾದರೂ ಏನು ಮಾಡಿಯಾನು? ಎಂದು ಸಂತೈಸುತ್ತಾಳೆ.

ಸೀತೆ ತನ್ನ ತಾಯಿಯಾದ ಭೂಮಿಯ ಗರ್ಭದಲ್ಲಿ ಸೇರಿ ಹೋಗಬೇಕೆಂದು ಬಯಸಿದಾಗ ಆಗ ಇಬ್ಬರು ದೇವಿಯರು

"ವತ್ಸೆ ಜಗತ್ತಿಗೆ ಮಂಗಳಕರಳಾದ ನಿನ್ನನ್ನು ನೀನೇ ಏಕೆ ಹೀನಾಯವಾಗೆಣಿಸುವೇ? ನಿನ್ನನ್ನು ಸ್ಪರ್ಶಿಸಿದ್ದರಿಂದ ನಮ್ಮಿಬ್ಬರ ಪವಿತ್ರತೆಯು ಹೆಚ್ಚಿತು" ಎನ್ನುತ್ತಾರೆ.

ನಾಟಕದ ಈ ಸಂಭಾಷಣೆಯನ್ನು ಕೇಳಿದ ಲಕ್ಷ್ಮಣನು "ಅಣ್ಣಾ ಮಾತೆಯರಿಬ್ಬರ ಮಾತು ಕೇಳಿಸಿತೋ" ಎಂದಾಗ ಶ್ರೀರಾಮನು "ನಾನಲ್ಲ, ಈ ಪ್ರಜೆಗಳು ಕೇಳಿಸಿಕೊಳ್ಳಲಿ" ಎನ್ನುತ್ತಾನೆ. ಶ್ರೀರಾಮನು ಸೀತೆಯ ಪಾತಿವ್ರತ್ಯದ ಬಗ್ಗೆ ಕಿಂಚಿತ್ತೂ ಸಂಶಯವಿಲ್ಲ, ಆದರೇ ರಾಜಧರ್ಮ, ಪಾಲಿಸಲೇ ಬೇಕಾಯ್ತು. ಅಷ್ಟರಲ್ಲಿ ದೇವಿಯರಿಬ್ಬರೂ ಸೀತೆಯನ್ನು ಕರೆದುಕೊಂಡು ರಸಾತಳಕ್ಕೆ ಹೋಗುತ್ತಾರೆ. ಈ ದೃಶ್ಯವನ್ನು ಕಂಡು ರಾಮನು "ಹಾ ದೇವಿ" ಎಂದು ಮೂರ್ಛೆ ಹೋಗುತ್ತಾನೆ.

ಗಂಗಾತೀರದಲ್ಲಿ ನಾಟಕ ನೋಡುತ್ತಿದ್ದ ಜನರು ನೋಡು ನೋಡುತ್ತಿದ್ದಂತೆ ಗಂಗೆ ಉಕ್ಕೇರುತ್ತದೆ. ದೇವರ್ಷಿಗಳು ನಭದಲ್ಲಿ ಗೋಚರಿಸುತ್ತಾರೆ. ಗಂಗಾಪ್ರವಾಹದ ನಡುವಿನಿಂದ ಭೂದೇವಿ– ಗಂಗಾ ಮಾತೆಯರು ಜಾನಕಿಯ ಕೈ ಹಿಡಿದು ಮೇಲೇಳುತ್ತಾರೆ. ಜಾನಕಿಯನ್ನು ಜಗದ್ವಂದ್ಯೆ ಋಷಿಪತ್ನಿ ಅರುಂಧತಿಗೆ ಒಪ್ಪಿಸುತ್ತಾರೆ. ಲಕ್ಷ್ಮಣನಿಗೆ ಆಶ್ಚರ್ಯವೋ ಆಶ್ಚರ್ಯ. ಆದರೆ ರಾಮ ಇನ್ನೂ ಮೂರ್ಛೆ ತಿಳಿದೆದ್ದಿಲ್ಲ ಆಗ ಅರುಂಧತಿ "ವತ್ಸೇ ವೈದೇಹಿ, ಸೌಮ್ಯವಾದ ನಿನ್ನ ಕೈನಿಂದ ಮುಟ್ಟಿ ರಾಮಚಂದ್ರನನ್ನು ಬದುಕಿಸು ಬಾ" ಎನ್ನಲು ಸೀತೆ ಗಾಬರಿಯಿಂದ ಆರ್ಯಪುತ್ರ ಎಂದು ರಾಮನನ್ನು ಸ್ಪರ್ಶಿಸುತ್ತಾಳೆ. ಎಚ್ಚರಗೊಂಡ ಶ್ರೀರಾಮನಿಗೆ ಬಳಿಯಲ್ಲಿರುವ ಸೀತೆಯನ್ನು ಕಂಡು ಆಶ್ಚರ್ಯ! ಋಷಿಪತ್ನಿ ಅರುಂಧತಿಯನ್ನು ಕಂಡು ನಾಚಿಕೆ. ಇದೇ ಸಮಯಕ್ಕೆ ಮಾವ ಜನಕರಾಜ, ತಾಯಿ ಕೌಸಲ್ಯ ಎಲ್ಲರೂ ಹತ್ತಿರ ಬರುವರು. ಅದೃಶ್ಯಳಾಗಿದ್ದ ಭೂದೇವಿ, ಗಂಗಾದೇವಿಯರು, ಜಗತ್ಪತೇ ರಾಮಚಂದ್ರ ನಿನ್ನ ಮಡದಿಯನ್ನು ನಿನಗೆ ಒಪ್ಪಿಸುತ್ತಿದ್ದೇವೆ. ಆಕೆ ಪರಿಶುದ್ಧಳು ಎಂದು ನುಡಿಯುತ್ತಾರೆ.

ಅರುಂಧತಿಯು "ಎಲೈ ಪ್ರಜಾ ಜನರೇ ಭೂದೇವಿ, ಗಂಗಾದೇವಿಯರು ನಿಮ್ಮೆದುರಿಗೇ ಜಾನಕಿಯನ್ನು ಹೊಗಳಿದ್ದಾರೆ. ಅಗ್ನಿ ದೇವನೂ ಈಕೆ ಪುಣ್ಯಚರಿತೆ ಎಂದು ಒಪ್ಪಿಕೊಂಡಿದ್ದಾನೆ. ನಾನೂ ಸಹ ಅದನ್ನು ಅನುಮೋದಿಸುತ್ತೇನೆ. ಜನರೆಲ್ಲ ಏಕ ಮನಸ್ಸಿನಿಂದ ಜಾನಕಿಗೆ ತಲೆಬಾಗಿ ವಂದಿಸುತ್ತಾರೆ.

ವಾಲ್ಮೀಕಿಗಳು ಲವಕುಶರೊಂದಿಗೆ ಬಂದು ಅವರಿಗೆ ಎಲ್ಲರ ಪರಿಚಯ ಮಾಡಿಸಿಕೊಡುತ್ತಾರೆ. ಪಾಪ ಆ ಬಾಲಕರಿಗೆ ತಾಯಿಯ

ಪುಟ 32 ಕ್ಕೆ ➢

# ರಾಮಾಯಣದ ವಿಶ್ವಭ್ರಮಣ




**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


**ಸ**ಹಸ್ರಾರು ವರ್ಷಗಳ ಹಿಂದೆ ನಮ್ಮ ಪ್ರಾಚೀನ ಮಹರ್ಷಿಗಳು ಮಾನವನ ಸರ್ವತೋಮುಖ ವಿಕಾಸಕ್ಕಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆಂಬ ನಾಲ್ಕು ಮೌಲ್ಯಗಳನ್ನು ಪ್ರಧಾನವಾಗಿ ಗುರುತಿಸಿದ್ದರು. ಈ ಮೌಲ್ಯಗಳು ಮಾನವನ ವೈಯಕ್ತಿಕ, ಕೌಟುಂಬಿಕ, ಔದ್ಯೋಗಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಕಾಸಕ್ಕೆ ಸೋಪಾನವೆಂದು ತಿಳಿದಿದ್ದರು. ಮಾನವನ, ಮೌಲ್ಯಯುತ ಜೀವನವನ್ನು ಯಾವ ರೀತಿ ನಡೆಸಬೇಕೆಂಬುದನ್ನು ತೋರಿಸಲು ಅಂಥ ಜೀವನವನ್ನು ನಡೆಸಿದ ವ್ಯಕ್ತಿಗಳ ಆದರ್ಶವನ್ನು ನಮ್ಮ ಮುಂದೆ ಮೇಲ್ಪಂಕ್ತಿಯಾಗಿ ಕಥಾರೂಪದಲ್ಲಿ, ಕಾವ್ಯಗಳ ರೂಪದಲ್ಲಿ ತೆರೆದಿಟ್ಟರು. ಹೀಗಾಗಿ ಈ ಪುಣ್ಯಭೂಮಿಯ ಜನರೆಲ್ಲಾ ಅದರಂತೆ ತಮ್ಮ ಬದುಕನ್ನು ರೂಪಿಸಿಕೊಂಡು, ಎಲ್ಲರೂ ಸಭ್ಯರೂ, ಸುಸಂಸ್ಕೃತರೂ, ಶ್ರೇಷ್ಠರೂ ಎಂದು ಹೆಸರು ಪಡೆದರು. ಇಂಥದೇ ಜೀವನವನ್ನು ಜಗತ್ತಿನ ಸರ್ವಮಾನವರೂ ನಡೆಸಬೇಕೆಂದು ಆಶಿಸುತ್ತಾ ಅವರಿಗೆ, ನೀವೂ ಸಹ ಆರ್ಯರಾಗಿರಿ, ನಿಮ್ಮನ್ನು ಶ್ರೇಷ್ಠರನ್ನಾಗಿ ಮಾಡುವ ಜವಾಬ್ದಾರಿ ನಮಗಿರಲಿ ಎಂದು ಸಂಕಲ್ಪಿಸುತ್ತಾ 'ಕೃಣ್ವಂತೋ ವಿಶ್ವಮಾರ್ಯಂ' ಎಂಬ ಹೊಣೆಗಾರಿಕೆಯನ್ನು ಇಲ್ಲಿನ ಹಿಂದೂ ಸಮಾಜಕ್ಕೆ ಹೊರಿಸಿದರು.



ಇಡೀ ಮಾನವ ಸಮುದಾಯ ಹೇಗೆ ಬಾಳಿ ಬದುಕಬೇಕೆಂದು ತೋರಿಸಲು ನಾರದ ಮಹರ್ಷಿಗಳು ಮಹರ್ಷಿ ವಾಲ್ಮೀಕಿಗೆ, ಶ್ರೀರಾಮನ ಕಥೆಯನ್ನು ಹೇಳಿ ಅದನ್ನು ಕಾವ್ಯ ರೂಪದಲ್ಲಿ ಬರೆಯಲು ಆದೇಶಿಸಿದರು. ವಾಲ್ಮೀಕಿ ಮಹರ್ಷಿಗಳು ಛಂದೋಬದ್ಧವಾಗಿ ಸಂಸ್ಕೃತ ಭಾಷೆಯಲ್ಲಿ ಬರೆದ ಶ್ರೀರಾಮ ಕಥೆಯೇ ರಾಮಾಯಣ. ಇದೇ ಜಗತ್ತಿನ ಮೊದಲ ಮಹಾಕಾವ್ಯ–ಆದಿಕಾವ್ಯ–ವಾಲ್ಮೀಕಿಗಳೇ ಆದಿಕವಿ.

ರಾಮಾಯಣ ಕಾಲದಲ್ಲಿ ಭಾರತೀಯ ಸಮಾಜ ಹೇಗಿತ್ತು ಎಂಬುದನ್ನು ಮಹರ್ಷಿ ವಾಲ್ಮೀಕಿ ಈ ರೀತಿ ವರ್ಣಿಸಿದ್ದಾರೆ.

**ನ ನಾಸ್ತಿಕೋ ನಾನ್ಋತಕೋ ನ ಕಶ್ಚಿದ ಬಹುಶ್ರುತಃ।**
**ನಾಸೂಯಕೋ ನ ಚಾಶಕ್ತೋ ನಾ ವಿದ್ವಾನ್ ವಿದ್ಯತೇತದಾ ॥**

ಅವರಲ್ಲಿ ಒಬ್ಬನೂ ನಾಸ್ತಿಕನಲ್ಲ, ಒಬ್ಬನೂ ಸುಳ್ಳು ಹೇಳುವವನಲ್ಲ, ಮಹಾನ್ ವಿದ್ವಾಂಸರಲ್ಲದವರು ಯಾರೂ ಇಲ್ಲ, ಅಸೂಯೆ ಉಳ್ಳವರು ಯಾರೂ ಅಲ್ಲಿರಲಿಲ್ಲ, ಯಾರೂ ದುರ್ಬಲರಲ್ಲ. ಯಾರೂ ಮೂಢರಲ್ಲ ಮತ್ತು ಎಲ್ಲರೂ ಶ್ರೀಮಂತರೂ, ಸುಂದರರೂ ಆದ ಸ್ತ್ರೀ ಪುರುಷರು.

ಈ ಎಲ್ಲ ಜನರೂ ಆರ್ಯರೇ ಆಗಿದ್ದರು. ಇಂಥವರನ್ನೇ ಜಗತ್ತಿನ ಎಲ್ಲೆಡೆ ಕಾಣುವ ಹಂಬಲ ನಮ್ಮ ಪೂರ್ವಜರದಾಗಿತ್ತು. ಅದಕ್ಕಾಗೇ "ಜಗತ್ತನ್ನೇ ಆರ್ಯರನ್ನಾಗಿಸೋಣ" ಎಂಬ ಕರೆ ನೀಡಿದ್ದು. ರಾಮಾಯಣದ ಕಾವ್ಯ ರಚನೆಯಾಗಿ ಹತ್ತುಸಾವಿರ ವರ್ಷಗಳೇ ಉರುಳಿವೆ. ಈ ಕಾಲಖಂಡದಲ್ಲಿ ರಾಮಾಯಣದ ಆದರ್ಶಗಳು ಇಲ್ಲಿನ ಜನಮಾನಸದ ನರನಾಡಿಗಳಲ್ಲಿ ಹರಿದಿದೆ. ಅದೇ ರೀತಿ ನಮ್ಮ ಪೂರ್ವಜರು 'ಜಗತ್ತನ್ನು ಆರ್ಯಮಯಗೊಳಿಸಿ' ಎಂದು ಕೊಟ್ಟ ಕರೆಯನ್ನು ಈ ಭೂಮಿಯನ್ನಾಳಿದ ರಾಜರು, ಇಲ್ಲಿನ ವ್ಯಾಪಾರಿಗಳು, ಕಾರ್ಮಿಕರು ಸದಾ ನೆನಪಿನಲ್ಲಿಟ್ಟಿದ್ದರು. ಈ ಕರೆಯನ್ನು ಮನ್ನಿಸುವುದು ಅವರ ಕರ್ತವ್ಯವಾಯಿತು. ಇವರ ಪ್ರಯತ್ನದ ಫಲವಾಗಿಯೇ ರಾಮಾಯಣದ ಕಥೆ ಕೇವಲ ಭಾರತದ ಉದ್ದಗಲಕ್ಕಲ್ಲದೆ ಇಡೀ ವಿಶ್ವದೆಲ್ಲೆಡೆ ಸಂಚರಿಸಿತು. ಆಯಾ ದೇಶಗಳ ಜನರ ಭಾವಜಗತ್ತಿಗೆ ಪ್ರವೇಶಿಸಿ. ಅವರ ಕಲೆ, ಸಾಹಿತ್ಯ ಹಾಗೂ ಜೀವನ ಕ್ರಮವನ್ನು ಪ್ರಭಾವ ಗೊಳಿಸಿತು. ಇದಕ್ಕೆ ಸಾಕ್ಷಿಯಾಗಿ ಇಂದಿಗೂ ಹಲವು ದೇಶಗಳಲ್ಲಿ ವಿವಿಧ ರೂಪಗಳಲ್ಲಿ ರಾಮಾಯಣ ಕಥೆ ಜೀವಂತವಾಗಿದೆ.

ನಾವೀಗ ಮನಸ್ಸಿನಲ್ಲೇ ಧ್ಯಾನಿಸಿ ಪುಷ್ಪಕ ವಿಮಾನವನ್ನು ಕಲ್ಪಿಸಿ ಅದರಲ್ಲೇರಿ ಜಗತ್ತಿನ ಭ್ರಮಣ ಮಾಡೋಣ.

## ಚೈನಾದಲ್ಲಿ ರಾಮಾಯಣ

ಚೈನಾ ದೇಶಕ್ಕೆ ರಾಮಾಯಣವು ಪಯಣಿಸಿದ್ದು ಬೌದ್ಧಭಿಕ್ಷುಗಳ ಮೂಲಕ. ರಾಮನ ಜಾತಕಕಥೆಗಳು ಚೀನಾದಲ್ಲಿ ಪ್ರಸಿದ್ಧಿ ಪಡೆದಿವೆ. ರಾಮಾಯಣದ ವಿವಿಧ ಪ್ರಸಂಗಗಳು ಜಾತಕ ಕಥೆಗಳ ರೂಪದಲ್ಲಿ ಕ್ರಿಸ್ತಶಕ 251ರಲ್ಲೇ ಪ್ರಚಲಿತವಾಗಿದ್ದಿತು. ಕಾಂಗ್‌ಸೆಂನ್‌ಹುರ ಎಂಬ ಬರಹಗಾರ ಈ ಎಲ್ಲ ಕಥೆಗಳನ್ನು ಸಂಗ್ರಹಿಸಿ ಪುಸ್ತಕ ರೂಪಕ್ಕೆ ತಂದನು. ರಾಮನು ವನವಾಸಕ್ಕೆ ತೆರಳಿದ ನಂತರ ದಶರಥನ ದುರ್ವ್ಯವಸ್ಥೆಯನ್ನು

ಪುಟ 29 ಕ್ಕೆ ➤

➢ ಪುಟ 28 ರಿಂದ.....

ಚಿತ್ರಿಸುವ ಪುಸ್ತಕ ಕ್ರಿಶ 742 ರಲ್ಲೇ ಬರೆಯಲ್ಪಟ್ಟಿತು. ಈ ಪುಸ್ತಕ ಇಂದಿಗೂ ಚೈನಾದಲ್ಲಿ ಪ್ರಚಲಿತವಿದೆ. ಕ್ರಿ.ಶ 1600ರಲ್ಲಿ ಹಿಸ್–ಇಲ್–ಚಿ ಎಂಬ ಲೇಖಕ ಬರೆದ ಕಪಿ (Kapi) ಎಂಬ ಕಾದಂಬರಿಯಲ್ಲಿ ರಾಮಾಯಣದ ಕಥೆ, ಅದರಲ್ಲೂ ಪ್ರಮುಖವಾಗಿ ಹನುಮಂತನ ಪಾತ್ರವನ್ನು ವಿಶೇಷವಾಗಿ ವರ್ಣಿಸಲಾಗಿದೆ. 5ನೇ ಶತಮಾನದ ಚೈನೀ ಪಠ್ಯಪುಸ್ತಕಗಳಲ್ಲಿ ದಶರಥ, ರಾಮ ಮತ್ತು ಲಕ್ಷ್ಮಣ ಎಂಬ ಪಾತ್ರಗಳ ಪರಿಚಯವಿತ್ತು.

## ರಷ್ಯಾದಲ್ಲಿ ರಾಮಾಯಣ

ಕಾಲ್‌ಮಿಕಿಯಾ (KALMYKIA) ರಷ್ಯಾ ದೇಶದಲ್ಲಿರುವ ಒಂದು ಗಣರಾಜ್ಯ. ಇದರ ಜನಸಂಖ್ಯೆಯೆ ಸುಮಾರು ಮೂರು ಲಕ್ಷ. ಇಡೀ ಯುರೋಪಿನಲ್ಲಿ ಬೌದ್ಧಧರ್ಮವನ್ನು ಅನುಸರಿಸುವ ಬಹುಸಂಖ್ಯಾತರಿರುವ ಪ್ರದೇಶ ಇದೊಂದೇ. 1972ನೇ ಇಸವಿ ಡಿಸೆಂಬರ್ 15ರ ಡೆಕನ್ ಹೆರಾಲ್ಡ್ ಪತ್ರಿಕೆಯ ಮುಖಪುಟದಲ್ಲಿ ಒಂದು ಸುದ್ದಿ ಪ್ರಕಟವಾಗಿತ್ತು. ಅದರಂತೆ ಕಾಲ್‌ಮಿಕಿಯಾದ ರಾಜಧಾನಿ ಎಲಿಸ್ವಾದ ಪತ್ರಿಕೆಯೊಂದರಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಕಥೆಯೊಂದು ಪ್ರಕಟವಾಗಿತ್ತು. ಸುದ್ದಿಯು ಮುಂದುವರೆದು, ಕಾಲ್‌ಮಿಕಿಯಾದ ಜನರಲ್ಲಿ ರಾಮಾಯಣದ ಅನೇಕ ಪ್ರಸಂಗಗಳು ಜನಪ್ರಿಯವಾಗಿವೆ. ಇಷ್ಟೇ ಅಲ್ಲ ರಾಮಾಯಣದ ಅನೇಕ ಅವತರಣಿಕೆಗಳು ಕಾಲ್‌ಮಿಕಿಯಾದ ಲೈಬ್ರರಿಯಲ್ಲಿ ಸಂಗ್ರಹಿಸಿ ಇಡಲಾಗಿದೆ. ಈ ಜನಾಂಗದಲ್ಲಿ ಅನೇಕ ಶತಮಾನಗಳಿಂದ ರಾಮಾಯಣದ ಕಥೆ ಅತ್ಯಂತ ಜನಪ್ರಿಯವಾಗಿದೆ. ಲೆನಿನ್‌ಗ್ರಾಡ್‌ನಲ್ಲಿ ರಾಮಾಯಣದ ಕಥೆಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಸಂಗ್ರಹಿಸಿಡಲಾಗಿರುವುದನ್ನು ಇಂದಿಗೂ ಕಾಣಬಹುದು. ಈ ಎಲ್ಲ ಗ್ರಂಥಗಳು ರಷ್ಯನ್ ಹಾಗೂ ಮಂಗೋಲಿಯನ್ ಭಾಷೆಯಲ್ಲಿರುವುದು ವಿಶೇಷ. ರಷ್ಯಾದ ವೋಲ್ಗಾ ಪ್ರದೇಶದಲ್ಲಿನ ಒಂದು ಪುರಾತನ ಗ್ರಾಮದಲ್ಲಿ ಭೂಮಿಯನ್ನು ಅಗೆಯುತ್ತಿದ್ದಾಗ ವಿಷ್ಣುವಿನ ಒಂದು ಪ್ರಾಚೀನ ವಿಗ್ರಹ ಸಿಕ್ಕಿದೆ ಎಂಬ ಸುದ್ದಿಯನ್ನು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಪ್ರಕಟಿಸಿತ್ತು. ಸ್ಟರಯಮೈನಾ ಹಳ್ಳಿಯಲ್ಲಿ ದೊರೆತ ವಿಗ್ರಹವು 7 ಮತ್ತು 10ನೇ ಶತಮಾನದ ನಡುವಿನದು. ರಷ್ಯಾ ದೇಶದ ಅನೇಕ ಸ್ಥಳಗಳು ಋಗ್ವೇದದಲ್ಲಿ ಹೇಳಲ್ಪಟ್ಟಿದೆ ಎಂಬುದು ವೇದ ತಜ್ಞರ ಅಭಿಪ್ರಾಯ. ನಿಮಗೆ ಇದನ್ನು ತಿಳಿದರೆ ಆಶ್ಚರ್ಯವಾಗಬಹುದು. ರಷ್ಯಾದ ಕಾಬರೋವಸ್ಕ (Khabarovsk) ಪ್ರದೇಶದಲ್ಲಿ ಸೀತಾನದಿ ಎಂಬ ನದಿ ಇದೆ. ಇದರ ಮೂಲ ಇಂಲಾಜೋ ಜಿಲ್ಲೆಯ ಸೀತಾ ಎಂಬ ಹಳ್ಳಿಯ ಬಳಿಯಿರುವ ಚೌಗುಪ್ರದೇಶ. ಇದೇ ರೀತಿ 'ರಾಮ' ಎಂಬ ಹೆಸರಿನ ಅತಿಸುಂದರ ಸರೋವರವೂ ಅಲ್ಲಿದೆ. ರಾಮಾಯಣದ ಪ್ರಸಂಗಗಳನ್ನು ಬ್ಯಾಲೆ ರೂಪದಲ್ಲಿ ರಷ್ಯಾದ ಕಲಾವಿದರು ಪ್ರಸ್ತುತ ಪಡಿಸುವುದನ್ನು ಇಂದಿಗೂ ಕಾಣಬಹುದಾಗಿದೆ.



ರಾಮನ ಪಾತ್ರದಲ್ಲಿ
ಜಿ. ಎಂ. ಫ್ರೆಂಚಿನ್‌ಕೋ




ವಿವಿಧೆಡೆಯ ಸ್ಟ್ಯಾಂಪ್‌ಗಳು

## ಪ್ರಾಚೀನ ದಕ್ಷಿಣ ಅಮೆರಿಕೆಯಲ್ಲಿ ಶ್ರೀರಾಮ

ರಷ್ಯಾ, ಚೀನಾ ನಂತರ ನಾವೀಗ ದಕ್ಷಿಣ ಅಮೆರಿಕೆಯತ್ತ ಸಾಗೋಣ. "ಏಷ್ಯಾಟಿಕ್ ರಿಸರ್ಚಸ್ ವಾಲ್ಯೂಂ" ಒಂದರಲ್ಲಿ ವರ್ಣಿತವಾದಂತೆ, ಪ್ರಪಂಚದ ವೇದಕಾಲೀನ ಚರಿತ್ರೆಯನ್ನು ಆಳವಾಗಿ ಅಧ್ಯಯನ ಮಾಡಿದ ಖ್ಯಾತ ಸಂಶೋಧಕ ಹಾಗೂ ಚರಿತ್ರಕಾರ ಸರ್ ವಿಲಿಯಂ ಜೋನ್ಸ್ 200 ವರ್ಷಗಳ ಹಿಂದೆ (ಅದೂ ನಮ್ಮನ್ನಾಳುತ್ತಿದ್ದ ಬ್ರಿಟಿಷ್ ಚರಿತ್ರಕಾರರು ತಿರುಚಿ ಬರೆದ ಚರಿತ್ರೆಯ ನಡುವೆ) ದಾಖಲಿಸಿದ ಮಾಹಿತಿಯಂತೆ "It is very remarkable that Peruvians, whos Incas boasted of the same descent, styled their greatest festival Rama- Sitva; whence we may take it that south America was peopled by the same race who imported it to the farthest of posts of Asia the rites and the fabulous histo of Ram and Sita".

ಈ ರೀತಿ ಯಾರು ಪ್ರಾಮಾಣಿಕವಾಗಿ ವೇದ ಮತ್ತು ನಂತರ ಕಾಲದ ಜಗತ್ತಿನ ಇತಿಹಾಸವನ್ನು ಸಂಶೋಧಿಸಿ ಅಧ್ಯಯನ ಮಾಡಿದರೋ ಅವರುಗಳು ಸೀತಾ–ರಾಮರು ದಕ್ಷಿಣ ಅಮೆರಿಕೆಯ ಪ್ರಾಚೀನ ಜನಾಂಗಕ್ಕೆ ತಿಳಿದಿದ್ದರೆಂಬುದನ್ನು ನಿರ್ವಿವಾದವಾಗಿ ಹೇಳಿದ್ದಾರೆ.

ಕೊಲಂಬಸ್‌ನಿಗಿಂತ ಪೂರ್ವದ ಅಮೆರಿಕೆಯಲ್ಲಿ 'ಇಂಕಾ ಸಾಮ್ರಾಜ್ಯ'ವೇ ಅತ್ಯಂತ ದೊಡ್ಡ ಸಾಮ್ರಾಜ್ಯವಾಗಿತ್ತು. ಪೆರುದೇಶದಲ್ಲಿ ಸಂಕ್ರಾಂತಿಯಂದು, ಸೂರ್ಯದೇಗುಲದಲ್ಲಿ ಪೂಜೆ ಸಲ್ಲಿಸುತ್ತಿದ್ದ ಪದ್ಧತಿ ವ್ಯಾಪಕವಾಗಿತ್ತು. ಸೂರ್ಯನಿಗೆ 'ಇನ' ಎಂಬುದೂ ಒಂದು ಹೆಸರು. ಇನಕುಲ ಎಂದರೆ ಸೂರ್ಯವಂಶ. ಶ್ರೀರಾಮನನ್ನು ತ್ಯಾಗರಾಜರು 'ಇನಕುಲೋತ್ತಮ' ಎಂದು ಕರೆದಿದ್ದಾರೆ. ಪೆರುದೇಶದ ಪುರಾತನ ಜನಾಂಗವನ್ನು 'ಇನ್‌ಕಾಸ್' ಎಂದು ಕರೆಯುತ್ತಿದ್ದರು. ಈ ಹೆಸರು 'ಇನ' ಶಬ್ದದಿಂದಲೇ ಉತ್ಪತ್ತಿಯಾಗಿರಬೇಕು. ಇನ್‌ಕಾಸ್ ಎಂದರೆ ಸೂರ್ಯವಂಶದವರು ಎಂದೂ ಆಗಿರಬಹುದು. ಹಿಂದೂಗಳಂತೆಯೇ ಈ ಜನರೂ ಪುನರ್‌ಜನ್ಮದಲ್ಲಿ ನಂಬಿಕೆಯುಳ್ಳವರಾಗಿದ್ದರು ಮತ್ತು ವೇದ ಕಾಲದ ಜನರಂತೆ ಸೂರ್ಯೋಪಾಸಕರೂ ಆಗಿದ್ದರು. ಇನ್‌ಕಾಸ್ ಜನರ ಭಾಷೆಯಾದ "ಕ್ವಿಚುವ"ದಲ್ಲಿ ಅನೇಕ ಸಂಸ್ಕೃತಪದಗಳಿವೆ. ಸ್ಪಾನಿಷ್ ಸಾಹಿತಿ ವಿನ್‌ಸೆಂಟೀಲೋಪೇಜ್ 1872ರಲ್ಲಿ ಪ್ರಕಟಿಸಿದ "The Aryan Races in peru" ಎಂಬ ಪುಸ್ತಕದಲ್ಲಿ "Every page of preruvian poetry bears the imprint of Ramayana and Mahabharatha" ಎಂದು ಬರೆದಿದ್ದಾನೆ.

## ದಕ್ಷಿಣ ಅಮೆರಿಕೆಯ ಮಾಯನ್ ನಾಗರೀಕತೆಯೊಂದಿಗಿನ ಸಂಬಂಧ

ಮಾಯನ್ ಸಾಮ್ರಾಜ್ಯದ ಕಾಲ ಕ್ರಿ.ಪೂ 2600. ಇದು ಇಂದಿನ

ಪುಟ 30 ಕ್ಕೆ ➢

➢ ಪುಟ 29 ರಿಂದ.....

ಮೆಕ್ಸಿಕೋದ ದಕ್ಷಿಣ ಭಾಗ, ಗ್ವಾಟೆಮೂಲ, ಹಾಂಡುರಸ್‌ದ ಪಶ್ಚಿಮಭಾಗ, ಬೆಲಿಜ್ ಹಾಗೂ ಎಲ್‌ಸಾಲ್ವಡೋರ್ ಪ್ರದೇಶಗಳಲ್ಲಿ ಹಬ್ಬಿತ್ತು. ಮಾಯನ್ ನಾಗರೀಕತೆಯೂ ಜಗತ್ತಿನ ಪ್ರಾಚೀನ ನಾಗರೀಕತೆಗಳಲ್ಲಿ ಒಂದು. ಈ ನಾಗರೀಕತೆಯಲ್ಲಿ Monkey God ಅಂದರೆ ನಮ್ಮ ಹನುಮಂತನನ್ನು ವಿಶೇಷವಾಗಿ ಪೂಜಿಸಲ್ಪಡುತ್ತಿತ್ತು. Monkey God ಅನ್ನು ವಾಯುದೇವರು ಎಂದು ಕರೆಯುತ್ತಿದ್ದರು. ನಮ್ಮಲ್ಲಿ ಹನುಮಂತನನ್ನು ವಾಯುಪುತ್ರ ಎಂದು ಕರೆಯುವುದು ಪ್ರತೀತಿ. ವೇದಗಳಲ್ಲಿ ಮಾಯನ್ ವಾಸ್ತುಶಿಲ್ಪಿಯ ಕಥೆಯೊಂದು ಬರುತ್ತದೆ. ರಾಮಾಯಣದಲ್ಲಿ ಹನುಮಂತನು ಲಂಕೆಯನ್ನು ಸುಟ್ಟು ನಂತರ ಅಲ್ಲಿದ್ದ ಅನೇಕ ಸೌಧಗಳು ಭಸ್ಮವಾಯಿತು. ಆಗ ರಾವಣನು ಮಯನೆಂಬ ವಾಸ್ತುಶಿಲ್ಪಿಯನ್ನು ಕರೆಸಿ ನೂತನ ಅರಮನೆಗಳನ್ನು ನಿರ್ಮಿಸಿದನು ಎಂಬ ಪ್ರಸಂಗವೂ ಇದೆ. ಶೂನ್ಯ ಅಂದರೆ ಸೊನ್ನೆಯನ್ನು ವೇದಕಾಲೀನ ಗಣಿತಜ್ಞರು ಕಂಡುಹಿಡಿದರು ಎಂಬುದನ್ನು ಜಗತ್ತೆಲ್ಲಾ ಒಪ್ಪಿದೆ. ಮಾಯನ್ನರು ತಮ್ಮ ಪೂರ್ವಜರು ಶೂನ್ಯವನ್ನು ಕಂಡುಹಿಡಿದರು ಎಂದು ನಂಬುತ್ತಾರೆ. ಅಂದರೆ ಭಾರತೀಯರು ಅಲ್ಲಿಗೆ ಹೋಗಿ ತಮ್ಮ ಸಂಸ್ಕೃತಿಯನ್ನು ಹರಡಿದ್ದರು ಎಂಬ ಮಾತಲ್ಲಿ ಸಂದೇಹವೇ ಇಲ್ಲ!

1300 ವರ್ಷಗಳ ಹಿಂದೆ ಮೆಕ್ಕೆ ಜೋಳವು ಭಾರತ ಮತ್ತು ಮೆಕ್ಸಿಕೋ ದೇಶಗಳನ್ನು ಬಿಟ್ಟರೆ ಜಗತ್ತಿನ ಯಾವ ಪ್ರದೇಶದಲ್ಲೂ ಬೆಳೆಯುತ್ತಿರಲಿಲ್ಲ. ಹಾಗೆಯೇ ಆನೆಗಳು ಅಮೆರಿಕೆಯ ಭೂಭಾಗದಲ್ಲಿ ಇರಲೇ ಇಲ್ಲ. ಆದರೆ ಮಾಯನ್ನರ ದೇಗುಲಗಳಲ್ಲಿ ಆನೆಗಳ ಚಿತ್ರವನ್ನು ಕೊರೆದಿದೆ. ಇದೂ ಕೂಡ ಭಾರತದಿಂದ ಅಲ್ಲಿಗೆ ನಮ್ಮ ಪೂರ್ವಜರು ತಮ್ಮ ಕಲೆ, ಸಾಹಿತ್ಯವನ್ನು ತೆಗೆದುಕೊಂಡು ಹೋಗಿರಬಹುದೆಂಬುದಕ್ಕೆ ಬಲವಾದ ಸಾಕ್ಷಿ.

ಲ್ಯಾಟಿನ್ ಅಮೆರಿಕೆಯ ಗ್ವಾಟೆಮೂಲದಲ್ಲಿ ಶ್ರೀರಾಮನ ಆಸ್ಥಾನವನ್ನು ಬಂಡೆಯ ಮೇಲೆ ಕೆತ್ತಿರುವುದನ್ನು ಕಾಣಬಹುದು. ಶ್ರೀರಾಮನ ಆಚೀಚೆ ಲವ-ಕುಶರು ಹಾಗೂ ಎಡಕ್ಕೆ ಭರತ, ಲಕ್ಷ್ಮಣ, ಶತ್ರುಘ್ನರ ಚಿತ್ರವನ್ನೂ ಬಿಡಿಸಿದೆ.



## ಮಧ್ಯ ಪ್ರಾಚ್ಯ ದೇಶಗಳಲ್ಲಿ (ಮಿಡಲ್ ಈಸ್ಟ್) ಶ್ರೀರಾಮ

ಇರಾಕ್‌ನ ಕುರ್ದಿಸ್ಥಾನ್‌ನಲ್ಲಿ 'ಸಿಲೆಮನಿ' ಒಂದು ರಾಜ್ಯ. ಇಲ್ಲಿನ ಪ್ರಾಚೀನ ಬೆಟ್ಟವೊಂದರ ಬಂಡೆಯ ಮೇಲೆ ಶ್ರೀರಾಮ ಮತ್ತು ಹನುಮಂತನ ಚಿತ್ರವನ್ನು ಕೊರೆದಿದ್ದಾರೆ. ಇದಲ್ಲದೆ 'ರಾನ್ಯ' ನಗರ ಪ್ರದೇಶದಲ್ಲಿ 'ಗಿರ್ಡೆಡೀಮಾ' ಎಂಬ ಬೆಟ್ಟಗಳ ಸಾಲಿದೆ. 1957ರಿಂದ ಎರಡು ವರ್ಷಗಳ ಕಾಲ ಡೆನ್ಮಾರ್ಕ್ ಹಾಗೂ ಇರಾಕ್‌ನ ತಂಡ ಜಂಟಿಯಾಗಿ ಸಂಶೋಧನೆ ನಡೆಸಿ ಬೆಟ್ಟದ ಮೇಲಿನ ದೇವಸ್ಥಾನವಲ್ಲದೆ 247ಕ್ಕೂ ಅಧಿಕ ಪ್ರಾಚೀನ ಬಂಡೆಗಳ ಮೇಲಿನ ಕೆತ್ತನೆಗಳನ್ನು ಪತ್ತೆ ಹಚ್ಚಿದ್ದಾರೆ. ಈ ಚಿತ್ರವನ್ನು ಕೆತ್ತಬೇಕಾದರೆ ಭಾರತದಿಂದ ರಾಮಾಯಣ ಇಂದಿನ ಇರಾಕ್‌ಗೆ ಪ್ರಾಚೀನ ಕಾಲದಲ್ಲೇ ಬಂದಿರಬೇಕು. ಆಗ ಇಲ್ಲಿನ ಜನ ಅದರ ಆಳವಾದ ಅಧ್ಯಯನ ಮಾಡಿರಬೇಕು. ರಾಮಾಯಣದ ಕಥೆ ಜನಸಾಮಾನ್ಯರಿಂದ ಶಿಲ್ಪಿಗಳು ಕಲಾಕಾರರವರಗೆ ತಲುಪಿರಲೇಬೇಕು. ಆಗಲೇ ಶಿಲ್ಪಿಗಳ ಸ್ವಯಂಸ್ಫೂರ್ತಿಯಿಂದ ಅಥವಾ ರಾಜಾಶ್ರಯದಿಂದ ಇಂಥ ಚಿತ್ರಗಳನ್ನು ಕೆತ್ತಿರಲು ಸಾಧ್ಯ. ಸಾಹಿತ್ಯ ಹಾಗೂ ಚಿತ್ರಕಲೆ ಕಾಲನ ಪ್ರವಾಹದಲ್ಲಿ ನಾಶವಾಗಿರಲಿಕ್ಕೂ ಸಾಕು.

ಸುಗ್ರೀವನು, ಸೀತಾನ್ವೇಷಣೆಗಾಗಿ ನಾಲ್ಕು ದಿಕ್ಕುಗಳಿಗೂ ವಾನರರನ್ನು ಕಳುಹಿಸಿದ್ದು ನಮಗೆಲ್ಲಾ ತಿಳಿದೇ ಇದೆ. ಪಶ್ಚಿಮ ದಿಕ್ಕಿಗೆ ತೆರಳಲು ತನ್ನ ಹೆಂಡತಿ ತಾರಳ ತಂದೆ ಸುಷೇಣನ ನೇತೃತ್ವದಲ್ಲಿ ಕಳುಹಿಸಿದ ವಾನರ ಯೋಧರಿಗೆ ಆ ದಿಕ್ಕಿನಲ್ಲಿ ಯಾವ ಯಾವ ಸ್ಥಳಗಳಲ್ಲಿ ಹುಡುಕಬೇಕೆಂದು ತಿಳಿಸುವಾಗ ಅನೇಕ ಪ್ರದೇಶಗಳು ಅಲ್ಲಿನ ವೃಕ್ಷಸಂಪತ್ತು, ನದಿಗಳು ಹಾಗೂ ಸಮುದ್ರ ತೀರಗಳನ್ನು ವರ್ಣಿಸುತ್ತಾನೆ.

ಸುಗ್ರೀವನ ವರ್ಣನೆ ವಾಲ್ಮೀಕಿ ರಾಮಾಯಣದಲ್ಲಿನ ಕಿಷ್ಕಿಂದಾಕಾಂಡದಲ್ಲಿ ಈ ಕೆಳಗಿನಂತಿದೆ.

**ತ್ರಿಶಿರಾಃ ಕಾಂಚನಃ ಕೇತುಸ್ತಾಲಸ್ತಸ್ಯ ಮಹಾತ್ಮನಃ ।**
**ಸ್ಥಾಪಿತಃ ಪರ್ವತಸ್ಯಾಗ್ರೇ ವಿರಾಜತಿ ಸವೇದಿಕಃ ॥**
**ಪೂರ್ವಸ್ಯಾಂ ದಿಶಿ ನಿರ್ಮಾಣಂ ಕೃತಂತತ್ ತ್ರಿದಶೇಶ್ವರೈ ।**
**ತತಃ ಪರಂ ಹೇಮಮಯಂ ಶ್ರೀಮಾನುದಯ ಪರ್ವತಃ ॥**

ಸುಗ್ರೀವನು, ಸುಶೇಷಣನಿಗೆ ಪೂರ್ವದಿಕ್ಕಿನಿಂದ ಹೊರಟರೆ ಅದರ ಅಂತ್ಯ ಭಾಗದಲ್ಲಿ ವಿಶಾಲವಾದ ಸುವರ್ಣ ಪರ್ವತವಿದೆ. ಅದರ ನಂತರ ಪಶ್ಚಿಮ ದಿಕ್ಕಿನ ಅಂತ್ಯವನ್ನು ಕಾಣಬಹುದು. ಆ ಪರ್ವತಾ ಭಾಗದಲ್ಲಿ ಮೂರು ತಲೆಯುಳ್ಳ ತ್ರಿಶೂಲವು ಸ್ಥಾಪಿತವಾಗಿದೆ. ಅದು ತಾಳೇಗಿಡವನ್ನು ಹೋಲುತ್ತದೆ. ಅಲ್ಲಿಂದ ಮುಂದೆ ಹೇಮಮಯವಾದ ಉದಯಶೈಲವು ಗೋಚರಿಸುತ್ತದೆ.

ಈ ತ್ರಿಶೂಲಾಕೃತಿಯನ್ನು ಪ್ರಾಚೀನ ಪೆರುವಿಯನ್ನರು ಕ್ಯಾಂಡವೆಬ್ರಾ ಅಥವಾ ಪೆರುವಿನ ತ್ರಿಶೂಲ (TRIDENT) ಎಂದು ಕರೆಯುತ್ತಿದ್ದರು. ತ್ರಿಶೂಲಾಕಾರವು ಪ್ರಾಚೀನ ಪೆರುವಿಯನ್ನರಂತೆ, ರಾಮಾಯಣ ಕಾಲದ ವೇದ ಪಂಡಿತರಿಗೂ ತಿಳಿದಿತ್ತು ಎನ್ನುವುದಕ್ಕೆ ಸುಗ್ರೀವನ ಮಾತೇ ಸಾಕ್ಷಿ.



ಆಕಾಶದಿಂದ ನೋಡಿದರೆ ಆಂಡೀಸ್‌ನ ಮೇಲೆ ಕೆತ್ತಿರುವ ತ್ರಿಶೂಲವು ನಿಜವಾಗಿ ಹೊಳೆಯುವುದನ್ನು ಕಾಣಬಹುದು. ರಾಮಾಯಾಣದಲ್ಲಿ ಇಂದಿನ ಆಂಡೀಸ್ ಪರ್ವತ ಶ್ರೇಣಿಯನ್ನು ಉದಯ ಪರ್ವತಶ್ರೇಣಿ ಅಥವಾ ಸೂರ್ಯೋದಯದ ಪರ್ವತ ಎಂದು ಬಣ್ಣಿಸಿದೆ. ಪೆರುವಿನ ತ್ರಿಶೂಲವನ್ನು ಯಥಾವತ್ ವರ್ಣಿಸಿರುವುದನ್ನು ನೋಡಿದರೆ

ಪುಟ 31 ಕ್ಕೆ ➢

➢ ಪುಟ 30 ರಿಂದ.....

ರಾಮಾಯಣ ಕಾಲದ ಜನರು ಇದನ್ನು ಬಹಳ ಎತ್ತರದಿಂದಲೂ ನೋಡಿರಬಹುದು ಎಂದು ಅರ್ಥಮಾಡಿಕೊಳ್ಳಬಹುದು.

ಮಧ್ಯಪ್ರಾಚ್ಯದ ಇತರ ದೇಶಗಳೆಂದರೆ ಇರಾಕ್, ಸಿರಿಯಾ ಹಾಗೂ ಟರ್ಕಿ ಪ್ರದೇಶಗಳು. ಈಜಿಪ್ಟ್, ಆಫ್ರಿಕಾ ಖಂಡಕ್ಕೂ ಸೇರುತ್ತದೆ ಮತ್ತು ಮಧ್ಯ ಪ್ರಾಚ್ಯದಲ್ಲೂ ಗುರುತಿಸಿಕೊಂಡಿದೆ.

## ಈಜಿಪ್ಟ್‌ನಲ್ಲಿ ರಾಮಾಯಣದ ಪ್ರಭಾವ

Egyptian Myth and Legend ಎನ್ನುವ ಪುಸ್ತಕದ 368ನೇ ಪುಟದಲ್ಲಿ ಮಾನವನ ಪುತ್ಥಳಿ ಇರುವ ಚಿತ್ರವಿದೆ. ಆಶ್ಚರ್ಯವೆಂದರೆ ಈ ಪುತ್ಥಳಿಯ ಹಣೆಯಲ್ಲಿ ಭಾರತದ ವೈಷ್ಣವ ಸಂಪ್ರದಾಯದವರಂತೆ ತಿಲಕ ಹಾಗೂ ಶ್ರೀಗಂಧ ಮುದ್ರೆ ಇದೆ. ಇದೇ ರೀತಿ "Long missing Link" ಎನ್ನುವ ಪುಸ್ತಕದಲ್ಲಿ ಈಜಿಪ್ಟ್ ದೇಶದ ಮೆಮ್‌ಫಿಸ್ ಪ್ರಾಂತದ ರಾಜನ ಚಿತ್ರವಿದೆ. ಈ ರಾಜನೂ ತನ್ನ ಹಣೆಯಲ್ಲಿ ಶ್ರೀವೈಷ್ಣವರಂತೆ ತಿಲಕವನ್ನು ಧರಿಸಿದ್ದಾರೆ.



ಪ್ರಾಚೀನ ಈಜಿಪ್ಟ್ ನಾಗರೀಕತೆಯಲ್ಲಿ ಮೂರು ಜನ ದೇವತೆ ಗಳನ್ನು ಪೂಜಿಸುವ ಪದ್ಧತಿ ಇದ್ದಿತು. 'ಅಮುನ್' ಅಮುನ್‌ನ ಮಡದಿ ಮಾಟ್ ಮತ್ತು ಕೋನ್‌ಸು. ಅಮುನ್ ಸೂರ್ಯ ದೇವತೆ ಯೊಂದಿಗೆ ಸಂಬಂಧವನ್ನು ಹೊಂದಿದ್ದನು. ಅವರ ಭಾಷೆಯಲ್ಲಿ 'ರಾ' ಎಂದರೆ ಸೂರ್ಯ. ಹೀಗಾಗಿ ಅಮುನ್‌ನನ್ನು ಅಮುನ್‌ರಾ ಎನ್ನುತ್ತಿದ್ದರು.



ಅಮುನ್‌ರಾ ಶ್ಯಾಮಲ ಕಾಯದ ವ್ಯಕ್ತಿ, ತಲೆಯಲ್ಲಿ ಗರುಡ ಚಿಹ್ನೆಯನ್ನು ಧರಿಸುತ್ತಿದ್ದ. ಒಂದು ತರ್ಕದ ಪ್ರಕಾರ ಈಜಿಪ್ಟ್‌ನ ದೇಶಗಳ ದೊರೆಗಳು ಸೂರ್ಯ ಕುಲಕ್ಕೆ ಸೇರಿದವರು. ಅಲ್ಲಿನ ರಾಜರನ್ನು 'ರಾಮ್‌ಸೆ' ಒಂದು, ಎರಡು ಎಂದು ಕರೆಯುತ್ತಿದ್ದರು.

ಈಜಿಪ್ಟ್‌ನ ಪ್ರಾಚೀನ ವಿಶ್ವಸೃಷ್ಟಿ ಶಾಸ್ತ್ರದಲ್ಲಿ (Cosmology) ಕೋನ್‌ಸು (Khonsu) ನನ್ನು ಜಗತ್ತಿನ ಸೃಷ್ಟಿಗಾಗಿ ವೈಶ್ವಿಕ ಮೊಟ್ಟೆಯನ್ನು ಫಲವತ್ತಾಗಿ ಮಾಡಿದ ಆದಿಶೇಷನೆಂಬ ವರ್ಣನೆ ಇದೆ. ನಮ್ಮಲ್ಲಿ ಲಕ್ಷ್ಮಣನನ್ನು ಆದಿಶೇಷನ ಅವತಾರವೆಂದು ವರ್ಣಿಸಿದ್ದಾರೆ. ಖೋನ್‌ಸುವೇ ನಮ್ಮ ಲಕ್ಷ್ಮಣನಾಗಿರಬಹುದೇ? ಇದು ಊಹೆಗೆ ಬಿಟ್ಟಿದ್ದು.

ಇಂದಿನ ಇರಾಕ್, ಸಿರಿಯಾ ಹಾಗೂ ಟರ್ಕಿ ಪ್ರದೇಶಗಳು ಸೇರಿದ ಭೂಭಾಗವನ್ನು ಸಹಸ್ರಾರು ವರ್ಷಗಳ ಹಿಂದೆ 'ಹೈಟೀ' ಮತ್ತು 'ಮಿಟ್ಟಾನಿ' ಸಾಮ್ರಾಜ್ಯಗಳು ಆಳುತ್ತಿದ್ದವು. 3300 ವರ್ಷಗಳ ಹಿಂದೆ ಇಂದಿನ ಸಿರಿಯಾ ಹಾಗೂ ಇರಾಕ್ ಅನ್ನು ಆರ್ಯರಾಜರಾದ ಮಿಟ್ಟಾನಿಗಳು ಆಳುತ್ತಿದ್ದರು. ಆಗ ಇಡೀ ಪ್ರದೇಶವನ್ನು ಆಳುತ್ತಿದ್ದ ರಾಜನ ಹೆಸರು ದಶರಥ ಎಂದು ದಾಖಲಿಸಿದೆ. ಇತಿಹಾಸಕಾರರು ಹೇಳುವಂತೆ ಮಿಟ್ಟಾನಿ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಭಾರತ ಮೂಲದ ಆರ್ಯರಾಜರು. ಇವರು ವೈದಿಕ ದೇವತೆಗಳಾದ ಮಿತ್ರ ಅಂದರೆ ಸೂರ್ಯ, ವರುಣ ಮತ್ತು ಇಂದ್ರನನ್ನು ಪೂಜಿಸುತ್ತಿದ್ದರು. ಅವರಲ್ಲಿ ಒಬ್ಬಬ್ಬ ರಾಜರ ಹೆಸರುಗಳೂ ಹೀಗಿದೆ.



ಹಿಟ್ಟೈಟಿ ಸಾಮ್ರಾಜ್ಯದ ರಾಜಧಾನಿ ಹೆಟ್ಟುಷದಲ್ಲಿನ ಸಿಂಹದ್ವಾರ.

ಮೊತ್ತಮೊದಲ ಮಿಟ್ಟಾನಿ ರಾಜನ ಹೆಸರು **'ಸುತರ್ಣ'**, ಅವನ ಮಗ **'ಪರಾತರ್ಣ' ಪರಶುಕ್ಷತ್ರ, ಸಾಕ್ಷತ್ರ, ಎರಡನೆಯ ಪರಾತರ್ಣ, ಋತಧರ್ಮ, ಎರಡನೇ ಸುತರ್ಣ, ದಶರಥ ಮತ್ತು ಕೊನೆಯಲ್ಲಿ ಮತಿವಾಜ.** ಈ ಎಲ್ಲ ಹೆಸರುಗಳು ಮಧ್ಯ ಪ್ರಾಚ್ಯದ ವೈದಿಕ ಸಂಸ್ಕೃತಿಯನ್ನು, ರಾಮಾಯಣದ ಪ್ರಭಾವವನ್ನೂ ಖಚಿತಪಡಿಸುತ್ತವೆ.

ಈ ಸಿಂಹದ್ವಾರವು ಭಾರತ ಹಾಗೂ ಪ್ರಾಚೀನ ಹಟ್ಟೈಟಿ ಸಾಮ್ರಾಜ್ಯ (ಇಂದಿನ ಟರ್ಕಿ) ದ ವೈದಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ. ರಾಜಧಾನಿ ಹಟ್ಟುಷ ಇದ್ದದ್ದು 'ಮರ್ರ್ಯಶಾಂತ್ಯ' ಎಂಬ ನದೀತೀರದಲ್ಲಿ ಪ್ರಾಚೀನ ಭಾರತದ ಭಾಗವಾಗಿದ್ದ ನೇಪಾಲದಲ್ಲಿ ಇದೇ ಹೆಸರಿನ ನದಿ ಇಂದಿಗೂ ಹರಿಯುತ್ತಿದೆ. ಹಿಟ್ಟೈ ಸಾಮ್ರಾಜ್ಯದಲ್ಲಿ ಓರ್ವ ರಾಣಿಯ ಹೆಸರು 'ಗಸ್ಸುಲಿಯ' ಎಂದು. ಇದು ಶ್ರೀರಾಮನ ತಾಯಿ ಕೌಸಲ್ಯಳನ್ನು ನೆನಪಿಸುವುದಿಲ್ಲವೇ?

## ಯೂರೋಪಿನಲ್ಲಿ ರಾಮಾಯಣ ದರ್ಶನ

ಇಟಲಿ, ಯೂರೋಪಿನ ಒಂದು ಪ್ರಮುಖ ದೇಶ. ಕ್ರಿಸ್ತ ಸಮುದಾಯದ ಪ್ರಧಾನ ಧರ್ಮಗುರು ಇರುವ ರೋಂ ನಗರ ಇರುವುದು ಇಟಲಿಯಲ್ಲೇ. ಕ್ರಿಸ್ತಪೂರ್ವ 9 ಶತಮಾನಗಳಿಗೂ ಹಿಂದಿನಿಂದ ಟೈಬರ್ ಮತ್ತು ಆರ್ನೋ ನದಿಗಳ ನಡುವಣ ಭೂಪ್ರದೇಶವನ್ನು ಈಟ್ರೂರಿಯಾ (Etruria) ಎಂದು ಕರೆಯಲಾಗುತ್ತಿತ್ತು. ಇಲ್ಲಿ ವಾಸಿಸುತ್ತಿದ್ದ ಜನಾಂಗ ಈಟ್ರೂಸ್ಕಾನ್ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಒಂದೊಮ್ಮೆ ಇಡೀ ಇಟಲಿಯನ್ನು ಈಟ್ರುಸ್ಕಾನ್ ನಾಗರೀಕತೆ ಆವರಿಸಿತ್ತು. ರೋಂ ಅನ್ನು ನಿರ್ಮಿಸಿದವರು ಈ ಈಟ್ರುಸ್ಕಾನ್ ಜನಾಂಗವೇ. ಈಟ್ರುಸ್ಕಾನ್ ನಾಗರೀಕತೆ ಹರಡಿದ್ದ ಪ್ರದೇಶದಲ್ಲಿ ಭೂಸಂಶೋಧನೆ ನಡೆಸಿದಾಗ ಅನೇಕ ಸೌಧಗಳು ಸಿಕ್ಕಿವೆ. ಈ ಸೌಧಗಳ ಗೋಡೆಗಳ ಮೇಲೆ ಅನೇಕ ಬಗೆಯ ಚಿತ್ರಗಳನ್ನು ಬಿಡಿಸಲಾಗಿದೆ. ಬಹಳ ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಈ ಎಲ್ಲ

ಪುಟ 32 ಕ್ಕೆ ➢

➢ **ಪುಟ 31 ರಿಂದ.....**

ಭಿತ್ತಿಚಿತ್ರಗಳು ರಾಮಾಯಣದ ಕಥೆಗಳೆಂದು ತಿಳಿದುಬಂದಿದೆ. ಕೆಲವು ಚಿತ್ರಗಳಲ್ಲಂತೂ ಇಬ್ಬರು ವ್ಯಕ್ತಿಗಳು ಬಿಲ್ಲು ಬಾಣವನ್ನು ಹಿಡಿದು ನಿಂತಿರುವುದು ಮತ್ತು ಅವರೊಂದಿಗೆ ಬಾಲವನ್ನು ಹೊಂದಿರುವ ವ್ಯಕ್ತಿಯೂ ಇರುವುದು, ಇವರ ಹಿಂಬದಿಯಲ್ಲಿ ಸ್ತ್ರೀಯೋರ್ವಳು ನಿಂತಿರುವುದು ಕಂಡು ಬಂದಿದೆ. ಈ ಎಲ್ಲ ಕಲಾಕೃತಿಗಳು ಕ್ರಿ.ಪೂ 7 ನೇ ಶತಮಾನಕ್ಕೆ ಸೇರಿದ್ದೆಂದು ತಜ್ಞರ ಅಭಿಮತ. ಮತ್ತೊಂದು ಸಾಕ್ಷಿ ಎಂದರೆ ಇಟಲಿಯಲ್ಲಿನ ಒಂದು ನಗರದ ಹೆಸರು ರಾವೆನ್ನ– Ravenna. ಇದು ರಾಮಾಯಣದ 'ರಾವಣ'ನ ಹೆಸರು ಇರಬೇಕಲ್ಲವೇ?

ಇನ್ನು 'ರೋಂ' ಎಂಬ ಹೆಸರು ಹೇಗೆ ಬಂದಿರಬಹುದು? ರೋಂ ಅನ್ನು ನಿರ್ಮಿಸಿದ್ದು ಇದೇ 'ಈಟ್ರುಸ್ಯಾನ'ರೇ. ಈ ರೋಂ ಎಂಬ ಹೆಸರೂ 'ರಾಮ'ನಾಮದ ಅಪಭ್ರಂಶವೇ ಆಗಿರಬಹುದಲ್ಲವೇ? ಸಂಸ್ಕೃತದ NaSA (ಮೂಗು) ಇಂಗ್ಲೀಷಿನಲ್ಲಿ NoSE ಆದಂತೆ, ರಾಮನ ಹೆಸರಿನ 'A' ಅವರ ಭಾಷೆಯಲ್ಲಿ 'O' ಆಗಿರಬಹುದು. Rama-Rome(A) ಸಂಸ್ಕೃತವು ಇಂಡೋಯುರೋಪಿಯನ್ ಭಾಷೆಗಳ ಮೂಲ, ಹೀಗಾಗಿ Rome ಎಂದರೆ ರಾಮನನಗರ ಎಂದಾದೀತು. ರಾಮ ಮತ್ತು ರಾವಣ ಪರಸ್ಪರ ವೈರಿಗಳು ಎಂಬುದು ತಿಳಿದಿರುವ ವಿಷಯವೇ. ಅದಕ್ಕನುಗುಣವಾಗಿ ರೋಂ ಮತ್ತು ರವೆನ್ನಾ ಎರಡೂ ನಗರಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ – ಒಂದು ಪೂರ್ವ ಸಮುದ್ರ ತೀರ, ಮತ್ತೊಂದು ಪಶ್ಚಿಮ ಸಮುದ್ರ ತೀರದಲ್ಲಿವೆ.

ಮೇಲಿನ ಚಿತ್ರದಲ್ಲಿ ರಾಮನ ಕೈಲಿ ಬಿಲ್ಲುಬಾಣ, ನಡುವಣ ಸೀತೆಯ ಕೈಲಿ ಹೂವು ಹಾಗೂ ಲಕ್ಷ್ಮಣನ ಕೈಲಿ ಶೂಲ. ಈ ತೈಲ ಚಿತ್ರ ರಚನೆಯ ಕಾಲಕ್ಕೆ ರಾಮಾಯಣ ಮರೆತು, ಸ್ಥಾನೀಯ ಕಲೆಗಾರಿಕೆಯಂತೆ ಚಿತ್ರಿಸಿದಂತೆ ಕಾಣುತ್ತದೆ.

ಇನ್ನೂ ವಿಶೇಷವೆಂದರೆ ಭೂಸಂಶೋಧನೆಯಲ್ಲಿ ದೊರೆತ ಹೂದಾನಿಗಳ ಮೇಲೆ ಹಾಗೂ ಗೋಡೆಯಲ್ಲಿ ಬರೆದ ಭಿತ್ತಿ ಚಿತ್ರಗಳಲ್ಲಿ ರಾಮಾಯಣದ ಪ್ರಸಂಗಗಳಾದ 1) ಲವಕುಶರು, ಶ್ರೀರಾಮನ ಅಶ್ವಮೇಧ ಕುದುರೆಯನ್ನು ಹಿಡಿದಿರುವುದು 2) ವಾಲಿಯ ಸುಗ್ರೀವನ ಮಡದಿ



ಇದು ಇಟಲಿಯ ಬೋಲೋಗ್ನ Bologna ಮ್ಯೂಸಿಯಂನಲ್ಲಿರುವ ಕಲಾಕೃತಿ.

ತಾರಳನ್ನು ಹೊತ್ತೊಯ್ದುದು ಮುಂತಾದುವುಗಳನ್ನು ಚಿತ್ರಿಸಿರುವುದು ಕಂಡು ಬಂದಿದೆ.

ವ್ಯಾಟಿಕನ್‌ನಲ್ಲಿ ಶಿವನ ದೇವಸ್ಥಾನವಿತ್ತೆಂದೂ ಅದು ಯುರೋಪಿಗೆ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕೇಂದ್ರವಾಗಿತ್ತೆಂದೂ, ಈಗ ಆ ಶಿವಲಿಂಗವನ್ನು ರೋಂ ನಗರದ ಈಟ್ರುಸ್ಯಾನ್ ಮ್ಯೂಸಿಯಂನಲ್ಲಿ ಇಡಲಾಗಿದೆಯೆಂದೂ ವರದಿಗಳಿವೆ.




**ಶಿವದೇಗುಲದಲ್ಲಿ ಶಿವಲಿಂಗ**

ರಾಮಾಯಣದ ಪ್ರಭೆ ಭಾರತದ ದಕ್ಷಿಣ ಮತ್ತು ಪೂರ್ವ ಭಾಗದ ಅನೇಕ ದೇಶಗಳಲ್ಲಿ ಬೆಳಗಿತ್ತು. ಇದನ್ನು ಜೂನ್ ಸಂಚಿಕೆಯಲ್ಲಿ ಓದಿ ತಿಳಿಯೋಣ.

**(ಮುಂದಿನ ಸಂಚಿಕೆಗೆ...**

➢ **ಪುಟ 27 ರಿಂದ.....**

ಪರಿಚಯವೂ ಇರಲಿಲ್ಲ. ಈಗ ತಾಯಿಯ ಬಳಿ ಸಾಗುತ್ತಾರೆ. ಎಲ್ಲವೂ ಮಂಗಳದಲ್ಲಿ ಮುಕ್ತಾಯವಾಗುತ್ತದೆ.

ಗ್ರೀಕರಂತೆ, ಭಾರತೀಯ ಪರಂಪರೆಯಲ್ಲಿ ದುರಂತನಾಟಕಗಳಲ್ಲಿ ಸಕಲಕಾರ್ಯವೂ ಮಂಗಳಕರವಾಗಿ ಮುಗಿಯಬೇಕೆಂಬುದು ನಮ್ಮ ನಂಬಿಕೆ ಹಾಗೂ ಆದರ್ಶ.

ಈ ರೀತಿ ಭವಭೂತಿ ಮಹಾಕವಿ ಉತ್ತರ ರಾಮಚರಿತದಲ್ಲಿ ಕರುಣಾರಸದ ಪ್ರವಾಹವನ್ನೇ ಹರಿಸಿದ್ದಾನೆ. "ರಾಮಸ್ಯ ಕರುಣೋರಸಃ" ಎನ್ನುವ ಕವಿ ಶ್ರೀರಾಮನ ಕರುಣಾಭರಿತ ಮೃದುಹೃದಯದ ರಸಾರ್ದ್ರತೆ ಅಮರವಾದುದೆಂದು ನಿರೂಪಿಸುತ್ತಾನೆ.

ಭಾಸ, ಕಾಳಿದಾಸ, ಭವಭೂತಿಗಳು ರಾಮಯಣವನ್ನು ದೃಶ್ಯಮಾಧ್ಯಮವನ್ನಾಗಿಸಿ ಪ್ರೇಕ್ಷಕರ ಪಂಚೇಂದ್ರಿಯಗಳಿಗೂ ರಾಮರಸವನ್ನು ಆನಂದಿಸುವಂತೆ ಮಾಡಿದ್ದಾರೆ.

ಮೇಲಿನ ತ್ರಿಮೂರ್ತಿಗಳಿಲ್ಲಿ ರಾಮಾಯಣ ಕಥೆ ವಿವಿಧ ಮುಖಗಳಲ್ಲಿ ಕಂಡು, ಅದಕ್ಕೆ ತಮ್ಮ ಪ್ರತಿಭಾ ಶಕ್ತಿಯನ್ನು ಸೇರಿಸಿ ಕಾವ್ಯನಾಟಕ ಕಥೆಗಳನ್ನು ರಚಿಸಿ ನೂರಾರು ಜನ ಜಗತ್ತಿನಾದ್ಯಂತ ಆಗಿ ಹೋಗಿದ್ದಾರೆ, ಆಗುತ್ತಿದ್ದಾರೆ. ಮುಂದೆಯೂ ಹುಟ್ಟಿ ಬರುತ್ತಾರೆ. ಏಕೆಂದರೆ ರಾಮಾಯಣ ಚಿನ್ನದ ಗಣಿ ಆನಂದಸಾಗರ, ಅಗೆದಷ್ಟು ಚಿನ್ನ ಮೊಗೆದಷ್ಟು ನೀರು.

ಭಾರತದಲ್ಲಂತೂ ಎಲ್ಲ ಭಾಷೆಗಳಲ್ಲೂ ರಾಮಾಯಣ ರಚಿತವಾಗಿದೆ.

ಕವಿ ನಾಟಕಕಾರರಷ್ಟೇ ಅಲ್ಲ, ಅನೇಕ ವಾಗ್ಗೇಯಕಾರರು ರಾಮನ ಗುಣಗಾನಮಾಡಿ ಜನಮಾನಸವನ್ನು ಭಕ್ತಿರಸದಿಂದ ತೋಯಿಸಿದ್ದಾರೆ. ತ್ಯಾಗರಾಜರು, ಭದ್ರಾಚಲರಾಮದಾಸರು, ಕನಕದಾಸರು, ಪುರಂದರದಾಸರು ಮುಂತಾದವರು ರಾಮನನ್ನು ಧ್ಯಾನಿಸಿ ಮುಕ್ತಿ ಪಡೆದಿದ್ದಾರೆ.

**"ಜೈ ಶ್ರೀರಾಮ್"**

●

# My Experience Viewing Ramayana



I enjoyed watching Ramanand Sagar's Ramayana a lot. I have read and heard Ramayana many times but this was the first time that I could actually visualize it. I think that the two best parts of Ramayana are the songs and the actors. The songs and music were very engaging and the lyrics told the story beautifully. The actors acted really well too. My favorite characters were Rama, played by Arun Govil, Sita, by Deepika Chikhalia, Lakshman, acted by Sunil Lahri, and Ravana, played by Arvind Trivedi. The best actors were Ram and Ravan. During this COVID 19 lockdown, Ramanda Sagar's Ramayana was something I looked forward to every day.

I learnt a lot of stuff from this Ramayana serial that I can apply in real life and new stuff I didn't know about Ramayana. Before Ramayana I couldn't speak or understand hindi that well, but now after watching Ramayana I can understand hindi way better than before. I also learnt a lot about dharma. Ramayan made me think a lot more about dharma and I started questioning my parents a lot on what dharma is all about, Ramayana, and other related topics. Rama also treats all three of his mothers, Kausalya, Kaikeyi and Sumitra respectfully no matter what they have done.

There were many new things I learnt about Ramayana. I didn't know that Malyavan existed or that he was Ravana's grandfather and tried to persuade him into returning Sita. I also didn't know that Kumbakarna and Indrajit tried to persuade Ravana, to free Sita and to not end the demon race of his lust for a woman. Rama took some of Ayodhya's earth with him for the whole fourteen years of exile and prayed to it every day was another thing I didn't know. This taught me that everyone should respect their mother-land. One last thing I didn't know was that when Hanuman goes to get Sanjeevani a rakshasa called Kalanemi tries to stop him but gets killed and when Hanuman is heading back he meets Bharata and tells him everything that had happened to Shri Ram. There are many other things I learnt from and about Ramayan. One of the things I learnt that I like the best is the new shloka I learnt from my grandfather on mother and motherland from ramayana which goes like this


**Api swarnamayi Lanka name lakshmana rochate |**
**Janani janma bhoomischa swarga dapi gariyasi ||**



I love watching Ramanand Sagars Ramayana and I am so happy that I had a chance to watch this fantastic serial.

✍ **Rishika Gautham**
11 years old
5th grade student
California, USA

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026
Date of Publishing : 17-05-2020 Date of Posting 20h or 21st of every month Posted at Periodical Rate

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವಿಭಾಗಗಳ ಆನ್ಲೈನ್ ಸಭೆಗಳು





ದ್ವಿತೀಯ ಪಿಯುಸಿ ಮೌಲ್ಯಮಾಪನ ರಾಜ್ಯಾದ್ಯಂತ ಪ್ರಾರಂಭವಾಗಿದ್ದು. ಇಂದು ಸೇವಾ ಭಾರತಿ ಹಾಗೂ ಪ್ರಾಚಾರ್ಯರ ಸಂಘದ ವತಿಯಿಂದ ಮೌಲ್ಯಮಾಪನ ಕೇಂದ್ರಗಳಿಗೆ ಭೇಟಿ ನೀಡಿ ಸ್ಯಾನಿಟೈಸರ್ ಹಾಗೂ ಮಾಸ್ಕ್ ಗಳನ್ನು ವಿತರಿಸಲಾಯಿತು.

**IF UNDELIVERED PLEASE RETURN TO SENDER**

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com